ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 47 ನವಂಬರ್ 17-23, 1997 ಬೆಲೆ ರೂ. 2.00



ಶಾಲೆಯ ಮಕ್ಕಳಿಗೆ ಮಾಸ್ತರರ ಬಡಿಗೆಯಾದರೆ ಜನತಾದಳ ಮುಖಂಡರಿಗೆ ಯಾರ ಬಡಿಗೆ?

ಎನ್.ಕೆ.ಉಪಾಧ್ಯಾಯ

ಶಾಲಾ ಮಕ್ಕಳು ಸರಿಯಾಗಿ ಅಭ್ಯಾಸ ಮಾಡದಿರುವಾಗ ಅಶಿಸ್ತಿನಿಂದಿರುವಾಗ, ಜಗಳ ವಾಡುತ್ತಿರುವಾಗ ಅವರೆಲ್ಲ ಒಳ್ಳೆ ಮಕ್ಕಳಾಗಿ ಬುದ್ಧಿವಂತ ನಾಗರೀಕರಾಗಿ ಬೆಳೆದು ಬರಲೆಂಬ ಉದ್ದೇಶದಿಂದ ತಮ್ಮ ಕೈಯಲ್ಲಿ ಬಡಿಗೆ(ಬೆತ್ತ) ಉಪಯೋಗ ಮಾಡುತ್ತಾರೆ. ಎಷ್ಟೋ ಮಕ್ಕಳು ಶಾಲಾ ಮಾಸ್ತರರ ಉಪದೇಶಕ್ಕೆ ತಲೆ ಬಾಗಿಯೋ ಬಡಿಗೆ ಪೆಟ್ಟಿಗೆ ಹೆದರಿಯೋ ಒಳ್ಳೆ ಮಕ್ಕಳಾಗಿ ಬೆಳೆದಿರುವ ಉದಾಹರಣೆಗಳಿವೆ. ದೇಶದಲ್ಲಿ ಸಂಯುಕ್ತ ರಂಗದ ಪರವಾಗಿ ಪ್ರಧಾನ ಮಂತ್ರಿ ಸ್ಥಾನ ಗಿಟ್ಟಿಸಿ ಒಂದು ಪ್ರಮುಖ ರಾಜಕೀಯಪಕ್ಷವಾಗಿರುವ, ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಜನತಾದಳದ ಮುಖಂಡರಿಗೆ ಯಾರ ಬಡಿಗೆ ಏಟಿನಿಂದಲೂ ಬುದ್ಧಿ ಬರುವಂತೆ ಕಂಡುಬರುತ್ತಿಲ್ಲ. ಇದಕ್ಕೆ ಇತ್ತೀಚಿನ ಕರ್ನಾಟಕದಲ್ಲಿಯ ಜನತಾದಳ ಮುಖಂಡರ ಅದರಲ್ಲೂ ಮುಖ್ಯವಾಗಿ ದೇವೇಗೌಡರ ಪಾತ್ರ ಇದಕ್ಕೆ ಉದಾಹರಣೆಯೆಂದರೆ ತಪ್ಪೇನಾಗಲಾರದು.

ಕರ್ನಾಟಕ, ಬಿಹಾರ, ಒರಿಸ್ಸಾಗಳಲ್ಲಿ ಜನತಾದಳ ಬಲಿಷ್ಟವಾಗಿದ್ದು ಅಧಿಕಾರವನ್ನು ನಡೆಸುತಿತ್ತು. ಬಿಜುಪಟ್ನಾಯಕ್ ನಿಧನದ ನಂತರ ಒರಿಸ್ಸಾದಲ್ಲಿ ಜನತಾದಳಕ್ಕೆ ಹಿನ್ನಡೆಯಾಯಿತು. ಬಿಹಾರದಲ್ಲಿ ಲಲ್ಲೂ ಪ್ರಸಾದ್ ಯಾದವ್ ಪ್ರಬಲ ವ್ಯಕ್ತಿಯಾಗಿ ಮೆರೆಯುತ್ತಿದ್ದಾರೆ. ಜನತಾದಳ ಬಿಟ್ಟು ರಾಷ್ಟ್ರೀಯ ಜನತಾದಳ ರಚನೆ ಮಾಡಿ ಬಿಹಾರಿನಲ್ಲಿ ಜನತಾ ದಳ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿದೆ. ಈಗ ಇರುವುದೇ ಕರ್ನಾಟಕ ಒಂದೇ.

ಹಿಂದಿನ ಲೋಕ ಸಭೆ ಚುನಾವಣೆಯ ನಂತರ ಯಾವ ಪಕ್ಷಕ್ಕೂ ಸರಕಾರ ರಚಿಸುವಲ್ಲಿ ಸದಸ್ಯರ ಬಲ ಇಲ್ಲದಾಗ ಬಿಜೆಪಿ ಮತ್ತು ಕಾಂಗ್ರೆ ಅಧಿಕಾರ ಗ್ರಹಣ ಮಾಡುವುದನ್ನು ತಪ್ಪಿಸಲು ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತಿತರ ಎಡಪಕ್ಷಗಳು ಸೇರಿ ಜನತಾದಳ, ತೆಲುಗುದೇಶಂ, ಡಿ.ಎಂ.ಕೆ. ತಮಿಳು ಮಾನಿಲಾ ಕಾಂಗ್ರೆಸ್, ಅಸ್ಸಾಂ ಗಣಪರಿಷತ್ ಮೊದಲಾದ ಬಿಜೆಪಿ ಮತ್ತು ಕಾಂಗ್ರೆಯನ್ನು ವಿರೋಧಿಸುವ ಪಕ್ಷಗಳನ್ನೆಲ್ಲ ಒಟ್ಟುಗೂಡಿಸಿ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಸಂಯುಕ್ತ ರಂಗ ರಚಿಸಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದೆ. ಸಂಯುಕ್ತ ರಂಗದ ಅಂಗ ಪಕ್ಷಗಳೊಳಗೆ ಏನೇ ಭಿನ್ನಾಭಿಪ್ರಾಯವಿದ್ದರೂ ಅವುಗಳನ್ನು ಚರ್ಚೆ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಿ ಸಂಯುಕ್ತ ರಂಗದ ಮೇಲೆ ಜನರ ವಿಶ್ವಾಸ ಕುದುರಿಸುವ ರೀತಿಯಲ್ಲಿ ಕೆಲಸ ಮುಂದುವರಿಸಿದೆ. ಸಂಯುಕ್ತವಾಗಿಯೇ ಬಿಜೆಪಿ ಮತ್ತು ಕಾಂಗ್ರೆಯನ್ನು ಸಮರ್ಪಕವಾಗಿ ಎದುರಿಸುವ ಸಂಯುಕ್ತ ರಂಗವನ್ನು ಬಲಿಷ್ಟಗೊಳಿಸುವತ್ತ ಪ್ರಯತ್ನ ಮುಂದುವರಿಸಿದೆ.

ಕರ್ನಾಟಕದಲ್ಲಿಯಾದರೂ ತಮ್ಮ ಪಕ್ಷವನ್ನು ಬಲಿಷ್ಟಗೊಳಿಸಬೇಕು, ಸಂಯುಕ್ತ ರಂಗ ಕಾಂಗ್ರೆ ಮತ್ತು ಬಿಜೆಪಿಗೆ ಪರ್ಯಾಯ ಶಕ್ತಿಯಾಗಿ ಬೆಳೆದು ಬರುವಂತೆ ಪ್ರಚಾರ ಪ್ರಕ್ಷೋಬೆ ನಡೆಸಬೇಕು ಸರಕಾರ ಜನಪರ ನೀತಿಯನ್ನು ಅನುಸರಿಸಿ ಜನಪ್ರಿಯವಾಗುವಂತೆ ಮಾಡಬೇಕು ಎಂಬ ಮಹೋದ್ದೇಶವನ್ನು ಮುಂದಿಟ್ಟು ಜನತಾದಳದ ಮುಖಂಡರು ಕೆಲಸ ಮುಂದುವರಿಸುವ ಅಗತ್ಯವಿದೆ. ಆದರೆ ಕರ್ನಾಟಕದ ಜನತಾದಳ ಜಾತಿ, ಉಪಜಾತಿಗಳ ಅಧಿಕಾರ ಗ್ರಹಣಕ್ಕಾಗಿ ಕಾದು ನಿಂತಿರುವ ಮುಖಂಡರ ಕೊಂಪೆಯಾಗಿದೆ. ದೇವೇಗೌಡರು ಬೆಂಗಳೂರಿಗೆ ಬಂದಾಗಲೆಲ್ಲಾ ಜೆ.ಎಚ್.ಪಟೇಲ ವಿರೋಧಿ ಗುಂಪಿನವರು ದೇವೇಗೌಡರ ಮಗ ರೇವಣ್ಣರ ಅನುಗ್ರಹದಲ್ಲಿ ಸೇರಿ ವಿಚಾರ ವಿನಿಮಯ ಮಾಡುವ ಪರಿಪಾಠ ಬೆಳೆದುಬಂದಿದೆ. ದೇವೇಗೌಡರು ದಿಲ್ಲಿಯಿಂದ ಬಂದಾಗ ಬೇಕಾದವರು ಅವರನ್ನು ಭೇಟಿಯಾಗಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಭೇಟಿ ದೊಡ್ಡ ಗೊಂದಲ ಉಂಟುಮಾಡಿದೆ. ಮೊನ್ನೆ ನಡೆದ ಸಭೆಯಲ್ಲಿ 60 ಕ್ಕಿಂತಲೂ ಹೆಚ್ಚು ಶಾಸಕರು ದೇವೇಗೌಡರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿ ಮಂತ್ರಿ ಮಂಡಲದ ಪುನರ್ರಚನೆ, ಜೆ.ಎಚ್.ಪಟೇಲರನ್ನು ಶಾಸಕರ ಮುಖಂಡತ್ವದಿಂದ ಬದಲಾಯಿಸುವುದು ಮುಂತಾದ ವಿಷಯಗಳ ಕುರಿತು ಗಂಭೀರ ಚರ್ಚೆ ನಡೆಯಿತಂತೆ. ಇದು ಜನತಾದಳದಲ್ಲಿ ಮತ್ತು ಸರಕಾರದಲ್ಲಿ ಬಿರುಗಾಳಿಯನ್ನು ಎಬ್ಬಿಸಿದೆ. ರಾಜ್ಯದ ಜನತಾದಳದಲ್ಲಿ ಉದ್ಭವಿಸಿರುವ ಸಮಸ್ಯೆಗಳಿಗೆ ಪಕ್ಷದ ಅಧ್ಯಕ್ಷ ಬಿ.ಎಲ್.ಶಂಕರ್ ಮತ್ತು ಶಾಸಕಾಂಗ ಪಕ್ಷದ ಮುಖಂಡ ಜೆ.ಎಚ್.ಪಟೇಲರು ಪರಿಹಾರ ಕಂಡು ಹಿಡಿಯಬೇಕಲ್ಲದೆ ದೇವೇಗೌಡರಲ್ಲ. ದೇವೇಗೌಡರ ಈ ವರ್ತನೆ ಜನರಲ್ಲಿ ಸಂಶಯಕ್ಕೆ ಎಡೆ ಮಾಡಿಕೊಡುತ್ತಿದೆ. ತಮ್ಮ ಮಗ ರೇವಣ್ಣರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವ ಹುನ್ನಾರ ನಡೆದಿರಬೇಕೆಂಬ ಅರ್ಥ ಜನರಲ್ಲುಂಟಾಗಿದೆ. ಇಂಥ ಭಾವನೆಯನ್ನಳಿಸಲು ನಾನಾತರ ದೊಂಬರಾಟ ನಡೆಸಲಾಯಿತು. ಜೆ.ಎಚ್.ಪಟೇಲರ ಮುಖಂಡತ್ವವನ್ನು ತಾನೇನೂ ವಿರೋಧಿಸುತ್ತಿಲ್ಲ ಎಂಬ ಮಾತನ್ನೂ ದೇವೇಗೌಡರ ಬಾಯಿಯಿಂದ ಉದುರಿಸಲಾಯಿತು. ಬಹುಶಃ ಮುಂದಿನ ಜನವರಿ - ಫೆಬ್ರುವರಿ ಹೊತ್ತಿಗೆ ಲೋಕಸಭೆಗೆ ಚುನಾವಣೆಗಳು ಬರುವ ಇಂಗಿತ ನೀಡಿರುವ ದೇವೇಗೌಡರು ಕಳೆದ ಬಾರಿಗಿಂತ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ದಿಕ್ಕಿನಲ್ಲಿ ಪಕ್ಷ ಸಂಘಟಿತ ಪ್ರಯತ್ನ ನಡೆಸಲು ಸಜ್ಜಾಗಬೇಕೆಂದು ಹೇಳಿದ್ದಾರೆ. ಆದರೆ ರಾಜ್ಯದ ಜನತಾದಳ ಮುಖಂಡರ ನಡತೆ, ಕಾರ್ಯವೈಖರಿ, ಆಡಳಿತಾತ್ಮಕ ಕ್ರಮಗಳು ಇದಕ್ಕೆ ಪೂರಕವಾಗಿಲ್ಲ.

ಕಾಂಗ್ರೆ ಅಧ್ಯಕ್ಷ ಸೀತಾರಾಂ ಕೇಸರಿಯವರು ತಮ್ಮ ಪಕ್ಷದ ಕಟ್ಟಡದ ಉದ್ಘಾಟನೆಗೆ ಬೆಂಗಳೂರಿಗೆ ಬಂದಾಗ ಸಾರ್ವಜನಿಕ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸಲಾಗಿತ್ತು. ಶರದ್ ಪವಾರ್ ಅವರು ಕರ್ನಾಟಕ ಕಾಂಗ್ರೆಸ್ ಬಲಿಷ್ಟವಾಗಿದೆ ಎಂದು ಹೇಳಿದ್ದಾರೆ. ತಮ್ಮ ಪಕ್ಷ ಅಧಿಕಾರಕ್ಕೆ ಬರುವ ಬಯಕೆ ಹೊಂದಿದ್ದಾರೆ. ಉತ್ತರ ಪ್ರದೇಶದ ಬೆಳವಣಿಗೆ, ಪಕ್ಷಾಂತರ ಹಾವಳಿಯಿಂದಾಗಿ ಅಧಿಕಾರದ ಆಮಿಷಗಳಿಂದಾಗಿ ಕೇಂದ್ರದಲ್ಲಿಯೂ ತಾವು ಅಧಿಕಾರಕ್ಕೆ ಬರುತ್ತೇವೆಂಬ ಅಡ್ವಾನಿಯವರ ಹೇಳಿಕೆ, ಕರ್ನಾಟಕದಲ್ಲಿಯೂ ತಾವೂ ಪಕ್ಷಾಂತರ ಮಾಡಿಸಿ ಅಧಿಕಾರಕ್ಕೆ ಬರುತ್ತೇವೆಂಬ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪನವರ ನಿರೀಕ್ಷೆಗಳೆಲ್ಲಾ ದೇವೇಗೌಡರ ಹಾಗೆಯೇ ಜನತಾದಳ ಮುಖಂಡರ ಕಣ್ಣು ತೆರಿಸುತ್ತದೆಂದು ಆಶಿಸುತ್ತೇವೆ. ನಮ್ಮ ರಾಜ್ಯದ ಜನತಾದಳ ಮುಖಂಡರು ಅನುಸರಿಸುತ್ತಿರುವ ನೀತಿ ಜನತಾದಳಕ್ಕೂ, ಸಂಯುಕ್ತ ರಂಗಕ್ಕೂ ಹಾಗೆಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಎಡಪಕ್ಷಗಳೂ ನಡೆಸುತ್ತಿರುವ ಪ್ರಯತ್ನಕ್ಕೂ ಶೋಭಿಸುವುದಿಲ್ಲ, ಯಾರೇ ಆಗಲಿ ಅಧಿಕಾರಕ್ಕಾಗಿಯೇ ಹಾತೊರೆಯುತ್ತಿರುವ ತಮ್ಮ ಬೆಂಬಲಿಗರಿಗೆ ದೇವೇಗೌಡರು ಸರಿಯಾಗಿ ಬುದ್ಧಿ ಹೇಳಿ ಅವರ ನೀತಿಯಲ್ಲಿ ನಡವಳಿಕೆಯಲ್ಲಿ ಬದಲಾವಣೆ ಉಂಟುಮಾಡುವುದು ಅತ್ಯಗತ್ಯ. ಸಣ್ಣ ಮಕ್ಕಳಾದರೂ ಮಾಸ್ತರ ಬಡಿಗೆಗೆ ಹೆದರುತ್ತವೆ. ಅದೇ ಅಧಿಕಾರ ಪಿಪಾಸೆಗೆ ಬಲಿಯಾಗಿರುವ ಈ ಜನತಾದಳ ಶಾಸಕರು ಅಧಿಕಾರಕ್ಕಾಗಿ ಎಂಥ ಬಡಿಗೆ ಏಟು ತಿನ್ನಲೂ ಸಿದ್ಧರಿರುವಂತೆ ಕಂಡುಬರುತ್ತದೆ. ಅವರೆಲ್ಲ ತಮ್ಮ ಅಧಿಕಾರ ಲಾಲಸೆಯನ್ನು ತೊರೆದು ಕಾಂಗ್ರೆ-ಬಿಜೆಪಿಯನ್ನು ಸೋಲಿಸಿ ಸಂಯುಕ್ತ ರಂಗದ ಬದಲಿ ವ್ಯವಸ್ಥೆ ತರಲಿಕ್ಕೆ ಪ್ರಯತ್ನ ಮಾಡಬೇಕು. ಹಾಗೆ ಮಾಡದಿದ್ದರೆ ಮತದಾರರ ದೊಡ್ಡ ಬಡಿಗೆ ಇವರಿಗೆ ಸರಿಯಾಗಿ ಬುದ್ಧಿ ಕಲಿಸೀತು. ಹಾಗಾಗಬಾರದೆಂದು ನಮ್ಮ ಅನಿಸಿಕೆ.

ಅನಗತ್ಯ ವಿವಾದ ತಪ್ಪಿಸಲು ಜೈನ್ ವರದಿ ಮಂಡಿಸಿ

ಸುರ್ಜಿತ್ ಸಲಹೆ

ರಾಜೀವ್ ಗಾಂಧಿ ಹತ್ಯೆಯ ತನಿಖೆ ನಡೆಸಿರುವ ಜೈನ್ ಆಯೋಗದ ವರದಿಯ ಬಗ್ಗೆ ಅನಗತ್ಯ ವಿವಾದಗಳನ್ನು ತಪ್ಪಿಸಲು ಚಳಿಗಾಲದ ಅಧಿವೇಶನದ ಮೊದಲ ದಿನವೇ ಅದನ್ನು ಸಂಸತ್ತಿನ ಮುಂದಿಡಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಆಗ್ರಹಪಡಿಸಿದ್ದಾರೆ. ಆದರೆ ಈ ವರದಿಯಲ್ಲಿದೆಯೆನ್ನಲಾದ ಅಂಶಗಳ ಬಗ್ಗೆ ಟಿಪ್ಪಣಿ ಮಾಡಬೇಕೆಂದು ಪತ್ರಕರ್ತರು ಕೇಳಿದಾಗ ಆ ವರದಿಯನ್ನು ಬಹಿರಂಗ ಪಡಿಸಿದ ಮೇಲೆಯೇ ಟಿಪ್ಪಣಿ ಮಾಡುವುದಾಗಿ ಅವರು ಸ್ಪಷ್ಟಪಡಿಸಿದರು. ಸುರ್ಜಿತ್ ಸಿಪಿಐ(ಎಂ) ಕೇಂದ್ರ ಸಮಿತಿಯ ಮೂರು ದಿನಗಳ ಸಭೆಯ ನಂತರ ಕಿಕ್ಕಿರಿದ ಪತ್ರಿಕಾಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಕೇಂದ್ರ ಸಮಿತಿಯ ಈ ಸಭೆಯ ಮುಂದಿದ್ದ ಪ್ರಧಾನ ಕಾರ್ಯಕ್ರಮವೆಂದರೆ ಫೆಬ್ರವರಿ 1998 ರಲ್ಲಿ ನಡೆಯಲಿರುವ ಸಿಪಿಐ(ಎಂ) ನ ಹದಿನಾರನೇ ಮಹಾಧಿವೇಶನದ ಕರಡು ರಾಜಕೀಯ ಠರಾವನ್ನು ಅಂತಿಮಗೊಳಿಸುವುದು. ಅದನ್ನೀಗ ವಿಧ್ಯುಕ್ತವಾಗಿ ನವಂಬರ್ 20 ರಂದು ಬಿಡುಗಡೆಗೊಳಿಸಲಾಗುವುದು.

ಪತ್ರಿಕಾ ಸಮ್ಮೇಳನದಲ್ಲಿ ಜೈನ್ ಆಯೋಗದ ವರದಿಯಲ್ಲಿ ಇದೆಯೆನ್ನಲಾದ ಡಿ.ಎಂ.ಕೆ. - ವಿರೋಧಿ ಟಿಪ್ಪಣಿಗಳ ಬಗ್ಗೆ ಈಗ ಎದ್ದಿರುವ ವಿವಾದ, ಕೆಲವು ಕಾಂಗ್ರೆಸ್(ಐ) ಮುಖಂಡರ ಕೋಪದ ಪ್ರತಿಕ್ರಿಯೆ ಹಾಗೂ ಡಿ.ಎಂ.ಕೆ.ಸಂಯುಕ್ತ ರಂಗದಲ್ಲೇ ಉಳಿದರೆ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಳ್ಳುವುದೆಂಬ ಪತ್ರಿಕೆ ಗಳಲ್ಲಿನ ಊಹಾಪೋಹ-ಈ ಬಗ್ಗೆ ಪ್ರಶ್ನೆಗಳ ಸುರಿಮಳೆಯಾಯಿತು.

ಪತ್ರಕರ್ತರು ಮತ್ತೆ-ಮತ್ತೆ ಪ್ರಯತ್ನಿಸಿದರೂ ಸುರ್ಜಿತ್ ಈ ವಿವಾದದಲ್ಲಿ ಸೇರಿಕೊಳ್ಳಲು ನಿರಾಕರಿಸಿದರು. ಸದನದಲ್ಲಿ ವರದಿಯನ್ನು ಮಂಡಿಸುವವರೆಗೆ ಯಾವುದೇ ಟಿಪ್ಪಣಿ ಸಾಧ್ಯವಿಲ್ಲ ಎಂದು ಮತ್ತೆ-ಮತ್ತೆ ಹೇಳಿದರು. ಕಾಂಗ್ರೆಸ್(ಐ) ಮುಖಂಡರ ಪ್ರತಿಕ್ರಿಯೆಯ ಬಗ್ಗೆ ಮಾತನಾಡುತ್ತಾ ಅವರು ಕಾಂಗ್ರೆಸ್ ಪಕ್ಷದಲ್ಲಿ ಹಲವು ಮುಖಂಡರಿದ್ದಾರೆ ಅವರು ಪತ್ರಿಕೆಗಳತ್ತ ಧಾವಿಸಿ ವರದಿಯನ್ನು ಮುಂದಿಡುವ ಮೊದಲೇ ಟಿಪ್ಪಣಿ ಮಾಡುವುದರ ಮೇಲೆ ಕಡಿವಾಣ ಹಾಕಬೇಕು ಎಂದರು.

ವರದಿಯಲ್ಲಿ ಸಾಕ್ಷ್ಯಗಳ ಅಭಾವ ವಿದೆಯೆಂದು ಕೇಂದ್ರ ಗೃಹ ಮಂತ್ರಿಗಳು ಮಾಡಿದರೆನ್ನಲಾದ ಟಿಪ್ಪಣಿಗಳು ಬಗ್ಗೆ ಕೇಳಿದಾಗಲೂ ಸುರ್ಜಿತ್ "ನಾನು ಸಾಕ್ಷ್ಯಗಳ ಪರಿಶೀಲನೆ ಮಾಡಲು ಹೋಗುವುದಿಲ್ಲ ಮೊದಲು ವರದಿ ನೋಡೋಣ" ಎಂದರು.

ಡಿ.ಎಂ.ಕೆ. ಯ ಭವಿಷ್ಯದ ಬಗ್ಗೆ ಕೇಳಿದ ಪ್ರಶ್ನೆಗೂ ಸುರ್ಜಿತ್ 'ಇದುವರೆಗೆ ಯಾರೇ ಆಗಲಿ ಸಂಯುಕ್ತ ರಂಗದಿಂದ ಹೊರಗೆ ಹೋಗುವ ಪ್ರಶ್ನೆಯಿಲ್ಲ. ಡಿ.ಎಂ.ಕೆ. ರಂಗದ ಒಂದು ಭಾಗ" ಎಂದರು.

ಕಾಂಗ್ರೆಸ್ಸಿನ ಬೆದರಿಕೆ

ಸಂಯುಕ್ತ ರಂಗದ ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುಕೊಳ್ಳುವ ಕಾಂಗ್ರೆಸ್ಸಿನ ಬೆದರಿಕೆಯ ಬಗ್ಗೆ ಪತ್ರಿಕೆಗಳ ಲ್ಲಿನ ಊಹಾಪೋಹಗಳನ್ನು ಗಂಭೀರ ವಾಗಿ ತಗೊಳ್ಳಲು ನಿರಾಕರಿಸಿದ ಸುರ್ಜಿತ್ "ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಮುಖಂಡರು ಬೇರೆ ಬೇರೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆ ಬಗ್ಗೆ ನಾನೇನೂ ಟಿಪ್ಪಣಿ ಮಾಡುವುದಿಲ್ಲ' ಎಂದರು. ಮುಂದುವರಿದು "ನಾನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯದ ಆಧಾರ ದಲ್ಲಷ್ಟೇ ಯೋಚಿಸುತ್ತೇನೆ. ನವಂಬರ್ 9 ರಂದು ಈ ಸಮಿತಿ ಸಭೆ ಸೇರಿತ್ತು. ಆದರ ಹೇಳಿಕೆ ಬೆಂಬಲ ಹಿಂತೆಗೆದುಕೊಳ್ಳುವ ಬಗ್ಗೆ ಏನೂ ಹೇಳಲಿಲ್ಲ. ವಾಸ್ತವವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಂಸತ್ತಿನ ಮುಂದಿನ ಅಧಿವೇಶನದ ಮೊದಲ ದಿನವೇ ಜೈನ್ ಆಯೋಗದ ವರದಿಯನ್ನು ಮಂಡಿಸಲು ಸಂಯುಕ್ತ ರಂಗ ಸರಕಾರ ಒಪ್ಪಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದೆ" ಎಂದು ಸುರ್ಜಿತ್ ಹೇಳಿದರು.

ಒಂದು ಸಮನ್ವಯ ಸಮಿತಿ ಬೇಕೆಂಬ ಕಾಂಗ್ರೆಸ್ಸಿನ ಒತ್ತಾಯದ ಬಗ್ಗೆ ಮಾತನಾಡುತ್ತಾ ಸುರ್ಜಿತ್ "ಕಾಂಗ್ರೆಸ್ ಹೊರಗಿನಿಂದ ಸರಕಾರವನ್ನು ಬೆಂಬಲಿಸುತ್ತಿರುವುದರಿಂದ ಸರಕಾರೀ ಮಟ್ಟದಲ್ಲಿ ಒಂದು ಸಮನ್ವಯ ಸಮಿತಿ ಬೇಕೆಂದು ನಾವು ಸದಾ ಹೇಳುತ್ತಾ ಬಂದಿದ್ದೇವೆ, ಆದರೆ ಸಂಯುಕ್ತ ರಂಗದ ಮಟ್ಟದಲ್ಲಲ್ಲ" ಎಂದರು.

ಕಾಂಗ್ರೆಸ್ಸಿನ ಸ್ಥಿತಿ - ತಂತ್ರಗಳ ರಾಜಕೀಯವೇಕೆ?


ಈ ಮೊದಲು ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ನಂತರ ಹೊರಡಿಸಿದ ಹೇಳಿಕೆಯ ಬಗ್ಗೆ ವಿವರ ನೀಡುತ್ತಾ ಸುರ್ಜಿತ್ ಕಾಂಗ್ರೆಸ್(ಐ) ಒಂದು ಪಕ್ಷವಾಗಿ ಏಕೆ ಹ್ರಾಸಗೊಳ್ಳುತ್ತಿದೆ, ಒಳಗಿನಿಂದಲೇ ಟೊಳ್ಳಾಗುತ್ತಿದೆ ಎಂಬ ಬಗ್ಗೆ ಅವರು ಗಂಭೀರವಾಗಿ ಯೋಚಿಸಬೇಕು ಎಂದರು. ಕಾಂಗ್ರೆಸ್ ಪಕ್ಷಕ್ಕೆ ಏನಾಗುತ್ತಿದೆ? ಧರ್ಮನಿರಪೇಕ್ಷತೆ, ದೇಶ ಪ್ರೇಮದ ಬಗ್ಗೆ ಅವರು ಮಾತನಾಡುತ್ತಾರೆ. ಆದರೆ ಕಾಂಗ್ರೆಸ್ಸಿಗರು ಬಿಜೆಪಿ ಸೇರಿಕೊಳ್ಳಲೂ ಸಿದ್ಧರಿದ್ದಾರೆ. ಇದನ್ನು ಸರಿಪಡಿಸಬೇಕು. ಹೀಗೇಕಾಗುತ್ತಿದೆ, ತಾವೇಕೆ ಕ್ರಮೇಣ ಸಾಮೂಹಿಕ ನೆಲೆಯನ್ನು ಕಳಕೊಳ್ಳುತ್ತಿದ್ದೇವೆ ಎಂಬ ಬಗ್ಗೆ ಅವರು ಸ್ವಯಂ ಪರಿಶೋಧನೆ ನಡೆಸಬೇಕು" ಎಂದು ಸುರ್ಜಿತ್ ಹೇಳಿದರು. ಕೋಮುವಾದದೊಂದಿಗೆ ರಾಜಿ ಮಾಡಿಕೊಂಡು ಕಾಂಗ್ರೆಸ್ ಬದುಕುಳಿಯಲು ಸಾಧ್ಯವಿಲ್ಲ. ಹೊಸ ಆರ್ಥಿಕ ನೀತಿಗಳೆಂಬ ಧೋರಣೆಗಳನ್ನು ಅನುಸರಿಸುವುದರಿಂದಲೂ ಸಾಧ್ಯವಿಲ್ಲ. ಅದು ಪುನರುಜ್ಜೀವನಗೊಳ್ಳ ಬಯಸುವುದಾದರೆ ತಂತ್ರಗಳ ರಾಜಕೀಯ ಕ್ಕಿಳಿಯುವ ಬದಲು ಈ ಆಳವಾದ ಪ್ರಶ್ನೆಗಳ ಬಗ್ಗೆ ಯೋಚಿಸಬೇಕು ಎಂದು ಸುರ್ಜಿತ್ ಸಲಹೆ ಮಾಡಿದರು.

ಎಡಪಕ್ಷಗಳ ಅಜೆಂಡಾಕ್ಕೆ ಏಕೆ ತಿರಸ್ಕಾರ?

ಸಂಯುಕ್ತ ರಂಗ ಸರಕಾರ ಹಿಂದಿನ ಆರ್ಥಿಕ ನೀತಿಗಳನ್ನೇ ಮುಂದುವರಿಸುತ್ತಿದೆ, ಎಡಪಕ್ಷಗಳ ಒತ್ತಾಯಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿದೆ ಎಂದು ಸುರ್ಜಿತ್ ಬಲವಾಗಿ ಖಂಡಿಸಿದರು. ಈ ಸಂಬಂಧದಲ್ಲಿ ಭಾರತ 2000 ಇಸ್ವಿಯೊಳಗೆ ಬಂಡವಾಳ ಖಾತೆಯ ಪರಿವರ್ತನೀಯತೆ ತರುತ್ತದೆ ಎಂಬ ಹಣಕಾಸು ಮಂತ್ರಿಗಳ ಭರವಸೆಯನ್ನು ತೀಕ್ಷ್ಣವಾಗಿ ಟೀಕಿಸಿದರು. ಇಂತಹ ಒಂದು ಅಪಾಯಕಾರಿ ಪ್ರಸ್ತಾಪವನ್ನು ತಿರಸ್ಕರಿಸುವ ಒಂದು ಧೋರಣೆಯ ಹೇಳಿಕೆಯನ್ನು ಸರಕಾರ ನೀಡಬೇಕೆಂದು ಅವರು ಒತ್ತಾಯಿಸಿದರು.

ಸಮಾನ ಕನಿಷ್ಟ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ "ನಾವು ಅವರನ್ನು ಕೇಳಿದ್ದೇವೆ - ನೀವು ನಿಮ್ಮ ಅಜೆಂಡಾದ ಪ್ರಕಾರ ಮುಂದುವರಿಯುತ್ತಿದ್ದೀರಿ, ನಮ್ಮ ಅಜೆಂಡಾ ಏನಾಯ್ತು ಎಂದು" ಎಂದರು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಬಡಜನರ ರೇಖೆಯ ಕೆಳಗಿರುವವರಿಗೆ ಅರ್ಧ ಬೆಲೆಗಳಲ್ಲಿ ೨೦ ಕೆ.ಜಿ. ಆಹಾರ ಧಾನ್ಯ ಒದಗಿಸುವ ಸಮಾನ ಕನಿಷ್ಟ ಕಾರ್ಯಕ್ರಮದ ವಚನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಎಡಪಕ್ಷಗಳು ಸತತ ಒತ್ತಡ ತಂದರೂ ಸರಕಾರ ಇದನ್ನು ಬುಡ ಮೇಲು ಮಾಡಲು ಒಂದಿಲ್ಲೊಂದು ನೆಪಗಳನ್ನು ಕೊಡುತ್ತಾ ಬರುತ್ತಿದೆ. ಕೃಷಿ

ಪುಟ 3 ನೋಡಿ



ಬರದ ಸಾಧನೆ ಬಯಲಿಗೆಳೆದ ರೈತ ಸಂಘ

ಕಲ್ಬುರ್ಗಿ ಜಿಲ್ಲೆ ಬರದಿಂದ ತತ್ತರಿಸುತ್ತಿದೆ. ಜಿಲ್ಲೆಗೆ ಬರ ಕಾಲಿಟ್ಟು ಹಲವು ತಿಂಗಳು ಕಳೆದ ನಂತರ ರಾಜ್ಯ ಸರ್ಕಾರ ಕೇಂದ್ರಕ್ಕೆ ಸಹಾಯ ಮಾಡ ಲು ಮನವಿ ಸಲ್ಲಿಸಿದೆ. ಈ ಮನವಿಯ ಮೇರೆಗೆ ಬರದ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಕೇಂದ್ರ ತಂಡ ಇತ್ತೀಚೆಗೆ ಕಲ್ಬುರ್ಗಿಗೆ ಬಂದಿಳಿಯಿತು. ರೈತ ವರ್ಗದ ನೋವಿಗೆ ಸ್ಪಂದಿಸದೇ ಉಳಿದ ಜಿಲ್ಲಾ ಆಡಳಿತಕ್ಕೆ ತಮ್ಮ ಸಾಧನೆಯನ್ನು ಕೊಚ್ಚಿಕೊಳ್ಳುವ ಬಯಕೆ. ಈ ಎಲ್ಲದರ ಮಧ್ಯೆಯೇ ಕರ್ನಾಟಕ ಪ್ರಾಂತ ರೈತ ಸಂಘ ಈ ಅಧಿಕಾರಿಗಳು ನೀಡಿದ ವರದಿಯ ಬಣ್ಣ ಬಯಲು ಮಾಡುವಂತೆ ತಂಡವನ್ನು ಅಡ್ಡಗಟ್ಟಿ ಪ್ರತಿವರದಿ ಸಲ್ಲಿಸಿತು. ಸರ್ಕಾರಿ 'ನಾಟಕ'ವನ್ನು ಬಯಲಿಗೆಳೆಯಿತು.

ರೈತರಿಂದ ಪ್ರತಿವರದಿ

ಕಲ್ಬುರ್ಗಿ ಜಿಲ್ಲೆಯ ಕೃಷಿ ಕಾರ್ಮಿಕರಿಗೆ ಕೆಲಸ ನೀಡಲಾಗಿದೆ ಎಂದು ಸರ್ಕಾರ ಹೇಳುತ್ತಿರುವುದು ಶುದ್ಧಸುಳ್ಳು. ಜಿಲ್ಲೆಯಲ್ಲಿ 11 ಲಕ್ಷ ಕೃಷಿ ಕೂಲಿಕಾರರಿದ್ದು ಅವರು ಉದ್ಯೋಗ ಇಲ್ಲದೆ ಅತಂತ್ರರಾಗಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (ಎಐಕೆಎಸ್) ಬರ ಅಧ್ಯಯನ ತಂಡದ ಎದುರು ದೂರು ನೀಡಿದೆ.

ಜಿಲ್ಲೆಯಲ್ಲಿ ತೀವ್ರ ಬರಕ್ಕೆ ತುತ್ತಾಗಿರುವ ಪ್ರದೇಶ ಎಂದು ಗುರುತಿಸಲ್ಪಟ್ಟಿರುವ ಮರಗುತ್ತಿ ಬಳಿ ಬರ ಪರಿಸ್ಥಿತಿ ಅಧ್ಯಯನ ಮಾಡಲು ಜಿಲ್ಲೆಗೆ ಭೇಟಿ ನೀಡಿದ ಕೇಂದ್ರ ತಂಡವನ್ನು ಅಡ್ಡಗಟ್ಟಿದ ಪ್ರಾಂತ ರೈತ ಸಂಘದ ಕಾರ್ಯಕರ್ತರು ಸರ್ಕಾರ ನೀಡಿರುವ ವರದಿಗೆ ಪ್ರತಿಯಾಗಿ ರೈತರು ಗುರುತಿಸಿರುವ ಅಂಕಿ ಅಂಶಗಳನ್ನು ನೀಡಿದರು.

ಜಿಲ್ಲೆಯಲ್ಲಿ 11 ಲಕ್ಷ ಕೃಷಿ ಕಾರ್ಮಿಕರಿದ್ದು ಸರ್ಕಾರ ಇವರಿಗೆ ಉದ್ಯೋಗ ಭದ್ರತೆ ನೀಡಲು ಕೋಟಿಗಟ್ಟಲೆ ಹಣವನ್ನು ವ್ಯಯಿಸಿರುವುದಾಗಿ ಹೇಳಿಕೊಳ್ಳುತ್ತಿದೆ. ಒಂದು ಲಕ್ಷ ಮಾನವ ದಿನಗಳಷ್ಟು ಕೆಲಸ ನೀಡಿರುವುದಾಗಿ ಎದೆತಟ್ಟಿಕೊಂಡಿದೆ. ಆದರೆ ಇಂತಹ ಉದ್ಯೋಗವನ್ನೇ ಸರ್ಕಾರ ನೀಡಿಲ್ಲ. ಜಿಲ್ಲೆಯಲ್ಲಿರುವ ಕೃಷಿ ಕೂಲಿ ಕಾರ್ಮಿಕರು ಹಸಿವಿನಿಂದ ನೆರೆಯ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ ಎಂದು ದೂರಿದರು.

ಜಿಲ್ಲೆಯ ಕೃಷಿ ಕಾರ್ಮಿಕರು ವಲಸೆ ಹೋಗುವುದನ್ನು ತಪ್ಪಿಸಬೇಕಾದರೆ ಕನಿಷ್ಠ 10 ಕೋಟಿ ರೂ.ಗಳ ಕೆಲಸವನ್ನು ನೀಡಬೇಕಾಗಿದೆ ಎಂದು ರೈತ ಸಂಘ ಅಭಿಪ್ರಾಯಪಟ್ಟಿದೆ.

ಬೇಗುದಿಗೆ ಎಣ್ಣೆ: ಜಿಲ್ಲೆಯಲ್ಲಿ ಪಡಿತರ ವಿತರಣಾ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳು ಈ ಬರದ ಬೇಗುದಿಗೆ ಎಣ್ಣೆ ಸುರಿದಿದೆ. ಜೋಳ, ಅಕ್ಕಿ ಎರಡೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನೋವನ್ನು ಬಿಡಿಸಿಟ್ಟರು.

ತಾಲ್ಲೂಕಿನಲ್ಲಿ ಎರಡು ಗ್ರಾಮಗಳಲ್ಲಿ ಬರ ಅಧ್ಯಯನ ಮಾಡುವ ವಿಧಾನವನ್ನೇ ರೈತರು ಪ್ರಶ್ನಿಸಿದರು. ತಾಲ್ಲೂಕಿನಲ್ಲಿ ಎರಡು ಗ್ರಾಮಗಳನ್ನು ಅಧ್ಯಯನ ಮಾಡುವುದರಿಂದ ಬರದ ಭೀಕರತೆಯ ಅರಿವಾಗುವುದಿಲ್ಲ. ಒಂದು ತಾಲ್ಲೂಕಿನಲ್ಲಿಯೇ ಹೆಚ್ಚು ಮಳೆ ಬಿದ್ದ, ಏನೂ ಮಳೆ ಇಲ್ಲದ ಪ್ರದೇಶಗಳೂ ಇರುವುದರಿಂದ ಪ್ರತೀ ಗ್ರಾಮದ ಪಂಚಾಯತ್ ಮಟ್ಟದಲ್ಲಿ ಬರದ ಅಧ್ಯಯನವಾಗದಿದ್ದಲ್ಲಿ ಅದು ವೈಜ್ಞಾನಿಕ ಅಧ್ಯಯನವಾಗುವುದಿಲ್ಲ ಎಂದು ರೈತರು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಜನರನ್ನು ಅಲುಗಾಡಿಸಿದೆ. ಹರಿಜನರ ಮತ್ತು ಲಂಬಾಣಿಗರ ನೋವನ್ನಂತೂ ಕೇಳುವವರೇ ಇಲ್ಲ. ಮೂಕಪ್ರಾಣಿಗಳು ಮೇವಿಲ್ಲದೆ ಒದ್ದಾಡುತ್ತಿವೆ. ನೀರಿನ ಸಮಸ್ಯೆ ಬಗೆಹರಿಸಬೇಕು ಮತ್ತು ಮೇವು ಸಮಸ್ಯೆ ನಿವಾರಣೆಗೆ ಗೋಶಾಲೆ ಆರಂಭಿಸಬೇಕು ಎಂದು ರೈತ ಸಂಘ ಒತ್ತಾಯಿಸಿತು.

ಜಿಲ್ಲೆಯಲ್ಲಿ ಬರದ ಸಮಸ್ಯೆಯ ಚಿತ್ರಣ ನೀಡುವಾಗ ಬೆಳೆಗಳಿಗೆ ಆಗಿರುವ ಹಾನಿಗೆ ನೀಡಬೇಕಾದ ಪರಿಹಾರವನ್ನು ಮುಖ್ಯ ಎನ್ನುವಂತೆ ಗುರುತಿಸಿಲ್ಲ. ಕಲ್ಬುರ್ಗಿ ಜಿಲ್ಲೆಯಲ್ಲಿಯೇ 4.89 ಲಕ್ಷ ಹೆಕ್ಟೇರ್ ಭೂಮಿಗೆ ಹಾನಿಯಾಗಿದ್ದು ಬೆಳೆ ಹಾನಿ ಪರಿಹಾರಕ್ಕಾಗಿಯೇ 351 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು ಎಂದು ರೈತರು ಮನವಿ ಮಾಡಿದರು. ಮುಂಗಾರು ಮಳೆ ಸಂಪೂರ್ಣ ವಿಫಲವಾಗಿರುವುದರಿಂದ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯೇ ಆಗಲಿಲ್ಲ. ಒಟ್ಟಾರೆ ಎಲ್ಲಾ ಬೆಳೆಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಶೇ. 82 ರಷ್ಟು ಬೆಳೆ ವಿಫಲವಾಗಿದೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ. ಬೆಳೆ ವಿಮೆ ಪದ್ಧತಿಯನ್ನೂ ಪ್ರಸ್ತಾಪಿಸಿದ ರೈತರು ಬ್ಯಾಂಕ್‌ಗಳಿಂದ ಸಾಲ ಪಡೆದಿರುವವರ ಬೆಳೆಗಳನ್ನು ಮಾತ್ರ ವಿಮೆಮಾಡಲಾಗಿದೆ. ಇತರ ಬೆಳೆಯನ್ನು ವಿಮೆ ಮಾಡಲಾಗಿಲ್ಲ. ಒಣ ಪ್ರದೇಶದ ಎಲ್ಲಾ ಬೆಳೆಯನ್ನೂ ವಿಮೆ ಮಾಡುವಂತಾಗಬೇಕುಎಂದರು.

ಸಾರಿಗೆ ಕಚೇರಿಗೆ ಮುತ್ತಿಗೆ

ಗುಲಬರ್ಗಾ ಬಸ್ ನಿಲ್ದಾಣದಲ್ಲಿರುವ ಮಹಿಳಾ ವಿಶ್ರಾಂತಿ ಗೃಹವನ್ನು ವ್ಯಾಪಾರ ಮಳಿಗೆಗಳನ್ನಾಗಿಸಿದ್ದನ್ನು ಪ್ರತಿಭಟಿಸಿ ಜೆ.ಎಂ.ಎಸ್, ಎಸ್.ಎಫ್.ಐ ಮತ್ತು ಡಿವೈಎಫ್‌ಐ ನ ನೂರಾರು ಕಾರ್ಯಕರ್ತರು ಸಾರಿಗೆ ಕಚೇರಿಗೆ ಇತ್ತೀಚೆಗೆ ಮುತ್ತಿಗೆ ಹಾಕಿದರು.

ಬಸ್ ನಿಲ್ದಾಣದಲ್ಲಿರುವ ಮಹಿಳಾ ವಿಶ್ರಾಂತಿ ಗೃಹವನ್ನು ವ್ಯಾಪಾರದ ಮಳಿಗೆಗಳಾಗಿ ಪರಿವರ್ತಿಸಿ ಉಳ್ಳವರಿಗೆ ಅನುಕೂಲ ಮಾಡಿಕೊಡುವ ಈ ಕ್ರಮವನ್ನು ಖಂಡಿಸಿದ ಅವರು ಮಹಿಳೆಯರಿಗಾಗಿ ಶೌಚಾಲಯ, ವಿಶಾಲ ವಿಶ್ರಾಂತಿ ಗೃಹ, ಮತ್ತಿತರ ವ್ಯವಸ್ಥೆ ಕಲ್ಪಿಸುವುದನ್ನು ಕೈ ಬಿಟ್ಟು ಸಾರಿಗೆ ಇಲಾಖೆ ಮಹಿಳೆಯ ಬಗ್ಗೆ ನಿಷ್ಕಾಳಜಿ ಹೊಂದಿರುವ ಸಂಸ್ಥೆಯೆಂಬುದನ್ನು ಸಾಬೀತು ಪಡಿಸಿದಂತಾಗಿದೆಯೆಂದು ಜೆಎಂಎಸ್, ಎಸ್‌ಎಫ್‌ಐ, ಡಿವೈಎಫ್‌ಐ ಆಪಾದಿಸಿದೆ.

ಸಾರಿಗೆ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರು ಅನುಸರಿಸುತ್ತಿರುವ ಖಾಸಗೀಕರಣ ನೀತಿಯನ್ನು ಕೈ ಬಿಟ್ಟು, ಸಂಸ್ಥೆಯೊಳಗೆ ನಡೆಯುತ್ತಿರುವ ಸೋರುವಿಕೆಯನ್ನು ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಿ ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆ ಬಲಪಡಿಸಿ ಪ್ರತಿ ಬಸ್ಸುಗಳಲ್ಲಿ ಮಹಿಳೆಯರ ಸ್ಥಾನಗಳನ್ನು ಕಡ್ಡಾಯವಾಗಿ ಕಾಯ್ದಿರಿಸುವಂತೆ ಕಾರ್ಯಕರ್ತರು ಒತ್ತಾಯಿಸಿದರು.

ನಂತರ ನಡೆದ ಸಭೆಯಲ್ಲಿ ಅಪ್ಪಯ್ಯ ಹಿರೇಮಠ, ವಿರುಪಾಕ್ಷ ತಡಕಲ್, ಗಂಗಮ್ಮ ಬಿರಾದಾರ ಮತ್ತಿತರರು ಮಾತನಾಡಿದರು. ಹೋರಾಟದ ನೇತೃತ್ವವನ್ನು ಅಮೀನಾ ಬೇಗಂ, ಮರುಳಮ್ಮ, ರಾಜೇಶ್ವರಿ ಶಾಂತಾಬಾಯಿ ಮತ್ತು ಗುಂಡಪ್ಪ ವಹಿಸಿದ್ದರು.

ಬಾಕಿ ಹಣಕ್ಕಾಗಿ ಒತ್ತಾಯ

ಗುಲಬರ್ಗಾ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಆಳಂದ ಸಕ್ಕರೆ ಕಾರ್ಖಾನೆ ಯಿಂದ ಬರಬೇಕಾದ ಕೋಟ್ಯಾಂತರ ರೂಪಾಯಿ ಬಾಕಿಹಣ ವರ್ಷಾನುಗಟ್ಟಲೇ ಪಾವತಿಯಾಗದೇ ಇರುವುದರಿಂದ ಕಬ್ಬು ಬೆಳೆಗಾರರು ಕಂಗಾಲಾಗಿದ್ದಾರೆ. ಆಳಂದ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಅಧ್ಯಕ್ಷರೂ ಹಾಗೂ ಆಳಂದ ಶಾಸಕರೂ ಆದ ಸುಭಾಸ ಗುತ್ತೇದಾರ ಅವರ ರೈತ ವಿರೋಧಿ ನೀತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.

ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿಗಾಗಿ ರೈತ ಸಂಘ ನಿರಂತರ ಹೋರಾಟ ನಡೆಸುತ್ತಿದ್ದರೂ ಆಡಳಿತ ಮಂಡಳಿ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಜಿಲ್ಲೆಯ ಉಸ್ತುವಾರಿ ಸಚಿವರ ನಿರ್ಲಕ್ಷ್ಯವೇ ಕಾರಣವಾಗಿದೆಯೆಂದು ತಿಳಿಸಿದ ಅವರು ಕಬ್ಬಿನ ಬಾಕಿ ಹಣ ರೈತರಿಗೆ ಕೂಡಲೇ ಬಿಡುಗಡೆ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯ ದರ್ಶಿಗಳಾದ ಕಾ॥ ಚನ್ನಪ್ಪ ಆನೆಗುಂದಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ದೇವಲಗಾಣಗಾ ಪುರದಲ್ಲಿ ಆಟೋರಿಕ್ಷಾ ಯೂನಿಯನ್

ಅಫ್ಜಲಪುರ ತಾಲ್ಲೂಕಿನ ದೇವಲಗಾಣಗಾಪುರದಲ್ಲಿ ಆಟೋರಿಕ್ಷಾ ಹಾಗೂ ಟಾಂಗಾ ಯೂನಿಯನನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು.

ಜಿಲ್ಲಾ ಆಟೋರಿಕ್ಷಾ ಮೋಟಾರ್ ಟ್ರಾನ್ಸ್‌ಪೋರ್ಟ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಶಾಹಿದಮಿಯಾ ಸಂಘವನ್ನು ಉದ್ಘಾಟಿಸಿದರು. ಶಿವಪ್ಪಾ ವಡಿಗೇರಿ ಅಧ್ಯಕ್ಷತೆಯನ್ನು ವಹಿಸಿದ್ದರು. ಅಶೋಕ ಗುತ್ತೇದಾರ, ಮಲ್ಲಿಕಾರ್ಜುನ ಮೇಟಿ, ಶಿವಪ್ಪ ವಡಿಗೇರಿ, ಶಾಹಿದಮಿಯಾ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾ ಯಿತು. ದತ್ತು ಎಲ್.ಸಿಂದೆ, ಈರಣ್ಣಾ ವಗ್ಗ, ಗುಡುಸಾಬ ಮುಲ್ಲಾ, ಚಂದ್ರಕಾಂತ ಮುದುಕಣ್ಣ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಶಹಾಪುರದಲ್ಲಿ ಧರಣಿ

ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಮಾಡುವಂತೆ ಒತ್ತಾಯಿಸಿ ಬೆಂಗಳೂರಿನಲ್ಲಿ ಹೋರಾಟ ನಡೆಸಿದ ಎಸ್‌ಎಫ್‌ಐ ಕಾರ್ಯ ಕರ್ತರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿರುವುದನ್ನು ವಿರೋಧಿಸಿ, ಚಿಂತಕ ಗಂಗಾಧರ ಮೂರ್ತಿ ಅವರ ಮೇಲೆ ನಡೆಸಿರುವ ಹಲ್ಲೆ ಖಂಡಿಸಿ ಇತ್ತೀಚೆಗೆ ಭಾರತ ವಿದ್ಯಾರ್ಥಿ ಫೆಡರೇಷನ್ ಶಹಾಪುರ ಘಟಕ ಧರಣಿ ನಡೆಸಿತು.

ಜೈಲಾಲ್ ತೋಟದಮನಿ, ಚಂದ್ರಶೇಖರ ಮೇಟಿ, ಭೀಮರಾಯ ಹುಲಕಲ್, ದೌವರ್‌ಸಾಬ ನಧವನ, ಹನುಮಂತರಾಯ, ಅಯ್ಯಾಳಪ್ಪ, ಮಲ್ಲಣ್ಣ ನಿಂಗಣ್ಣ, ಚಂದ್ರಶೇಖರ್, ರವಿಚಂದ್ರನ್ ಅಮಲಪ್ಪ ಜೇವಿನಕಟ್ಟಿ, ಮಲ್ಲಣ್ಣ ಕೆ.ಕರಿಗುಡ್ಡ ಧರಣಿಯಲ್ಲಿ ಭಾಗವಹಿಸಿದರು.

ನೀರಾವರಿ ಕರ ಹಿಂತೆಗೆದುಕೊಳ್ಳುವಂತೆ ಒತ್ತಾಯ

ಜನತಾದಳ ಸರ್ಕಾರದಲ್ಲಿನ ಭ್ರಷ್ಟಾಚಾರದ ಕರ್ಮಕಾಂಡವನ್ನು ರೈತರ ಮೇಲೆ ಹಾಕಲು ಹೊರಟಿರುವುದು ಮತ್ತು ಯೋಜನಾ ಮಂಡಳಿಯು ನೀರಾವರಿ ಅಭಿವೃದ್ಧಿ ಕರವೆಂದು ಪ್ರತಿ ಎಕರೆಗೆ 1000 ರೂ. ಹೆಚ್ಚಿಸಬೇಕೆಂಬ ಶಿಫಾರಸ್ಸು ಮಾಡಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟದ ಸಂಚಾಲಕರುಗಳಾದ ಚನ್ನಪ್ಪ ಆನೆಗುಂದಿ ಅವರು ತೀವ್ರವಾಗಿ ಖಂಡಿಸಿದ್ದಾರೆ.

ರೈತರ ಭೂಮಿಗೆ ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನೀರು ಬಿಡದೇ ಬಿತ್ತಿದ ಬೀಜ, ಗೊಬ್ಬರದ ಖರ್ಚು ದೊರೆಯದೇ ರೈತರು ದಿವಾಳಿಯಾಗಿ ಜಮೀನುಗಳನ್ನು ಒತ್ತೆಹಾಕಿ ಪಟ್ಟಣಗಳಿಗೆ ವಲಸೆ ಹೋಗುತ್ತಿರುವಾಗ ವಾಸ್ತವಿಕ ಪರಿಸ್ಥಿತಿ ಅರಿತು ತಕ್ಷಣ ರೈತರ ಮೇಲೆ ವಿಧಿಸಲು ಇಚ್ಛಿಸಿರುವ ಅಭಿವೃದ್ಧಿ ಕರವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಖಾಸಗಿ ಬಸ್ಸು ದರ ಏರಿಕೆಯ ವಿರುದ್ಧ ಯಶಸ್ವೀ ಚಳುವಳಿ

ದ.ಕ.ಜಿಲ್ಲಾ ವಾರ್ತಾಪತ್ರ

ಕೇಂದ್ರ ಸರಕಾರ ಡೀಸೆಲ್ ದರ ಹೆಚ್ಚಿಸಿದ್ದಕ್ಕೆ ಕಾಯುತ್ತಿದ್ದ ದ.ಕ. ಜಿಲ್ಲೆಯ ಖಾಸಗಿ ಬಸ್ಸು ಮಾಲೀಕರ ಸಂಘ ಜಿಲ್ಲಾ ಆಡಳಿತದೊಂದಿಗೆ ಸೇರಿಕೊಂಡು 15 ರಿಂದ 20 % ವರೆಗೆ ಬಸ್ಸುದರದಲ್ಲಿ ತೀವ್ರ ಹೆಚ್ಚಳವನ್ನು ಮಾಡಿದರು. ಸಿಪಿಐ(ಎಂ), ಎಸ್.ಎಫ್.ಐ, ಡಿವೈಎಫ್‌ಐ, ಸಿಐಟಿಯು ಸಂಘಟನೆಗಳು ಇದನ್ನು ತೀವ್ರವಾಗಿ ವಿರೋಧಿಸಿ ಏರಿಸಿದ ದರವನ್ನು ಇಳಿಸದಿದ್ದಲ್ಲಿ ಹೋರಾಟ ರೂಪಿಸಲಾಗುವುದೆಂದು ಎಚ್ಚರಿಗೆ ನೀಡಲಾಯಿತು.

ಆದರೆ ಜಿಲ್ಲಾ ಆಡಳಿವಾಗಲೀ, ಬಸ್ಸು ಮಾಲಕರ ಸಂಘವಾಗಲೀ ಈ ಸಾರ್ವಜನಿಕ ಅಭಿಪ್ರಾಯಕ್ಕೆ ಗಮನ ನೀಡದೆ ಒಂದು ಪೈಸೆ ಕೂಡಾ ಇಳಿಸಲು ಅಸಾಧ್ಯವೆಂದು ಹಠಮಾರಿ ಧೋರಣೆ ತಳೆದರು.

ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ ರಾಜ್ಯವ್ಯಾಪಿಯಾಗಿ ಎಸ್.ಆರ್.ಟಿ.ಸಿ. ದರ ಏರಿಕೆ ವಿರುದ್ಧ ಚಳವಳಿಗೆ ಕರೆ ನೀಡಿತ್ತು. ಇದನ್ನು ಜಿಲ್ಲೆಯಲ್ಲಿ ಎಸ್‌ಎಫ್‌ಐ ಬಹಳಷ್ಟು ತಯಾರಿಯಿಂದ ಖಾಸಗಿ ಮತ್ತು ಕೆ.ಎಸ್.ಆರ್.ಟಿ.ಸಿ. ಎರಡೂ ಬಸ್ಸು ದರಗಳಲ್ಲಿ ಆದ ಹೆಚ್ಚಳವನ್ನು ವಿರೋಧಿಸುವ ಹೋರಾಟವನ್ನಾಗಿ ಮಾರ್ಪಡಿಸಿಕೊಂಡಂತೆ ದಿನಾಂಕ 25.9.97 ಕ್ಕೆ ಜಿಲ್ಲಾದ್ಯಂತ ರಸ್ತೆ ತಡೆ ಚಳುವಳಿ ನಡೆಯಿತು. ಬಸ್ಸು ದರ ಏರಿಕೆಯ ಬಗ್ಗೆ ಜನರಲ್ಲಿ ಇದ್ದ ಕ್ರೋಧ ಹೊರಬಂತು. ಅದು ಒಂದು ಸಂಘಟಿತ ಸ್ವರೂಪ ಪಡೆಯಲು ಈ ಕರೆ ಕಾರಣವಾಯಿತು. ಪರಿಣಾಮವಾಗಿ ರಸ್ತೆತಡೆ ಜಿಲ್ಲೆಯಾದ್ಯಂತ, ಶಾಲಾಕಾಲೇಜುಗಳ ಬಂದ್ ನಡೆದು ಸಂಪೂರ್ಣ ಯಶಸ್ವಿಯಾಯಿತು. ಎಸ್‌ಎಫ್‌ಐ ನ ಅಧೀನದಲ್ಲಿ ಸರ್ವ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಸಂಘಟನೆಯು ಈ ಚಳುವಳಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ವಿದ್ಯಾರ್ಥಿ ಕ್ರಿಯಾ ಸಮಿತಿ ರಚನೆ:
ರಸ್ತೆ ತಡೆ ಹೋರಾಟದಿಂದ ಹೊಸ ಚಾಲನೆ ಪಡೆದ ಬಸ್ಸು ದರ ಏರಿಕೆ ವಿರೋಧಿ ಅಭಿಪ್ರಾಯವು ಇತರ ವಿದ್ಯಾರ್ಥಿ ಸಂಘನೆಗಳನ್ನು ಒಟ್ಟು ಸೇರಿ ಐಕ್ಯ ಹೋರಾಟ ರೂಪಿಸಲು ಪ್ರೇರೇಪಣೆ ನೀಡಿತು. ಅದರಂತೆ ಚಳುವಳಿಯ ದಿನವೇ ಇತರ ವಿದ್ಯಾರ್ಥಿ ಸ್ವತಂತ್ರ ಸಂಘಟನೆಗಳು ಒಟ್ಟು ಸೇರಿ ವಿದ್ಯಾರ್ಥಿ ಕ್ರಿಯಾ ಸಮಿತಿ ರಚಿಸಿ ೨೯ ರಿಂದ ಅನಿರ್ದಿಷ್ಟಾವಧಿ ಕಾಲದ ಜಿಲ್ಲಾ ಬಸ್ ಬಂದ್‌ಗೆ ಕರ ನೀಡಲಾಯಿತು.

ಈ ನಡುವೆ ಎರಡು ತ್ರಿಪಕ್ಷೀಯ ಸಭೆಗಳು ನಡೆದವು. ಬಸ್ಸು ಮಾಲೀಕರ ಸಂಘದ ಸೂಪರ್ ಲಾಭದ ಕಣ್ಣೋಟದ ಬಗ್ಗೆ ಅಂಕಿಸಂಖ್ಯೆಗಳ ವಾದ ಮಂಡಿಸಿದಾಗ ಬಸ್ಸು ಮಾಲಕರ ಸಂಘ ನಿರುತ್ತರವಾಯಿತು. ಸರಕಾರದ ನೋಟಿಫಿಕೇಶನ್ ಗಿಂತಲೂ ನಮ್ಮ ದರ ಕಡಿಮೆ ಇದೆ ಎಂಬ ಮಾಲಕರ ಸಂಘದ ನಿಲುವನ್ನು ಪ್ರಶ್ನಿಸಲಾಗಿ ಕೊನೆಗೆ ಯಾವುದೊಂದು ಒಮ್ಮತಕ್ಕೆ ಬರಲು ಸಿದ್ಧರಿಲ್ಲದ ಬಸ್ ಮಾಲಕರ ಸಂಘ ಬಸ್ಸು ಬಂದ್ ಚಳುವಳಿಯನ್ನು ಸಮರ್ಥವಾಗಿ ಎದುರಿಸುತ್ತೇವೆ ಎಂದು ಬೆದರಿಕೆಯ ಸವಾಲನ್ನು ಎಸೆದಾಗ ಸ್ವೀಕರಿಸಿದ ವಿದ್ಯಾರ್ಥಿ ಯುವಜನ ಸಂಘಟನೆಯ ನಾಯಕರು ಐಕ್ಯತೆಯಿಂದ ಎದುರಿಸುತ್ತೇವೆಂದು ಹೇಳಿ ಸಭೆಯಿಂದ ಹೊರ ನಡೆದರು.

ಆಗ ಅಲ್ಲೇ ಇದ್ದ ಡಿವೈಎಸ್‌ಪಿಯವರು ವಿದ್ಯಾರ್ಥಿ-ನಾಯಕರನ್ನು ಪ್ರತ್ಯೇಕವಾಗಿ ಮಾತುಕತೆಗೆ ಕರೆದು ಕಾನೂನು ಮತ್ತು ಇತರ ರೀತಿಯ ಬೆದರಿಕೆಗಳ ಮೂಲಕ ಚಳುವಳಿ ಹಿಂತೆಗೆಯುವಂತೆ ಪುಸಲಾಯಿಸಿದರು. ಮೂರು ತಾಸುಗಳ ಕಾಲ ನಡೆದ ಮಾತುಕತೆ ಅಲ್ಲೂ ವಿಫಲವಾಗಿ ಮುಖಾಮುಖಿ ಹೋರಾಟದ ಅಂಗಣ ಸ್ಪಷ್ಟವಾಯಿತು.

ಸಾರ್ವಜನಿಕರು ಬಸ್ಸು ದರ ಏರಿಕೆಯನ್ನು ಪ್ರತಿಭಟಿಸಿಲ್ಲ, ಅವರು ಒಪ್ಪಿಕೊಂಡಿರುತ್ತಾರೆ ಎಂಬ ಹೇಳಿಕೆಯನ್ನು ನೀಡಿದ ಜಿಲ್ಲಾಧಿಕಾರಿ ಮತ್ತು ಎಸ್.ಪಿ.ಯವರುಗಳು ಚರ್ಚೆಯ ಪ್ರಮುಖ ವ್ಯಕ್ತಿಗಳಾದರು. ಬಸ್ಸಲ್ಲಿ, ಕಾರಲ್ಲಿ, ವ್ಯಾನಲ್ಲಿ, ಎಲ್ಲೆಂದರಲ್ಲಿ ಈ ಎರಡೂ ಅಧಿಕಾರಿಗಳ ವರ್ತನೆಯ ಬಗ್ಗೆ ಪ್ರಬಲ ಖಂಡನೆಗಳು ವ್ಯಕ್ತವಾದವು. ಅಲ್ಲಲ್ಲಿ ಸಾರ್ವಜನಿಕರು ಬ್ಯಾನರ್‌ಗಳನ್ನು ಹಾಕಿ ಬಸ್ಸು ಮಾಲಿಕರ ಚೇಲಾಗಳಂತೆ ವರ್ತಿಸಿದ್ದನ್ನು ಖಂಡಿಸಿದರು. ಪತ್ರಿಕೆಗಳಲ್ಲಿ ವ್ಯಾಪಕ ಪ್ರತಿಭಟನೆ ವ್ಯಕ್ತವಾಯಿತು. ಸಿಐಟಿಯುವಿನ ಜಿಲ್ಲಾ ಕಾರ್ಯದರ್ಶಿ ಬಿ.ಮಾಧವರು ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳ ನಿಲುವನ್ನು ಖಂಡಿಸಿ ಬಿಡುಗಡೆ ಮಾಡಿದ ಹೇಳಿಕೆಯು ಎಲ್ಲರನ್ನು ಬಡಿದೆಬ್ಬಿಸಿತು.

ಯಶಸ್ವೀ ಬಸ್ಸು ಬಂದ್ ಪ್ರಾರಂಭ:
ದಿನಾಂಕ 29 ರಂದು ಬಸ್ಸು ಬಂದ್ ಚಳುವಳಿ ಪ್ರಾರಂಭವಾಯಿತು. ಬೆಳಗ್ಗಿನಿಂದಲೇ ವ್ಯಾಪಕ ಯಶಸ್ವೀ ಬಸ್ಸು ಬಂದ್ ನಡೆಯಿತು.

ಅಭೂತಪೂರ್ವ ಯಶಸ್ಸಿನಿಂದ ತತ್ತರಿಸಿದ ಜಿಲ್ಲಾಡಳಿತ ಪ್ರಥಮ ದಿನವೇ ಮತ್ತೆ ಒಂದು ಪತ್ರಿಕಾಗೋಷ್ಠಿ ಕರೆದು ಬಸ್ಸುದರ ಏರಿಕೆಯನ್ನು ಮತ್ತೆ ಸಮರ್ಥಿಸಿತ್ತು. ಗೋಷ್ಠಿ ನಡೆಯುತ್ತಿರುವಾಗಲೇ ಅದರ ಪತ್ರಿಕಾ ಪ್ರತಿಯನ್ನು ಪಡೆದ ಡಿವೈಎಫ್‌ಐ ಜಿಲ್ಲಾ ನಾಯಕತ್ವ ಸಭೆ ಸೇರಿ ಕೂಡಲೇ ಪ್ರತಿಖಂಡನಾ ಹಾಗೂ ಹೇಳಿಕೆ ತಯಾರು ಮಾಡಿ ಪತ್ರಿಕಾ ಗೋಷ್ಠಿಗೆ ಭಾಗವಹಿಸಿದ ಪತ್ರಕರ್ತರು ತಮ್ಮ ತಮ್ಮ ಕಛೇರಿಗೆ ತಲುಪುವ ಮೊದಲೇ ಡಿವೈಎಫ್‌ಐ ನ ಉತ್ತರದ ಹೇಳಿಕೆಗಳು ತಲುಪಿದವು. ಈ ಹೋರಾಟಕ್ಕೆ ಸದಾ ಬೆಂಬಲ ನೀಡಿದ ಪತ್ರಿಕಾ ವಲಯ ಇದರಿಂದ ಆಶ್ಚರ್ಯಗೊಂಡು ಜಿಲ್ಲಾಧಿಕಾರಿಯವರ ಹೇಳಿಕೆಯ ಕೆಳಗಡೆ ಬಾಕ್ಸ್‌ಐಟಂ ನಲ್ಲಿ ಡಿವೈಎಫ್‌ಐ ಹೇಳಿಕೆಯನ್ನು ಪ್ರಕಟಪಡಿಸಿದವು.

ಜಿಲ್ಲಾಧಿಕಾರಿಯವರ ಹೇಳಿಕೆಯು ಡಿವೈಎಫ್‌ಐನ ಪ್ರತಿ ಹೇಳಿಕೆಯಿಂದ ತನ್ನ ಅರ್ಥವನ್ನು ಕಳೆದುಕೊಂಡಿತ್ತು ಮಾತ್ರವಲ್ಲದೆ, ಜಿಲ್ಲಾಡಳಿತ ಯಾವುದೋ ಪ್ರಲೋಭನೆಗೆ ಖಾಸಗಿ ಸುಳ್ಳು ಅಂಶ ಉದಾಹರಣೆಗಳನ್ನು ನೀಡಿದ್ದನ್ನು ಪ್ರಶ್ನಿಸಿದವು. ಇದರಿಂದ ಮರುದಿನ ಮತ್ತೆ ಜನ ಸ್ವಯಂಸ್ಫೂರ್ತಿಯಿಂದ ಚಳುವಳಿಗೆ ಇಳಿದರು.

ಎರಡನೇ ದಿನ ಬಿಜೆಪಿ ಹೊರತುಪಡಿಸಿ ಇತರ ಪಕ್ಷಗಳು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದವು. ಮೇಯರ್, ಉಪ ಮೇಯರ್, ಇತರ ಸಂಘ ಸಂಸ್ಥೆಗಳು ಬೆಂಬಲ ಘೋಷಿಸಿದರು. ಅಲ್ಲಲ್ಲಿ ವಿವಿಧ ರೀತಿಯ ಪ್ರತಿಭಟನೆಗಳು ನಡೆಯುತ್ತಿದ್ದವು. ಬಿಜೆಪಿ ಯ ತಾಲ್ಲೂಕು ಪಂಚಾಯತ್ ಸದಸ್ಯರೇ ಬಸ್ಸು ಮಾಲಕರ ಸಂಘದ ಅಧ್ಯಕ್ಷರಾಗಿದ್ದರು. ಉಳಿದಂತೆ ಪದಾಧಿಕಾರಿಗಳೂ ಕೂಡಾ ಬಿಜೆಪಿಯ ಪದಾಧಿಕಾರಿಗಳಾಗಿದ್ದರು. ಜನರಿಗೆ ಈ ಹೋರಾಟದಲ್ಲಿ ತನ್ನ ನಿಜಸ್ವರೂಪ ತೋರಿಸಿದ ಬಿಜೆಪಿ ಕನಿಷ್ಠ ಎಂದರೆ ಒಂದು ಪತ್ರಿಕಾ ಹೇಳಿಕೆ ಮಾತ್ರ ನೀಡಿ ತೃಪ್ತಿ ಪಟ್ಟಿತು.

ಎರಡನೆಯ ದಿನ ಕೂಡಾ ಬಂದ್ ಯಶಸ್ವೀಯಾಯಿತು. ವಿವಿಧ ಪ್ರದೇಶಗಳಿಗೆ ಸರಕಾರಿ ಬಸ್ಸುಗಳು ಮಾತ್ರ ಓಡಾಡಿದವು. ಅಂದೂ ನಡೆದ ತ್ರಿಪಕ್ಷೀಯ ಸಭೆ ವಿಫಲವಾಯಿತು.

ಮೂರನೇಯ ದಿನ ಅಕ್ಟೋಬರ್ 1 ಆಗಿತ್ತು. ಸಹಜವಾಗಿಯೇ ವಿದ್ಯಾರ್ಥಿ ಸಮುದಾಯಕ್ಕೆ ಮಧ್ಯಾವಧಿ ರಜೆ ಪ್ರಾರಂಭವಾಗುತ್ತದೆ. ಆದ್ದರಿಂದ ಬಸ್ಸು ಬಂದ್ ವಿಫಲವಾಗಬಹುದೆಂಬ ನಂಬಿಕೆ ಬಸ್ಸು ಮಾಲಕರ ಹಾಗೂ ಜಿಲ್ಲಾಡಳಿತದ್ದು. ಆದರೆ ವಾಸ್ತವವಾಗಿ ಅವರ ನಂಬಿಕೆ ಹುಸಿಯಾಯಿತು. ಬಂದ್ ಮುಂದುವರಿದಂತೆ ಕೊನೆಯಲ್ಲಿ ಸುಮಾರು 5.00 ಗಂಟೆಗೆ ಜಿಲ್ಲಾಧಿಕಾರಿಗಳು ಕರೆದ ಸಭೆಯಲ್ಲಿ ಒಂದು ತೀರ್ಮಾನಕ್ಕೆ ಬರಲಾಯಿತು. ಏರಿಸಿದ ಎಲ್ಲಾ ಹಂತದಲ್ಲೂ 5% ಬಸ್ಸುದರವನ್ನು ಇಳಿಸುವ ತೀರ್ಮಾನಕ್ಕೆ ಬರಲಾಯಿತು. ಅದರಂತೆ ಮುಷ್ಕರವನ್ನು ಹಿಂದೆ ಪಡೆಯಲಾಯಿತು. ಒಂದು ಪೈಸೆಯನ್ನೂ ಕಡಿಮೆ ಮಾಡಲು ಸಾಧ್ಯವೇ ಇಲ್ಲವೆಂದು ಹೇಳಿದ ಜಿಲ್ಲಾಡಳಿತ ಹಾಗೂ ಬಸ್ಸು ಮಾಲಕರ ಸಂಘಕ್ಕೆ ಬೇರೆ ದಾರಿಯೇ ಇರಲಿಲ್ಲ. ಕೊನೆಗೂ ಹೋರಾಟಕ್ಕೆ ಮಣಿಯಬೇಕಾಯಿತು.

ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ರಾಜಕೀಯ ಬೆಳವಣಿಗೆಯಲ್ಲಿ ಈ ಹೋರಾಟ ಒಂದು ಇತಿಹಾಸವನ್ನು ನಿರ್ಮಿಸಿದೆ ಅದರಲ್ಲೂ ಎಸ್‌ಎಫ್‌ಐ - ಡಿವೈಎಫ್‌ಐ ಮುಂಚೂಣಿಯಲ್ಲಿದ್ದ ಕಾರಣ ಇದು ಜಯದತ್ತ ಸಾಗಿತು ಎಂಬುದು ಬಹಳ ಸ್ಪಷ್ಟ.

ವರದಿ: ಕೃಷ್ಣಪ್ಪ ಕೊಂಚಾಡಿ,
ಕೆ.ವಿಶ್ವನಾಥ್



ಉತ್ತರ ಪ್ರದೇಶದಲ್ಲಿ ದೌರ್ಜನ್ಯ ರಾಜ್

ನೈತಿಕ ಮೌಲ್ಯಗಳೆಲ್ಲವನ್ನು ಗಾಳಿಗೆ ತೂರಿ ಉತ್ತರ ಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಭಾರತೀಯ ಜನತಾ ಪಕ್ಷ ಪ್ರತಿಪಕ್ಷಗಳ ದನಿಯನ್ನು ಅಡಗಿಸಲು ದಬ್ಬಾಳಿಕೆಯ ಮಾರ್ಗ ಹಿಡಿದಿದೆ. ರಾಜ್ಯದ ವಿದ್ಯಮಾನಗಳು ಇದಕ್ಕೆ ಸಾಕ್ಷಿ.

ನವೆಂಬರ್ 10 ರಂದು ರಾಜಧಾನಿ ಲಕ್ನೌದಲ್ಲಿ ಸಮಾಜವಾದಿ ಪಕ್ಷ(ಎಸ್‌ಪಿ)ದ ಕಾರ್ಯಕರ್ತರ ಮೇಲೆ ಪೋಲಿಸರು ಹೇಯ ದಬ್ಬಾಳಿಕೆ ನಡೆಸಿದರು. ಭಯೋತ್ಪಾದನೆ ಹಾಗೂ ಛಿದ್ರಕಾರಿ ಚಟುವಟಿಕೆ ತಡೆ ಕಾನೂನು (ಟಾಡಾ) ಅಸ್ತಿತ್ವದಲ್ಲಿ ಇಲ್ಲದಿದ್ದರೂ ಅದರನ್ವಯ ಬಂಧಿತರಾಗಿರುವ ಮುಗ್ಧ ಜನರು ಇನ್ನೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಎಸ್.ಪಿ. ಕಾರ್ಯಕರ್ತರು ರಾಜ್ಯಪಾಲರ ನಿವಾಸಕ್ಕೆ ಹೋಗುತ್ತಿದ್ದಾಗ ಪೋಲೀಸರು ಬಲಪ್ರಯೋಗ ಮಾಡಿದರು. ಪ್ರದರ್ಶನಕಾರರಿಂದ ಯಾವುದೇ ರೀತಿಯ ಪ್ರಚೋದನೆ ಇಲ್ಲದಿದ್ದರೂ ಪೋಲೀಸರು ದೌರ್ಜನ್ಯ ನಡೆಸಿದರು. ಲಾಠಿ ಪ್ರಹಾರದಲ್ಲಿ ಎಸ್‌ಪಿಯ ಅನೇಕ ಕಾರ್ಯಕರ್ತರೂ, ಮುಖಂಡರೂ ಗಂಭೀರವಾಗಿ ಗಾಯಗೊಂಡಿದ್ದಾರೆ.

ಪ್ರತಿಪಕ್ಷ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಹಾಗೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಕುಸಿದಿರುವ ಹಿನ್ನಲೆಯಲ್ಲಿ ಬಿಜೆಪಿ ನೇತೃತ್ವದ ಸರಕಾರವನ್ನು ವಜಾ ಮಾಡುವಂತೆ ಸಮಾಜವಾದಿ ಪಕ್ಷ ಮತ್ತು ಸಿಪಿಐ(ಎಂ) ಒತ್ತಾಯಿಸಿವೆ. ಕುತಂತ್ರದಿಂದ ಅಧಿಕಾರಕ್ಕೆ ಬಂದಿರುವ ಸರಕಾರಕ್ಕೆ ನ.10ರ ಪೋಲೀಸ್ ದೌರ್ಜನ್ಯದ ಹಿನ್ನಲೆಯಲ್ಲಿ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕು ಇಲ್ಲ ಎಂದು ಅವು ಅಭಿಪ್ರಾಯಪಟ್ಟಿವೆ.

ಒಂದೇ ನೀತಿ

ಲಖನೌದಲ್ಲಿ ನಡೆದಿರುವ ಪ್ರಕರಣ ಹಾಗೂ ಮುಂಬಯಿಯಲ್ಲಿ ಟಾಡಾ ವಿರೋಧಿ ಪ್ರದರ್ಶನಕಾರರ ಮೇಲೆ ಪೋಲೀಸರು ದೌರ್ಜನ್ಯ ನಡೆಸಿರುವುದಕ್ಕೂ ಸಾಮ್ಯವಿದೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಪ್ರತಿಭಟನೆಯ ದನಿಗಳನ್ನು ದಮನ ಮಾಡಲು ಪಿತೂರಿ ನಡೆಯುತ್ತಿರುವುದರ ಸೂಚನೆ ಇದಾಗಿದೆ. ಉತ್ತರ ಪ್ರದೇಶ ವಿಧಾನ ಸಭೆಯ ಒಳಗಡೆಯೇ ಅಭೂತಪೂರ್ವ ಹಿಂಸಾ ಚಾರದ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಮುಂದಿನ ಚುನಾವಣೆಗಳಲ್ಲಿ ಗೆಲ್ಲುವ ಆಸೆಯಿಂದ ಪ್ರತಿಪಕ್ಷಗಳನ್ನು ಬಗ್ಗು ಬಡಿಯುವುದಕ್ಕೆ ಮುಂದಾಗಿದೆ ಎಂದು ಸಿಪಿಐ(ಎಂ) ಉತ್ತರ ಪ್ರದೇಶಗಳರಾಜ್ಯ ಸಮಿತಿ ಕಾರ್ಯದರ್ಶಿ ರಾಮಸುಮೇರ್ ಯಾದವ್ ಹೇಳಿದ್ದಾರೆ.

ಪಕ್ಷದ ಕಾರ್ಯಕರ್ತರ ಮೇಲೆ ನಡೆದ ಲಾಠಿ ಪ್ರಹಾರ ಫ್ಯಾಸಿಸಂನ ನಗ್ನ ಪ್ರದರ್ಶನವಾಗಿದೆ ಎಂದು ಎಸ್.ಪಿ. ಪ್ರಧಾನ ಕಾರ್ಯದರ್ಶಿ ಅಮರ್ ಸಿಂಗ್ ವರ್ಣಿಸಿದ್ದಾರೆ. ಫ್ಯಾಸಿಸ್ಟ್ ಸವಾಲನ್ನು ಎದುರಿಸಲು ತಮ್ಮ ಪಕ್ಷ ಸಿದ್ಧ ಎಂದೂ ಅವರು ಘೋಷಿಸಿದ್ದಾರೆ.

ಬಿಜೆಪಿ :ಮುಂದುವರಿದ ಪ್ರಹಸನ

ಭಾರತೀಯ ಜನತಾ ಪಕ್ಷದ ಸಾಂಸ್ಥಿಕ ಚುನಾವಣೆಗಳು ಹೇಗೆ ಪ್ರಹಸನವಾಗಿ ಪರಿವರ್ತನೆಗೊಂಡಿದೆ ಎನ್ನುವುದನ್ನು ಹಲವು ರಾಜ್ಯಗಳ ಉದಾಹರಣೆಗಳನ್ನು ಎರಡನೇ ವಾರದ ಹಿಂದಿನ 'ಐಕ್ಯರಂಗ' ಸಂಚಿಕೆಯಲ್ಲಿ ಓದಿರುವಿರಿ, ಇನ್ನೂ ಇಂಥ ಮಾಹಿತಿ ಇದೀಗ ಲಭ್ಯ

ಬಿಹಾರ: ಬಿಜೆಪಿಯ ರಾಷ್ಟ್ರೀಯ ನಾಯಕರಲ್ಲಿರುವ ಭಿನ್ನಾಭಿಪ್ರಾಯಗಳು ಪಕ್ಷದ ಬಿಹಾರ ಘಟಕದ ಚುನಾವಣೆಗಳ ಮೇಲೆ ಪರಿಣಾಮ ಬೀರಿದೆ ಎಂದು ಪಾಟ್ನಾದಿಂದ ಬಂದಿರುವ ವರದಿ ತಿಳಿಸಿದೆ.

ನವೆಂಬರ್ 3 ರೊಳಗೆ ರಾಜ್ಯದ ಎಲ್ಲಾ ಜಿಲ್ಲಾ ಘಟಕಗಳ ಚುನಾವಣೆ ಹಾಗೂ ಎರಡನೇ ವಾರಾಂತ್ಯದೊಳಗೆ ರಾಜ್ಯ ಘಟಕದ ಚುನಾವಣೆ ಪೂರ್ಣಗೊಳ್ಳಬೇಕಿತ್ತು. ಆದರೆ 62 ಜಿಲ್ಲೆಗಳ ಪೈಕಿ ಕೇವಲ 16 ಘಟಕಗಳ ಚುನಾವಣೆ ಪ್ರಕ್ರಿಯೆ ಮಾತ್ರ ಪೂರ್ಣವಾಗಿದೆ. ಈ ಜಿಲ್ಲಾ ಘಟಕಗಳಲ್ಲಿ ಅಂತಃಕಲಹ ಇಲ್ಲದಿರುವುದರಿಂದ ಇದು ಸಾಧ್ಯವಾಗಿದೆ. ಉಳಿದೆಲ್ಲ ಜಿಲ್ಲೆಗಳು ಆಂತರಿಕ ಜಗಳದಿಂದ ಜರ್ಝರಿತಗೊಂಡಿವೆ. ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಯನ್ನು ನವೆಂಬರ್ ಮೂರನೇ ವಾರಕ್ಕೆ ಮುಂದೂಡಲಾಗಿದೆ.

ಜೆಹಾನಾಬಾದ್, ಮುಜಾಫರ್‌ಪುರ್, ನವಾಡಾ, ಬಂತಾ, ಬಾಗಲ್ಪುರ ಮುಂತಾದ ಜಿಲ್ಲೆಗಳಲ್ಲಿ ಚುನಾವಣೆ ವೇಳೆ ಹೊಡೆದಾಟಗಳೇ ನಡೆದವು!

ಹಿಮಾಚಲ ಪ್ರದೇಶ: ಆಂತರಿಕ ಕಲಹದಿಂದ ಬಿಜೆಪಿಯ ಹಿಮಾಚಲ ಪ್ರದೇಶ ಘಟಕವೂ ಹೊರತಾಗಿಲ್ಲ ಎನ್ನುವುದನ್ನು ಶಿಮ್ಲಾದಿಂದ ಬಂದಿರುವ ವರದಿ ಸೂಚಿಸುತ್ತದೆ.

ರಾಜ್ಯದ ಮಾಜಿ ಮುಖ್ಯಮಂತ್ರಿ ಶಾಂತಕುಮಾರ ಮತ್ತು ಬಿಜೆಪಿ ರಾಜ್ಯ ಘಟಕ ಹಾಲಿ ಅಧ್ಯಕ್ಷ ಪ್ರೇಮ ಕುಮಾರ ಧುಮಾಲ್ ಬಣಗಳ ನಡುವೆ ಶೀತಲ ಸಮರ ನಡೆದಿದೆ. ಈ ಎರಡೂ ಬಣಗಳ ನಡುವೆ ರಾಜಿ ಮಾಡಲು ಪಕ್ಷದ ಕೇಂದ್ರ ವೀಕ್ಷಕ ವಿಫಲವಾದ್ದರಿಂದ ನವೆಂಬರ್ ೯ ರಂದು ನಡೆಯಬೇಕಿದ್ದ ರಾಜ್ಯ ಅಧ್ಯಕ್ಷರ ಚುನಾವಣೆಯನ್ನು ಮುಂದೂಡಲಾಯಿತು.

ಭಾರೀ ನಾಟಕೀಯ ಘಟನಾವಳಿಗಳ ಮಧ್ಯದಲ್ಲಿ ಚುನಾವಣೆಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ.

ತ್ರಿಪುರಾದಲ್ಲಿ ಉಗ್ರಗಾಮಿಗಳ ದುಷ್ಕೃತ್ಯ

ತ್ರಿಪುರಾದಲ್ಲಿ ಎಡರಂಗ ಸರಕಾರದ ಪ್ರತಿಷ್ಠೆಗೆ ಮಸಿ ಬಳಿಯಲು ಸನ್ನಾಹ ನಡೆಸಿರುವ ಉಗ್ರಗಾಮಿಗಳು ಇದಕ್ಕಾಗಿ ಮುಗ್ಧ ಜನರ ಜೀವವನ್ನೂ ಹರಣ ಮಾಡಲು ಸಿದ್ಧರಾಗಿದ್ದಾರೆ. ಕೆಲವು ದಿನಗಳ ಹಿಂದಿನ ಬಾಂಬ್ ಸ್ಫೋಟ ಈ ಅಂಶಕ್ಕೆ ಪುಷ್ಟಿ ನೀಡುತ್ತದೆ.

ನವೆಂಬರ್ 7 ರಂದು ರಾಜ್ಯದ ರೈಶ್‌ಬರಿಬಳಿ ಶಕ್ತಿಯುತ ಬಾಂಬ್ ಸ್ಫೋಟಗೊಂಡು ೨೦ ಜನರು ಮೃತರಾದರು. ಇವರಲ್ಲಿ ಒಂಬತ್ತು ಮಂದಿ ಗಡಿಭದ್ರತಾ ಪಡೆಯ ಸಿಬ್ಬಂದಿ.

ನಿಷೇಧಿಸಲಾಗಿರುವ ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ತ್ರಿಪುರಾ (ಎಸ್‌ಎಲ್‌ಎಫ್‌ಟಿ) ಈ ದುಷ್ಕೃತ್ಯ ನಡೆಸಿರುವುದು ಸ್ಪಷ್ಟವಾಗಿದೆ.

ಈ ಮಧ್ಯೆ, ಎಸ್‌ಎಲ್‌ಎಫ್‌ಟಿ ಅಕ್ಟೋಬರ್ 31 ರಂದು ಅಪಹರಿಸಿದ್ದ ವಿಶ್ವಜಿತ್ ದೇ ಎಂಬುವರ ಶವ ನವೆಂಬರ್ 10 ರಂದು ಸಿಕ್ಕಿದೆ. ದೇ ಸಿಪಿಐ(ಎಂ) ಕೌನ್ಸಿಲರ್ ಒಬ್ಬರ ಮಗ. ಉಗ್ರಗಾಮಿಗಳು ಫೋನ್ ಮಾಡಿ ತಿಳಿಸಿದ್ದರಿಂದ ದೇ ಶವ ಸಿಕ್ಕಿತು. ಹೆಣಕ್ಕೆ ಪ್ರಬಲ ಆಸ್ಫೋಟವನ್ನು ಕಟ್ಟಿ ಇಡಲಾಗಿತ್ತು.

ರೈತರ ಧರಣಿ

ಆನೇಕಲ್: ಈ ತಾಲೂಕಿನ ಕಸುವಿನ ಕುಂಟೆ, ಗೋವಿಂದನಾಯ್ಕನ ದೊಡ್ಡಿ ಮತ್ತುರಾಯನ ದೊಡ್ಡಿ, ಜವರೇ ಗೌಡನ ದೊಡ್ಡಿ ಮತ್ತು ಬಸವನ ದೊಡ್ಡಿ ಇನ್ನೂ ಅನೇಕ ಗ್ರಾಮಗಳಲ್ಲಿ ಲಂಬಾಣಿ ಜನಾಂಗದವರು ಹಲವಾರು ವರ್ಷಗಳಿಂದ ವಾಸ ಮಾಡುತಿದ್ದು ಇವರಿಗೆ ಸರ್ಕಾರದಿಂದ ಸಿಗುವ ಯಾವುದೇ ನಾಗರೀಕ ಸೌಲಭ್ಯವೂ ಸಿಕ್ಕಿಲ್ಲ. ಇವರು ಹಲವಾರು ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದು ಇವರಿಗೆ ಉಳುಮೆ ಚೀಟಿ ಸಿಕ್ಕಿಲ್ಲ, ರಸ್ತೆ ಸೌಕರ್ಯವಿಲ್ಲ, ಬಸ್ ಅನುಕೂಲವಿಲ್ಲ, ಆಸ್ಪತ್ರೆ ಸೌಕರ್ಯವಿಲ್ಲ. ಇವರು ಬೆಳೆದ ಬೆಳೆಗೆ ಆನೆ ಮತ್ತು ಇತರೆ ಪ್ರಾಣಿ ಗಳಿಂದ ಬೆಳೆ ನಾಶ. ಹೀಗೆ ಹಲವಾರು ಬೇಡಿಕೆಗಳನ್ನಿಟ್ಟು ನೂರಾರು ಜನ ರೈತರು ಮತ್ತು ಕೃಷಿ ಕೂಲಿಗಾರರು ನವಂಬರ್ 16 ರಂದು ಮೆರವಣಿಗೆ ನಡೆಸಿ ತಹಶಿಲ್ದಾರ್ ರವರ ಕಛೇರಿ ಮುಂದೆ ಸತ್ಯಾಗ್ರಹ ನಡೆಸಿದರು. ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು. ನೂರಾರು ಜನ ಮಹಿಳೆಯರು ಇದರಲ್ಲಿ ಭಾಗವಹಿಸಿದ್ದರು. ಈ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ರೈತ ಸಂಘದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎಸ್.ವೆಂಕಟಾಚಲಯ್ಯ, ಕಾರ್ಮಿಕ ಮುಖಂಡ ರಾಮಯ್ಯ, ಆನೇಕಲ್ಲು ರೈತ ಸಂಘದ ಸಂಚಾಲಕ ಶಿವರಾಮರೆಡ್ಡಿ, ರಾಜ್ಯಪ್ರದಾನ ಕಾರ್ಯದರ್ಶಿ ಪಿ.ಜಗನ್ನಾಥ್ ಮತ್ತು ಶಿವರಾಮರೆಡ್ಡಿ ಮಾತನಾಡಿದರು.

ರಸ್ತಾ ರೋಕೋ

ಬರ ಪರಿಹಾರ ಕಾಮಗಾರಿ ತಕ್ಷಣ ಪ್ರಾರಂಭಿಸಬೇಕು, ಯಳವಂತಗಿ(ಬಿ) ಯಿಂದ ಬಬಲಾದ ಅಪ್ರೋಚ್ ರಸ್ತೆ ಕೆಲಸಕ್ಕಾಗಿ, ನೀರಿನ ಟ್ಯಾಂಕ್ ನಿರ್ಮಾಣ ಮಾಡಲು ಮತ್ತು ಆಶ್ರಯ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಭೂಮಿ ಸರ್ವೆ ಮಾಡಿ ನಿವೇಶನ ರಹಿತರಿಗೆ ವಿತರಿಸಬೇಕೆಂದು ಒತ್ತಾಯಿಸಿ ಇತ್ತೀಚಿನ ಕರ್ನಾಟಕ ಪ್ರಾಂತ ರೈತ ಸಂಘದ ಯಳವಂತಗಿ(ಬಿ) ಗ್ರಾಮ ಘಟಕದಿಂದ ರಸ್ತಾರೋಕೋ ನಡೆಯಿತು.

ತಹಶೀಲ್ದಾರರ ಆಶ್ವಾಸನೆ ಮೇರೆಗೆ ಒಂದು ಗಂಟೆವರೆಗೂ ನಡೆಸಿದ ರಸ್ತಾ ರೋಕೋವನ್ನು ಹಿಂತೆಗೆದುಕೊಳ್ಳಲಾಯಿತು. ನಂತರ ಸಭೆಯಲ್ಲಿ ವಿರೂಪಾಕ್ಷ ತಡಕಲ್ ಮಾತನಾಡಿದರು.

ಡಬ್ಬಲ್ ಬ್ಯಾರೆಲ್ ಬಂದೂಕು

ಪುಟ 4 ರಿಂದ

ರಾದ್ದರಿಂದ ನಿಲ್ಲಲು ಸಾಧ್ಯವೂ ಇರಲಿಲ್ಲ.

ಭಾರತ-ಚೀಣಾ ಘರ್ಷಣೆಯ ಹಿನ್ನಲೆಯಲ್ಲಿ ಆಗ ಅವಿಭಜಿತವಾಗಿದ್ದ ಕಮ್ಯುನಿಸ್ಟ್ ಪಕ್ಷದ ಎಡಪಂಥೀಯ ಮುಖಂಡರನ್ನೆಲ್ಲಾ ಜೈಲಿಗೆ ಹಾಕಿದಾಗ ಶ್ಯಾಮರಾವ್ ಹಾಗೂ ಗೋದಾವರಿಯವರನ್ನು ಬಂಧಿಸಲಾಯಿತು. ಶ್ಯಾಮರಾವ್ 1964 ರಲ್ಲಿ ಸಿಪಿಐ(ಎಂ)ನ ಏಳನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. ಆಗಲೂ ಅವರು ಜೈಲಿನಲ್ಲೇ ಇದ್ದರು. ಆದರೆ ಕೆಲವೇ ತಿಂಗಳಲ್ಲಿ ತೀವ್ರ ಹೃದಯಾಘಾತದಿಂದ ಅವರು ಜೈಲಿನಲ್ಲೇ ಮರಣಹೊಂದಿದರು(ಆಗಸ್ಟ್ 3, 1965). ಇದು ಪಕ್ಷಕ್ಕೂ ಗೋದಾವರಿಗೂ ಒಂದು ಬಹುದೊಡ್ಡ ಆಘಾತವಾಗಿತ್ತು. "ಡಬ್ಬಲ್ ಬ್ಯಾರಲ್ ಗನ್ನಿಗೆ ಒಂದು ಬ್ಯಾರಲ್ ಎಂದೆಂದಿಗೂ ಭಾಗವಾಗಿದೆ" ಎಂದು ಆಗಿನ ಮಹಾರಾಷ್ಟ್ರ ವಿಧಾನಸಭಾಧ್ಯಕ್ಷರು ಉದ್ಗರಿಸಿದ್ದರಂತೆ.

ಈ ಆಘಾತದಿಂದ ಚೇತರಿಸಿಕೊಳ್ಳಲು ಗೋದಾವರಿ ಪರುಳೇಕರ್‌ರವರಿಗೆ ಹಲವು ತಿಂಗಳುಗಳೇ ಹಿಡಿದರೂ 1966 ರ ಏಪ್ರಿಲ್‌ನಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಆಕೆ ತನ್ನ ಚಟುವಟಿಕೆಗಳನ್ನು ಮುಂದುವರಿಸಿದರು. ಸಿಪಿಐ(ಎಂ) ಕೇಂದ್ರ ಸಮಿತಿಗೆ ಚುನಾಯಿತರಾದರು. ಅಂದಿನಿಂದ 1992 ರಲ್ಲಿ ಅನಾರೋಗ್ಯದಿಂದ ಸ್ವಯಂ ಇಚ್ಛೆಯಿಂದ ಕೆಳಗಿಳಿಯುವವರೆಗೆ ಅವರು ಕೇಂದ್ರ ಸಮಿತಿ ಸದಸ್ಯರಾಗಿ ದುಡಿದರು. 1986 ರಲ್ಲಿ ಪಾಟ್ನಾದಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ ಸುವರ್ಣ ಜಯಂತಿ ಸಮ್ಮೇಳನದಲ್ಲಿ ಆಕೆಯನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಈ ಸ್ಥಾನವನ್ನಲಂಕರಿಸಿದ ಏಕೈಕ ಮಹಿಳೆ ಅವರು.

ಗೋದಾವರಿ ಪರುಳೇಕರ್ ಇನ್ನೂ ಹಲವು ಪ್ರಶಸ್ತಿಗಳನ್ನು ಪಡೆದರು. ವಾರಲೀ ಬಂಡಾಯ ಕುರಿತ ಅವರ ಕೃತಿ 'ಮಾನವ ಎಚ್ಚೆತ್ತಾಗ'ಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ಪ್ರಶಸ್ತಿ ದೊರೆಯಿತು. ನಿಸ್ವಾರ್ಥ ಸಾಮಾಜಿಕ ಸೇವೆಗಾಗಿ ಲೋಕಮಾನ್ಯ ಫುಲೆ ಪ್ರಶಸ್ತಿ ಪಡೆದರು. ಎಲ್ಲಕ್ಕೂ ಮಿಗಿಲಾಗಿ ಮಾರ್ಚ್ 24, 1995 ರಂದು ಮಹಾರಾಷ್ಟ್ರ ಕಿಸಾನ್ ಸಭಾ ಹಾಗೂ ವಾರಲೀ ಹೋರಾಟದ ಸುವರ್ಣ ಜಯಂತಿಯ ಸಂದರ್ಭದಲ್ಲಿ ಅವರ ಸಾರ್ವಜನಿಕ ಸನ್ಮಾನ ನಡೆಯಿತು. ಇದರಲ್ಲಿ 30 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಕಳೆದ ವರ್ಷ ಅಕ್ಟೋಬರ್ 8, 1996 ರಂದು ಡಬ್ಬಲ್ ಬ್ಯಾರೆಲ್ ಗನ್ನಿನ ಈ ಎರಡನೇ ಬ್ಯಾರೆಲ್ ಕೂಡ ಮೌನವಾಯಿತು. ○

ಹೀಗೆರಡು ಸರಳ ಮದುವೆ

ಹೌದು, ಶಿರೋನಾಮೆ ನೋಡಿ ಬೆಚ್ಚಿ ಬೀಳಬೇಡಿ. ಖಂಡಿತ ಸರಳವೆಂದರೆ ಸರಳ ಮದುವೆಯೇ ಅವು. ಮಂತ್ರ ಘೋಷಣೆಗಳಿಲ್ಲ, ವಾದ್ಯಮೇಳಗಳಿಲ್ಲ, ಪುರೋಹಿತರಂತೂ ಇಲ್ಲವೇ ಇಲ್ಲ. ಮಂತ್ರಾಕ್ಷತೆ ಇಲ್ಲವೇ ಇಲ್ಲ. ಮದುವೆ ಎಂದಾಕ್ಷಣ 'ಅದ್ದೂರಿ' ಪದಕ್ಕೆ ಭಾರಿ ಬೆಲೆ ಎನ್ನುವ ಸ್ಥಿತಿ ಇಂದಿನ ಸಮಾಜದಲ್ಲಿದೆ. ಆದರೆ ಮದುವೆಗೂ ಅದ್ದೂರಿ ಪದಕ್ಕೂ ಸಂಬಂಧವೇ ಇಲ್ಲವೆನ್ನುವುದನ್ನು ಎರಡು ಜೋಡಿ ಅತೀ ಸರಳ ರೀತಿಯಲ್ಲಿ ಬಾಳಸಂಗಾತಿಗಳಾಗಿ ಸಾಬಿತು ಮಾಡಿದ್ದಾರೆ.

ಅಂದು 13ನೇ ಅಕ್ಟೋಬರ್ 1996 ನೇ ಸೋಮವಾರ ಮಧ್ಯಾಹ್ನ 3 ಗಂಟೆಗೆ ಮದುವೆ ಎನ್ನುವ ಆಹ್ವಾನ ನೀಡಿದ್ದರಾದರೂ ಎರಡು ಜೋಡಿ ಸಿಪಿಐ(ಎಂ) ನ 4ನೇ ತಾಲ್ಲೂಕು ಸಮ್ಮೇಳನದ ಸಿದ್ಧತೆಯಲ್ಲಿ ಬಹಿರಂಗ ಸಭೆಯಲ್ಲಿ ಮಧ್ಯಾಹ್ನ ೩ ರವರೆಗೂ ಕಳೆದವರೇ.

ಮದುವೆ ನಂತರ ಊಟ ಸಾಮಾನ್ಯ. ಆದರೆ ಇಲ್ಲಿ ಅದದ್ದೇ ಬೇರೆ. ಬಂದವರಿಗೆಲ್ಲರಿಗೂ ಮೊದಲೇ ಊಟ. ನಂತರವಷ್ಟೇ ಮದುವೆ ವೇದಿಕೆ ಸಿದ್ಧ, ಅದೂ ಸರಳವಾಗೇ ಇತ್ತು. ಕೇವಲ ಐದೇ ಐದು ಕುರ್ಚಿಗಳು ಕಾರ್ಯಕ್ರಮದ ಕೇಂದ್ರ ಬಿಂದುಗಳಾದ ನಾಲ್ವರು ವಧೂವರರು ಹಾಗೂ ಮುಖ್ಯ ಅತಿಥಿಯೊಬ್ಬರಿಗೆ ಮಾತ್ರ. ಉಳಿದಂತೆ ಛತ್ರವಿಡೀ ಜನ ತುಂಬಿದ್ದರು. ಎಲ್ಲರೂ ವಧೂವರರಿಗೆ ಶುಭಹಾರೈಸುವುದಕ್ಕಾಗಿಯೇ ಬಹಳ ಹೊತ್ತಿನಿಂದ ಕಾದಿದ್ದರೂ ಆದರೆ ಅವರ ಕೈಗೆ ಮಂತ್ರಾಕ್ಷತೆ ಕೊಡಲೇ ಇಲ್ಲ.

ಸಿಪಿಐ(ಎಂ) ನ ರಾಜ್ಯ ಸಮಿತಿ ಸದಸ್ಯ ಯು.ಬಸವರಾಜ್ ವಧೂವರರಾದ ಎಸ್.ಜಗನ್ನಾಥ್, ಮಾಳಮ್ಮ.ಪಿ ಮತ್ತು ರಂಗಪ್ಪದಾಸರ, ಎ.ಟಿ.ಲಲಿತ ಹಾಗೂ ಮುಖ್ಯ ಅತಿಥಿಯಾಗಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಅವರನ್ನು ವೇದಿಕೆಗೆ ಆಹ್ವಾನಿಸಿ ಎಲ್ಲರನ್ನು ಸ್ವಾಗತಿಸಿದರು.

ನಾಲ್ವರೂ ವಧೂವರರಿಗೂ ಒಂದೊಂದು ಹೂವಿನಹಾರ ಕೊಡಲಾಯಿತು. ಪರಸ್ಪರ ಹಾರ ವಿನಿಮಯ ಮಾಡಲು ವಧೂವರರಿಗೆ ಸೂಚನೆ ನೀಡಲಾಯಿತು. ತಕ್ಷಣವೇ ಎಲ್ಲ ಹಿತೈಷಿಗಳೂ ಚಪ್ಪಾಳೆ ತಟ್ಟುವ ಮೂಲಕ ಆ ವಧೂವರರನ್ನು ದಂಪತಿಗಳೆಂದು ಅಂಗೀಕರಿಸಿದರು.

ನಂತರ ಮಾತನಾಡಿದ ಮುಖ್ಯ ಅತಿಥಿ ಜಿ.ಎನ್.ನಾಗರಾಜ್ ಇಂತಹ ಸರಳ ಮದುವೆಗಳನ್ನು ನೋಡಿ ಸಂತಸಪಡುವುದಷ್ಟೇ ಅಲ್ಲ ಸಮಾರಂಭದಲ್ಲಿನ ಹಿತೈಷಿಗಳು ತಮ್ಮ ಮಕ್ಕಳಿಗೂ ಇದೇ ತರನಾಗಿ ಅತೀ ಸರಳವಾಗಿ ಮದುವೆ ಮಾಡಲು ಕರೆ ನೀಡಿದರು. ಈ ರೀತಿ ಮದುವೆ ಮಾಡಲು ಪರವಾನಗಿ ನೀಡಿದ ವಧೂವರರ ತಂದೆ ತಾಯಿಯರಿಗೆ ಮೊದಲು ಅಭಿನಂದನೆ ಸಲ್ಲಿಸಿದ ಅವರು ನೂತನ ದಂಪತಿಗಳನ್ನು ಸಮಾಜ ಆದರ್ಶವೆಂದು ಪರಿಗಣಿಸುವಂತಾಗಲಿ ಎಂದು ಹಾರೈಸಿದರು. ಇದಕ್ಕಾಗಿ ಗುಲ್ಬರ್ಗಾದಿಂದ ಬಂದಿದ್ದ ವಿ.ಎಸ್. ಕೋದಂಡರಾಮ ಶುಭ ಹಾರೈಸಿ ದರು. ಜಿಲ್ಲಾ ಪಂಚಾಯತಿ ಸದಸ್ಯ ಕಾಂಗ್ರೆಸ ಹೆಚ್. ರಾಮಣ್ಣ, ಎ.ಪಿ.ಎಂ.ಸಿ.ಯ ದಳದ ಸದಸ್ಯ ಕೇಇಬಿ ಗಂಗಯ್ಯ, ಕಾಂಗ್ರೆಸ ಯುವಘಟಕದ ಅಧ್ಯಕ್ಷ ಸೂರಿಬಾಬು, ದಳದ ಕೆನ್ನಾಳ ಸುಭಾಶ್, ಪತ್ರಕರ್ತ ಬಸವರಾಜ್ ನೂತನ ದಂಪತಿಗಳನ್ನು ಹಾರೈಸಿ ಶುಭಕೋರಿದರು.

ತಾಲ್ಲೂಕಿನಲ್ಲಿಯೇ ಸರಳ ಮದುವೆಯನ್ನು ಆರಂಭಿಸಿದ ಹವಾಲ್ದಾರ್ ಕುಟುಂಬದ ಸದಸ್ಯ ರಂಗನಾಥ್ ಹವಾಲ್ದಾರ್ ಮಾತನಾಡಿ ದುಷ್ಟ ಸಂಪ್ರದಾಯಗಳನ್ನು ವಿರೋಧಿಸಿ ಸರಳ ಮದುವೆಯ ಪರಂಪರೆ ಬೆಳೆಯುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಮಂಡಲ ಸದಸ್ಯ ಆರ್.ಎಸ್.ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿದ್ದ ಯುವಕ ಯುವತಿಯರಿಗೆ ತಾವು ಇದೇ ರೀತಿಯಾಗಿ ಸರಳ ಮದುವೆಯಾಗಬೇಕೆನ್ನಿಸುವಂತಾದರೆ, ಪಾಲಕ ಪೋಷಕರಿಗೆ ತಮ್ಮ ಮಕ್ಕಳಿಗೆ ಆಡಂಬರವಿಲ್ಲದ ಮದುವೆ ಮಾಡಲು ಮನೋಭಾವ ಮೂಡಲು ಈ ವೇದಿಕೆ ಕಾರಣವಾಯಿತು.

ಶುಭಕೋರಿ ಮಾತನಾಡಿದ ಕೆಲ ಕಾಂಗ್ರೆಸದಸ್ಯರು ಈ ಕಾರ್ಯ ಕೇವಲ ಕಮ್ಯುನಿಸ್ಟರಿಂದ ಸಾಧ್ಯ. ಬುದ್ಧ ಬಸವ, ಅಲ್ಲಮ, ಅಂಬೇಡ್ಕರ್ ಎಲ್ಲರ ವಿಚಾರಧಾರೆಯನ್ನು ಸರಳ ಮದುವೆಯನ್ನು ಈ ವೇದಿಕೆ ಸಾಬೀತು ಮಾಡಿದೆ ಎಂದು ನುಡಿದರು. ಸಂಗೀತಗಾರ, ವಕೀಲ ಕರುಣಾನಿಧಿಯವರು ಹಲವು ಭಾವಗೀತೆ ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ಆರಂಭಗೊಂಡ ಎರಡೇ ತಾಸಿನಲ್ಲಿ ಕಾರ್ಯಕ್ರಮ ಮುಕ್ತಾಯ, ಸಿಪಿಐ(ಎಂ) ಸಮ್ಮೇಳನಕ್ಕೆ ವೇದಿಕೆ ತೆರವು.

ಭಾರತೀಯ ವಿಮೋಚನಾ ಸಮರ

ಪುಟ 4 ರಿಂದ


ಎರಡು ವರ್ಷ ಸೆಣಸಿದರು. 1924 ಮೇ 17 ರಂದು ಬ್ರಿಟಿಶರು ಸೀತಾರಾಂ ರಾಜುವನ್ನು ಸೆರೆಹಿಡಿದು ಕೊಂದರು. ಇತರ ಹಲವರಿಗೆ ಅಂಡಮಾನಿನಲ್ಲಿ ಕರಿನೀರಿನ ಶಿಕ್ಷೆಯಾಯಿತು.


ಈ ನಡುವೆ 1922 ರಲ್ಲಿ ಆಗಿನ ಯು.ಪಿ.ಯ ಗೋರಖ್ ಪುರ ಪ್ರದೇಶದ ಚೌರಿಚೌರಾದಲ್ಲಿ ಸರಕಾರೀ ದಮನ ತಾಳಲಾರದ ರೈತರು ಪೋಲೀಸ್ ಠಾಣೆಯೊಂದಕ್ಕೆ ಬೆಂಕಿಯಿಟ್ಟರು. 22 ಪೋಲೀಸರು ಸತ್ತರು. ಇದು ಅಹಿಂಸೆಯ ತತ್ವವನ್ನು ಬಿಟ್ಟ ಕ್ರಮ ಎಂದು ಗಾಂಧೀಜಿ ಏಕಪಕ್ಷೀಯವಾಗಿ ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡರು. ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರೂ, ಲಜಪತ್ ರಾಯ್, ಜವಾಹರಲಾಲ್ ನೆಹರೂ, ಸುಭಾಶ್ ಚಂದ್ರ ಬೋಸ್, ಈ ನಿರ್ಣಯವನ್ನು ವಿರೋಧಿಸಿದರು. ಆಂದೋಲನ ಎಲ್ಲ ರಂಗದಲ್ಲೂ ಮುಂದೊತ್ತುತ್ತಿದ್ದಾಗ, ಪ್ರತಿಷ್ಠೆಗಳಿಸುತ್ತಿದ್ದಾಗ ಅದನ್ನು ಹಿಂತೆಗೆದುಕೊಂಡಿದ್ದರಿಂದ ಜನಕ್ಕೆ ಸಿಟ್ಟು ಬಂದಿದೆ ಎಂದು ನೆಹರೂ ಹೇಳಿದರೆ ಸುಭಾಶ್ ಚಂದ್ ಬೋಸ್ ಜನಗಳ ಉತ್ಸಾಹ ಸ್ಫೋಟಗೊಳ್ಳುವ ಸನ್ನಿವೇಶದಲ್ಲಿದ್ದಾಗ ಹಿಂದೆ ಸರಿದದ್ದು 'ರಾಷ್ಟ್ರೀಯ ಅನಾಹುತ' ಎಂದರು. ಆಗಲಷ್ಟೇ ಕಮ್ಯುನಿಸ್ಟ್ ಆಂದೋಲನವನ್ನು ಸಂಘಟಿಸುತ್ತಿದ್ದ ಯುವ ಸಂಘಟಕರು ಸಾಮ್ರಾಜ್ಯಶಾಹಿ ಬಂದೂಕುಗಳಿಂದ ದಮನ ಮಾಡಲಾಗದ ಆಂದೋಲನವನ್ನು ರಾಜಿಯ ದಾರಿ ಅನುಸರಿಸುವ ಮುಖಂಡರನ್ನು ಅದು ಅವಲಂಬಿಸಿತು ಎಂದು ಅವರು ಅರ್ಥೈಸಿದರು.

ಈ ಘಟನೆಯಲ್ಲಿ 225 ರೈತರ ಮೇಲೆ ಕೊಲೆ ಮೊಕದ್ದಮೆ ಹಾಕಲಾಯಿತು. 122 ಮಂದಿಗೆ ಮರಣದಂಡನೆಯಾಯಿತು. ಆದರೆ 19 ರೈತರನ್ನು ನೇಣಿಗೇರಿಸಿದ ನಂತರ ಇತರರಿಗೆ ಅಂಡಮಾನಿನಲ್ಲಿ ಕರಿನೀರಿನ ಶಿಕ್ಷೆಗೊಳಪಡಿಸಲಾಯಿತು. 'ಕಮ್ಯುನಿಸ್ಟ್ ಅಂತರಾಷ್ಟ್ರೀಯ' ಈ ಅಮಾನುಷ ಶಿಕ್ಷೆಯನ್ನು ಖಂಡಿಸಿತು. ಆದರೆ ಭಾರತದಲ್ಲಿ ಈ ಬಗ್ಗೆ ಪ್ರತಿಭಟನೆ ನಡೆದಂತಿಲ್ಲ. ಸತ್ತ 22 ಪೋಲೀಸರಿಗೆ ಚೌರಿಚೌರಾದಲ್ಲೊಂದು ಸ್ಮಾರಕವಿದೆ. ಚೌರಿಚೌರಾದ ರೈತ ಹುತಾತ್ಮರಿಗೆ ಯಾವ ಸ್ಮಾರಕವೂ ಅಲ್ಲಿಲ್ಲ.

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟ್ ... ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಯಲ್ಲಿ ಈಗಾಗಲೇ ನೀವು ಓದಿರುವಿರಿ. ಈ ಬಾರಿ ಮಹಾರಾಷ್ಟ್ರದ ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಯಲ್ಲಿ ಈಗಾಗಲೇ ನೀವು ಓದಿರುವಿರಿ. ಈ ಬಾರಿ ಮಹಾರಾಷ್ಟ್ರದ ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ 'ಪ್ರಜಾಪ್ರಭುತ್ವ ಆಂದೋಲನದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಪರುಳೇಕರ್ ದಂಪತಿಗಳ ನೆನಪು. ಇದು 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಪ್ರಕಟವಾದ ಅಶೋಕ್ ಧವಳೆಯವರ ಲೇಖನದ ಸಂಗ್ರಹಾನುವಾದ.

"ಡಬ್ಬಲ್ ಬ್ಯಾರೆಲ್ ಬಂದೂಕು" ಶ್ಯಾಮರಾವ್ ಮತ್ತು ಗೋದಾವರಿ ಪರುಳೇಕರ್





ಕಾಮ್ರೇಡ್ ಶ್ಯಾಮರಾವ್ ಪರುಳೇಕರ್ ಹಾಗೂ ಕಾಮ್ರೇಡ್ ಗೋದಾವರಿ ಪರುಳೇಕರ್ ಹೆಸರು ಐತಿಹಾಸಿಕ ವಾರಲೀ ಆದಿವಾಸಿ ಬಂಡಾಯದ ಕಥೆ ತಿಳಿದವರಿಗೆ ಚಿರಪರಚಿತ. 1945-47 ರಲ್ಲಿ ನಡೆದ ಈ ವಾರಲೀ ಬಂಡಾಯ ಸ್ವಾತಂತ್ರ್ಯ ಹೋರಾಟದ ಒಂದು ಅಭಿನ್ನ ಭಾಗವಾಗಿಯೇ ಆಗಿತ್ತು. ಆದರೆ ಇದಕ್ಕೆ ನೇತೃತ್ವ ನೀಡಿದ್ದ ಪರುಳೇಕರ್ ದಂಪತಿಗಳು ಇದಕ್ಕೂ ಒಂದೂವರೆ ದಶಕಗಳ ಹಿಂದೆ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದವರು ಎಂದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ.

ಶ್ಯಾಮರಾವ್ ಪರುಳೇಕರ್ ಹುಟ್ಟಿದ್ದು ಅಕ್ಟೋಬರ್ 2, 1902 ರಂದು ಬಿಜಾಪುರದ ದೀವಾನರ ಮಗನಾಗಿ. ಉನ್ನತ ಅಧ್ಯಯನಕ್ಕೆ ಮುಂಬೈಗೆ ಹೋದ ಶ್ಯಾಮರಾವ್ ಮೊದಲ ದರ್ಜೆಯಲ್ಲಿ ತತ್ವ ಶಾಸ್ತ್ರದಲ್ಲಿ ಮಾಸ್ಟರ್ಸ್ ಪದವಿಯನ್ನು ಪಡೆದಾಗ ಅವರು ಕಾನೂನು ಶಿಕ್ಷಣಕ್ಕೆ ಇಂಗ್ಲೆಂಡಿಗೆ ಹೋಗಬೇಕೆಂಬುದು ಅವರ ತಂದೆಯ ಅಭಿಲಾಷೆಯಾಗಿತ್ತು. ಆದರೆ ಶ್ಯಾಮರಾವ್‌ರನ್ನು ಆಗಲೇ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಆವರಿಸಿತ್ತು. ಮುಂಬೈಯಲ್ಲಿ ಕಾನೂನು ಶಿಕ್ಷಣ ಆರಂಭಿಸಿ ಗೋಪಾಲ ಕೃಷ್ಣ ಗೋಖಲೆ ಸ್ಥಾಪಿಸಿದ್ದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಸೇರಿ ಸಾಮಾಜಿಕ ಸೇವೆಯಲ್ಲಿ ತೊಡಗಿದರು. ಸಿಟ್ಟಿಗೆದ್ದ ತಂದೆ ತನ್ನ ಆಸ್ತಿಯಲ್ಲಿ ಪಾಲು ಸಿಗದಂತೆ ಮಾಡುವುದಾಗಿ ಬೆದರಿಸಿದಾಗ ಶ್ಯಾಮರಾವ್ ತಾನು ಈಗಾಗಲೇ ಈ ಬಗ್ಗೆ ಕಾಗದ ಪತ್ರಗಳನ್ನು ತಯಾರಿಸಿದ್ದು ತನ್ನ ಪಾಲಿನ ಹಕ್ಕನ್ನು ತ್ಯಜಿಸಿರುವುದಾಗಿ ಬರೆದರಂತೆ.

ಗೋದಾವರಿ ಗೋಖಲೆ ಜನಿಸಿದ್ದು ಆಗಸ್ಟ್ 14, 1907 ರಂದು ಗೋಪಾಲ ಕೃಷ್ಣ ಗೋಖಲೆಯವರ ಸೋದರ ಸಂಬಂಧಿ ಪ್ರಖ್ಯಾತ ವಕೀಲ ಎಲ್.ಆರ್. ಗೋಖಲೆಯ ಮಗಳಾಗಿ. ಗೋದಾವರಿ ಪುಣೆಯಲ್ಲಿ ಅರ್ಥಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರದ ಪದವಿ ಪಡೆದು ನಂತರ ಕಾನೂನು ಅಧ್ಯಯನ ನಡೆಸಿ ಮಹಾರಾಷ್ಟ್ರದ ಪ್ರಥಮ ಕಾನೂನು ಪದವೀಧರೆಯಾದರು. ವಿದ್ಯಾರ್ಥಿ ಆಂದೋಲನದಲ್ಲಿ ಸಕ್ರಿಯರಾಗಿದ್ದ ಅವರು ಸ್ವಾತಂತ್ರ್ಯ ಆಂದೋಲನದತ್ತ ಆಕರ್ಷಿತರಾದರು. 1932 ರಲ್ಲಿ ವೈಯುಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು. ಇದರಿಂದ ತಂದೆ ಕುಪಿತರಾದರು. ಗೋದಾವರಿ ಕುಟುಂಬದ ಸಂಬಂಧ ಕಡಿದುಕೊಂಡು ಮುಂಬೈಗೆ ಬಂದರು. ಅವರೂ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಸೇರಿದರು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಒಂದು ಮಂದಗಾಮಿ ನಿಲುವಿನ ಆದರೆ ದೇಶಪ್ರೇಮಿಯಾದ ಸಂಘಟನೆ, ಈ ಸಂಘಟನೆಯ ಆರು ಉದ್ದೇಶಗಳಲ್ಲಿ ಐದು ಸಾಮಾನ್ಯ ಸ್ವರೂಪದ್ದು. ಆದರೆ ಒಂದು ಮಾತ್ರ ಭಿನ್ನ ರೀತಿಯದ್ದು- "ಸಾರ್ವಜನಿಕ ಪ್ರಶ್ನೆಗಳ ಒಂದು ಜಾಗರೂಕ ಅಧ್ಯಯನದ ಆಧಾರದ ಮೇಲೆ ದೇಶದ ಸಾರ್ವಜನಿಕ ಜೀವನವನ್ನು ಬಲಪಡಿಸಲು ರಾಜಕೀಯ ಶಿಕ್ಷಣ ಹಾಗೂ ಚಳುವಳಿಯ ಕೆಲಸವನ್ನು ಸಂಘಟಿಸುವುದು".

ಈ ಉದ್ದೇಶದ ಪ್ರಕಾರ ಶ್ಯಾಮರಾವ್ ಮತ್ತು ಗೋದಾವರಿ ಕಾರ್ಮಿಕರನ್ನು ಹಾಗೂ ನಂತರ ರೈತರನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿದರು. ಆಗಿನ್ನೂ ಅವರಿಬ್ಬರೂ ಕಮ್ಯುನಿಸ್ಟರಾಗಿರಲಿಲ್ಲ. ಆದರೂ ಸ್ವಾತಂತ್ರ್ಯವೆಂದರೆ ಬ್ರಿಟಿಶ್ ರಾಜ್ಯಭಾರದ ಅಂತ್ಯ ಮಾತ್ರವೇ ಅಲ್ಲ, ಕೋಟ್ಯಾಂತರ ಶ್ರಮಜೀವಿಗಳಿಗೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನ್ಯಾಯ ಈ ಸ್ವಾತಂತ್ರ್ಯದ ಭಾಗವೆಂದು ಅವರಿಗನ್ನಿಸಿತ್ತು. ಆದ್ದರಿಂದ ಈ ದುಡಿಯುವ ಜನಗಳನ್ನು ಸಂಘಟಿಸುವುದು ಅವರಿಗೆ ಸ್ವಾತಂತ್ರ್ಯ ಹೋರಾಟದ ಭಾಗವೇ ಆಗಿತ್ತು. ಈ ಅನುಭವವೇ ಮುಂದೆ ಅವರನ್ನು ಕಮ್ಯುನಿಸ್ಟ್ ಪಕ್ಷ ಸೇರುವಂತೆ ಮಾಡಿತು.

ಶ್ಯಾಮರಾವ್ ಜವಳಿ ಕಾರ್ಮಿಕರು, ಚರ್ಮ ಕಾರ್ಮಿಕರು ಹಾಗೂ ಬೆಂಕಿಪೆಟ್ಟಿಗೆ ಉದ್ದಿಮೆಯ ಕಾರ್ಮಿಕರನ್ನು ಸಂಘಟಿಸಿದರು. ಕೆಲವು ಮಹತ್ವಪೂರ್ಣ ವಿಜಯಗಳನ್ನು ಪಡೆದರು. ಈ ಕಾರ್ಮಿಕರು ರೈತ ಕುಟುಂಬಗಳಿಂದ ಬಂದವರಾಗಿದ್ದರು. ಇವರಿಂದಾಗಿಯೇ ರೈತರ ಸಂಘಟನೆಯಲ್ಲೂ ತೊಡಗಿದರು. ಅಂಬೇಡ್ಕರ್ ರವರ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸೇರಿ ಜಾತಿ-ವಿರೋಧಿ ಹೋರಾಟದಲ್ಲೂ ಸಕ್ರಿಯ ಪಾತ್ರ ವಹಿಸಿದರು. ಈ ಪಕ್ಷದ ಪ್ರತಿನಿಧಿಯಾಗಿ 1937 ರಲ್ಲಿ ಶ್ಯಾಮರಾವ್ ಮುಂಬೈ ವಿಧಾನ ಸಭೆಗೆ ಆಯ್ಕೆಯಾದರು. ಅಲ್ಲಿ ಖೋಟಿ ಎಂಬ ಭೂಮಾಲಕ ಪದ್ಧತಿಯ ರದ್ಧತಿಗಾಗಿ ಹೋರಾಡಿದರು. ಕೊನೆಗೂ ಆ ಪದ್ಧತಿ ರದ್ದಾಯಿತು. 1938 ರಲ್ಲಿ ಜಿನೇವಾದಲ್ಲಿ ನಡೆದ ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಶ್ಯಾಮರಾವ್ ಪರುಳೇಕರ್ ಭಾರತದ ಕಾರ್ಮಿಕರ ಪ್ರತಿನಿಧಿಯಾಗಿ ಭಾಗವಹಿಸಿದರು.

ಇತ್ತ ಗೋದಾವರಿ ಗೋಖಲೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಆಶ್ರಯದಲ್ಲಿ ಬೃಹತ್ ಸಾಕ್ಷರತಾ ಪ್ರಚಾರ ಕೈಗೆತ್ತಿಕೊಂಡರು-ಮುಖ್ಯವಾಗಿ ಮುಂಬೈಯ ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ. ಇದು ಮಹಾರಾಷ್ಟ್ರದಲ್ಲೇ ಪ್ರಪ್ರಥಮ ಸಾಕ್ಷರತಾ ಆಂದೋಲನವಾಗಿತ್ತು. ಇವರ ಕೆಲಸದಿಂದ ಪ್ರಭಾವಿತರಾದ ಆಗಿನ ಕಾಂಗ್ರೆಸ್ ಮುಖ್ಯಮಂತ್ರಿ ಬಿ.ಜಿ.ಖೇರ್ ಸರಕಾರ ಆರಂಭಿಸಿದ್ದ ವಯಸ್ಕ ಸಾಕ್ಷರತೆಯ ವಿಭಾಗದ ಮುಖ್ಯಸ್ಥೆಯಾಗಲು ಆಹ್ವಾನಿಸಿದರಂತೆ. ಆದರೆ ಆಗ ತೀವ್ರಗಾಮಿಯಾಗುತ್ತಿದ್ದ ಗೋದಾವರಿ ಈ ಆಹ್ವಾನವನ್ನು ತಿರಸ್ಕರಿಸಿದರು.

ಗೋದಾವರಿ ಕಾರ್ಮಿಕ ವರ್ಗದ ಹೊಸದೊಂದು ವಿಭಾಗವನ್ನು ಮೊದಲ ಬಾರಿಗೆ ಸಂಘಟಿಸಿದರು. ಅದೆಂದರೆ ಮನೆಗೆಲಸದವರು. ರೈತರ ಸಂಘಟನೆಯಲ್ಲೂ ಅವರು ತೊಡಗಿದರು.

ಮೇ 24, 1939 ರಂದು ಶ್ಯಾಮರಾವ್ ಗೋದಾವರಿ ವಿವಾಹ ವಾದರು. ಇದು 25 ವರ್ಷಗಳಿಗೂ ಹೆಚ್ಚು ಕಾಲದ ಒಂದು ವಿಶಿಷ್ಟ ರಾಜಕೀಯ ಹಾಗೂ ವೈಯಕ್ತಿಕ ಜಂಟಿ ಬಾಳಿನ ಆರಂಭವಾಗಿತ್ತು.

ತಂತಮ್ಮ ರಂಗಗಳಲ್ಲಿನ ಶ್ರೀಮಂತ ಅನುಭವಗಳು ಈ ವೇಳೆಗಾಗಲೇ ಅವರಲ್ಲಿ ಸೈದ್ಧಾಂತಿಕ ಮಂಥನ ಆರಂಭಿಸಿತ್ತು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಅಥವಾ ಅಂಬೇಡ್ಕರ್ ರವರ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ತಾವು ಬಯಸುವ ತೀವ್ರಗಾಮಿ ಸಾಮಾಜಿಕ ಬದಲಾವಣೆಯ ನಿಜವಾದ ಸಾಧನಗಳಾಗಲು ಸಾಧ್ಯವಿಲ್ಲ ಎಂದು ಅವರಿಗೆ ಅನ್ನಿಸಲಾರಂಭಿಸಿತ್ತು. ಆಗಲೇ ಮಾರ್ಕ್ಸ್‌ವಾದದ ಅಧ್ಯಯನ ಆರಂಭಿಸಿದ್ದರು. ತಮ್ಮ ವರ್ಗ ಹೋರಾಟದ ಅನುಭವಗಳಿಗೆ ಅದನ್ನು ಅನ್ವಯಿಸಿದರು. ಎರಡನೇ ಮಹಾಯುದ್ಧದ ಆರಂಭ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಿತು. 1938-39 ರಲ್ಲಿ ಅವರು ಕಮ್ಯುನಿಸ್ಟ್ ಪಕ್ಷ ಸೇರಿದರು.

ಎರಡನೇ ಮಹಾಯುದ್ಧಕ್ಕೆ ಬೆಂಬಲ ನೀಡಬೇಕೇ ಬೇಡವೇ ಎಂಬ ಬಗ್ಗೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಯಲ್ಲಿ ತೀವ್ರ ವಾಗ್ವಾದವೆದ್ದಿತು. ಬ್ರಿಟಿಶರನ್ನು ಬೇಷರತ್ತಾಗಿ ಬೆಂಬಲಿಸ ಬೇಕೆಂದು ಉನ್ನತ ಮುಖಂಡರು ಬಯಸಿದರು. ಷರತ್ತಿನ ಮೇಲೆ ಬೆಂಬಲ ನೀಡಬೇಕೆಂದು ಇನ್ನೂ ಕೆಲವು ಮುಖಂಡರು ಹೇಳಿದರು. ಸಂಪೂರ್ಣವಾಗಿ ವಿರೋಧಿಸಬೇಕು ಎಂದು ಪರುಳೇಕರ್ ದಂಪತಿಗಳು ವಾದಿಸಿದರು. ಅಷ್ಟೇ ಅಲ್ಲ, ಅವರು ಯುದ್ಧ-ವಿರೋಧಿ ಪ್ರಚಾರಕ್ಕೆ ಧುಮುಕಿದರು. ಇತರ ಕಮ್ಯುನಿಸ್ಟ್ ಮುಖಂಡರೊಂದಿಗೆ ಮುಂಬೈಯಲ್ಲಿ ಮೊದಲ ಯುದ್ಧ-ವಿರೋಧಿ ಮುಷ್ಕರ ಸಂಘಟಿಸಲು ನೆರವಾದರು.

ಜವಳಿ ಕಾರ್ಮಿಕರ ಮುಷ್ಕರದಲ್ಲಿ ಹಲವು ಹಿರಿಯ ಕಮ್ಯುನಿಸ್ಟ್ ನಾಯಕರನ್ನು ಬ್ರಿಟಿಶರು ಬಂಧಿಸಿದರು. ನಂತರ ಶ್ಯಾಮರಾವ್ ಪರುಳೇಕರರನ್ನೂ ಬಂಧಿಸಿದರು. ಇವರೆಲ್ಲರ ಗೈರು ಹಾಜರಿಯಲ್ಲಿ ಗೋದಾವರಿ ಪರುಳೇಕರ್ ಮತ್ತಿತರರು 40 ದಿನಗಳ ಜವಳಿ ಕಾರ್ಮಿಕರ ಮುಷ್ಕರಕ್ಕೆ ನೇತೃತ್ವ ನೀಡಿದರು. ಅವರನ್ನೂ ಬಂಧಿಸಲಾಯಿತು. 2 ವರ್ಷಗಳ ನಂತರ 1942 ರಲ್ಲಷ್ಟೇ ಅವರನ್ನು ಬಿಡುಗಡೆ ಮಾಡಲಾಯಿತು.

ಬ್ರಿಟಿಶರು ಬಂಧಿಸಿದಾಗ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಕೂಡಾ ಅವರಿಬ್ಬರ ಸದಸ್ಯತ್ವವನ್ನು ರದ್ದು ಮಾಡಿತು. ಹೀಗೆ ಒಂದು ಅಧ್ಯಾಯ ಮುಗಿಯಿತು. ಆದರೆ ಇದು ಇನ್ನೊಂದು ಐತಿಹಾಸಿಕ ಅಧ್ಯಾಯದ ಆರಂಭವಾಗಿತ್ತಷ್ಟೆ.

1942 ರಲ್ಲಿ ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಇಬ್ಬರೂ ರೈತರ ಸಂಘಟನೆಗೆ ತಮ್ಮನ್ನು ಸಂಪೂರ್ಣ ವಾಗಿ ಅರ್ಪಿಸಿಕೊಂಡರು. 1945 ರ ಜನವರಿಯಲ್ಲಿ ಠಾಣೆ ಜಿಲ್ಲೆಯಲ್ಲಿ ಮಹಾರಾಷ್ಟ್ರ ಕಿಸಾನ್ ಸಭಾದ ಸ್ಥಾಪನಾ ಸಮ್ಮೇಳನ ನಡೆಯಿತು. ಅದರಲ್ಲಿ ವಾರಲೀ ಬುಡಕಟ್ಟು ಪ್ರತಿನಿಧಿಯ ಭಾಷಣ ಹಾಗೂ ಅದಕ್ಕೆ ಮೊದಲು ಸಮ್ಮೇಳನ ಸಂಘಟಿಸಲು ಸಂಚರಿಸುತ್ತಿದ್ದಾಗ ಈ ಬುಡಕಟ್ಟು ಜನಗಳ ಜೀವನ ಪರಿಸ್ಥಿತಿ ಪರುಳೇಕರ್ ಗಮನಸೆಳೆದಿತ್ತು. ಸಮ್ಮೇಳನದ ನಂತರ ಗೋದಾವರಿ ಈ ಆದಿವಾಸಿ ಪ್ರದೇಶದಲ್ಲಿ ವ್ಯಾಪಕವಾಗಿ ಸಂಚರಿಸಿ ಅವರಲ್ಲೊಬ್ಬರಾದರು. ನಂತರ ನಡೆದ ಎರಡು ವರ್ಷಗಳ ಕಾಲ ನಡೆದ ವಾರಲೀ ಹೋರಾಟ ಈಗ ಇತಿಹಾಸ ಪ್ರಸಿದ್ಧ. 1947 ರಲ್ಲಿ ಸ್ವಾತಂತ್ರ್ಯ ಸಿಗುವ ವೇಳೆಗೆ ಈ ಹೋರಾಟ ಯಶಸ್ವಿಯಾಯಿತು. ಆದರೆ ಈ ನಡುವೆ ಬ್ರಿಟಿಶರ ದಮನವನ್ನಷ್ಟೇ ಅಲ್ಲ ಮಧ್ಯಾವಧಿ ಕಾಂಗ್ರೆಸ್ ಸರಕಾರದ ದಮನವನ್ನೂ ಈ ಬುಡಕಟ್ಟು ಜನ ಎದುರಿಸಬೇಕಾಯಿತು. ಹೀಗೆ ಸ್ವಾತಂತ್ರ್ಯದ ಮೊದಲೇ ಕಾಂಗ್ರೆಸ್ಸಿನ ನಿಜಬಣ್ಣ ಬಯಲಾಗಿತ್ತು.

ಸ್ವಾತಂತ್ರ್ಯದ ನಂತರವೂ ಶ್ಯಾಮರಾವ್ ಪರುಳೇಕರ್ ಹಾಗೂ ಗೋದಾವರಿ ಪರುಳೇಕರ್ ಹೋರಾಟ ನಿಲ್ಲಲಿಲ್ಲ. ಅವರು ನಿಜವಾದ ಸ್ವಾತಂತ್ರ್ಯ ಹೋರಾಟಗಾರ

ಪುಟ 6 ಕ್ಕೆ




ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ದೇಶದ ಹೊರಗಡೆ, ಒಳಗಡೆ ನಡೆದ ಈ ಎಲ್ಲಾ ಕ್ರಾಂತಿಕಾರಿ ಪ್ರಯತ್ನಗಳು ವಿಫಲವಾದರೂ ಅವು ಬ್ರಿಟಿಶರಲ್ಲಿ ಭಯ ಹುಟ್ಟಿಸುವಲ್ಲಿ ಯಶಸ್ವಿಯಾದವು ಎನ್ನಬಹುದು. ಆದ್ದರಿಂದ ರಾಷ್ಟ್ರೀಯವಾದಿಗಳಲ್ಲಿ ಮಂದಗಾಮಿ ಗಳಾಗಿದ್ದವರೊಡನೆ ರಾಜಿ ಮಾಡಿಕೊಳ್ಳಲು ಬ್ರಿಟಿಶ್ ಆಳರಸರು ಪ್ರಯತ್ನಿಸಿದರು. ಈ ಪ್ರಯತ್ನದ ಭಾಗವಾಗಿ ಪ್ರಥಮ ಮಹಾಯುದ್ಧ ಮುಗಿವ ವೇಳೆಗೆ ಹಂತ ಹಂತವಾಗಿ ಸ್ವಯಮಾಡಳಿತ ಕೊಡುವುದಾಗಿ ಹೇಳಿ ಮಾಂಟೆಗ್ಯೂ ಚೇಮ್ಸ್‌ಫರ್ಡ್ ಸುಧಾರಣೆಯನ್ನು 1918 ರಲ್ಲಿ ಮುಂದಿಟ್ಟಿತು. 1919 ರಲ್ಲಿ ಹೊಸ 'ಭಾರತ ಸರಕಾರ ಕಾನೂನು' ತಂದಿತು. ಆದರೆ ಇದು ಮಂದಗಾಮಿ ರಾಷ್ಟ್ರೀಯವಾದಿಗಳಿಗೂ ನಿರಾಶಾದಾಯಕವಾಗಿತ್ತು. ಎಲ್ಲರೂ ಇದನ್ನು ತಿರಸ್ಕರಿಸಿದರು.

ಕೆಲವು ಭಾರತೀಯರ ಮನಸ್ಸಿನಲ್ಲಿ ಇನ್ನೂ ಉಳಿದಿದ್ದ ಭ್ರಮೆಗಳನ್ನು ರೌಲತ್ ಕಾನೂನು ಸಂಪೂರ್ಣ ಹರಿಸಿಬಿಟ್ಟಿತು. ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗೆ ತಿದ್ದುಪಡಿ ತಂದು ಕ್ರಾಂತಿಕಾರಿ ಚಟುವಟಿಕೆಗಳನ್ನು ಬಗ್ಗು ಬಡಿಯುವುದೇ ಈ ಕಾನೂನಿನ ಏಕೈಕ ಉದ್ದೇಶವಾಗಿತ್ತು. ಇದೇ ವೇಳೆಗೆ ತುರ್ಕಿ ಮತ್ತು ಅರಬ್ಬಿನಲ್ಲೂ ಬ್ರಿಟಿಶ್ ಸಾಮ್ರಾಜ್ಯಶಾಹಿ ಪಶ್ಚಿಮ ಏಶ್ಯಾದ ಸ್ವಾತಂತ್ರ್ಯದ ವಿರುದ್ಧ ಪಿತೂರಿಗಳ ನೇತೃತ್ವ ವಹಿಸಿತ್ತು.




ಮುಂಬೈಯ ಹರತಾಳದ ಒಂದು ಪೋಸ್ಟರ್

ರೌಲತ್ ಕಾನೂನಿನ ವಿರುದ್ಧ ಹಾಗೂ ಪಶ್ಚಿಮ ಏಶ್ಯಾದಲ್ಲಿ ಬ್ರಿಟಿಶ್ ಕುಯುಕ್ತಿಗಳ ವಿರುದ್ಧ ಕ್ರೋಧ ಭುಗಿಲೆದ್ದಿತು. ದಕ್ಷಿಣ ಆಫ್ರಿಕಾದಿಂದ ಆಗಷ್ಟೇ ಮರಳಿದ್ದ ಗಾಂಧೀಜಿ ಹಾಗೂ ಅಲಿ ಸೋದರರು (ಮೌಲಾನಾ ಮಹಮ್ಮದ್ ಆಲಿ ಮತ್ತು ಮೌಲಾನಾ ಶೌಕತ್ ಆಲಿ) ನೇತೃತ್ವದಲ್ಲಿ ಅದು ಹೋರಾಟದ ಸ್ವರೂಪ ತಳೆಯಿತು. ಏಪ್ರಿಲ್ 6, 1919 ರಂದು ದೇಶಾದ್ಯಂತ ಹರತಾಳ ನಡೆಯಿತು. ದಿಲ್ಲಿ, ಮುಂಬೈಗಳಲ್ಲಿ ಪೋಲೀಸ್ ಗೋಳಿಬಾರಿನಲ್ಲಿ ಹಲವು ಹಿಂದೂಗಳು- ಮುಸಲ್ಮಾನರು ಪ್ರಾಣ ಕಳಕೊಂಡರು. ಇದರಿಂದ ಹಿಂದೂ ಮುಸಲ್ಮಾನರು ಒಟ್ಟಾಗಿ ಬಲವಾದ ಪ್ರತಿರೋಧ ನೀಡಿದರು.


ಆಲಿ ಸೋದರರು

ಪಂಜಾಬಿನಲ್ಲಿ ಡಾ. ಸೈಫುದ್ದಿನ್ ಕಿಚ್ಲೂ ಹಾಗೂ ಡಾ. ಸತ್ಯಪಾಲ್‌ರನ್ನು ಬಂಧಿಸಿದ್ದನ್ನು ವಿರೋಧಿಸಿ ಏಪ್ರಿಲ್ 3, 1919 ರಂದು ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಪ್ರತಿಭಟನಾ ಸಭೆಯನ್ನು ಚದುರಿಸಲು ಗವರ್ನರ್ ಮೈಕಲ್ ಒಡ್ವಯರ್‌ನ ಆದೇಶದ ಮೇರೆಗೆ ಜನರಲ್ ಡಾಯರ್ ನಿರ್ದಯ ದಮನ ಕೈಳಿದ. ಜಲಿಯನ್‌ವಾಲಾಬಾಗ್‌ಗಿದ್ದ ಏಕೈಕ ಪ್ರವೇಶ ದ್ವಾರದಲ್ಲಿ ಮೆಶಿನ್‌ಗನ್, ಸೈನಿಕರನ್ನು ನಿಲ್ಲಿಸಿ ಬುಲೆಟ್‌ಗಳು ಖಾಲಿಯಾಗುವ ವರೆಗೂ ಗುಂಡು ಹಾರಿಸಲು ಡಾಯರ್ ಆದೇಶ ನೀಡಿದ. ಸುಮಾರು 2000 ದಷ್ಟು ಭಾರತೀಯರನ್ನು ಆ ದಿನ ಜನರಲ್ ಡಾಯರ್ ಗುಂಡಿನ ಬಾಯಿಗಿಟ್ಟು ಕೊಂದ. ಲಷ್ಕರಿ ಶಾಸನ ಹೇರಲ್ಪಟ್ಟು ಪಂಜಾಬ್‌ನ ಸಂಪರ್ಕ ದೇಶದ ಇತರ ಭಾಗಗಳಿಂದ ಕಡಿದು ಹೋಯಿತು. ಇಡೀ ತಿಂಗಳು ಬ್ರಿಟಿಶರ ಭಯೋತ್ಪಾದಕ ಕೃತ್ಯಗಳು ಮುಂದುವರೆ ದವು. ಸಾರ್ವಜನಿಕ ಛಡಿಯೇಟು ಇತ್ಯಾದಿ ಅತ್ಯಾಚಾರಗಳನ್ನು ನಡೆಸಲಾಯಿತು.


ಗುಂಡಿನ ಕಲೆಗಳಿಂದ ತುಂಬಿದ ಜಲಿಯನ್ ವಾಲಾಬಾಗ್ ಗೋಡೆ

ಈ ಹತ್ಯಾಕಾಂಡಕ್ಕೆ ದೇಶ-ವಿದೇಶಗಳಲ್ಲಿ ಭಾರೀ ಖಂಡನೆ ವ್ಯಕ್ತಗೊಂಡಿತು. ರವೀಂದ್ರನಾಥ್ ಠಾಗೋರ್ ತನಗೆ ಬ್ರಿಟಿಶ್ ಸಾಮ್ರಾಜ್ಯ ನೀಡಿದ್ದ ಅತ್ಯುನ್ನತ ಗೌರವ ಪದವಿಯನ್ನು ಹಿಂದಿರುಗಿಸಿದರು. ಇಂತಹ ಸಾಮ್ರಾಜ್ಯ ಶಾಹಿ ನೀಡಿದ ಗೌರವ ನನ್ನನ್ನು ಮುಳ್ಳಿನಂತೆ ಚುಚ್ಚುತ್ತದೆ ಎಂದು ವೈಸರಾಯ್‌ಗೆ ಬರೆದ ಪತ್ರದಲ್ಲಿ ಅವರು ತಿಳಿಸಿದರು. ಈ ಸರಕಾರವನ್ನು ತಿದ್ದಲು ಸಾಧ್ಯವಿಲ್ಲ, ಮುಗಿಸಬೇಕು" ಎಂದರು ಗಾಂಧೀಜಿ ತನ್ನ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ. ಲೆನಿನ್ 'ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ'ದ ಮೂರನೇ ಮಹಾಧಿವೇಶನದಲ್ಲಿ ಈ ಜಘನ್ಯ ಹತ್ಯಾಕಾಂಡದ ಪ್ರಸ್ತಾಪ ಮಾಡುತ್ತಾ ವಿಶ್ವ ಜನಸಂಖ್ಯೆಯಲ್ಲಿ ಭಾರೀ ಸಂಖ್ಯೆಯಲ್ಲಿರುವ ವಸಾಹತು ಹಾಗೂ ಅರೆ ವಸಾಹತುಗಳಲ್ಲಿನ ಶ್ರಮಜೀವಿ ಜನಗಳಲ್ಲಿ ರಾಜಕೀಯ ಪ್ರಜ್ಞೆ ಜಾಗ್ರತಗೊಂಡಿದೆ..... ಭಾರತ ಇದರ ನೇತೃತ್ವದಲ್ಲಿದೆ.... ಒಂದೆಡೆ ಉದ್ದಿಮೆ, ರೈಲು ಹಾಗೂ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ, ಇನ್ನೊಂದೆಡೆ ಮತ್ತೆ ಮತ್ತೆ ಹತ್ಯಾಕಾಂಡಗಳು (ಅಮೃತಸರ) ನಡೆಯುತ್ತಿವೆ. ಬ್ರಿಟಿಶರು ಸಾರ್ವಜನಿಕ ಛಡಿಯೇಟಿನಂತಹ ಅತ್ಯಾಚಾರಗಳಿಗಿಳಿದಿದ್ದಾರೆ" ಎಂದರು.


ಅಸಹಕಾರ ನಿರ್ಣಯವನ್ನು ಮಂಡಿಸುತ್ತಿರುವ ಗಾಂಧೀಜಿ

ಗಾಂಧೀಜಿ ನವಂಬರ್ 1919ರಲ್ಲಿ ಅಖಿಲ ಭಾರತ ಖಿಲಾಫತ್ ಆಂದೋಲನದ ಅಧ್ಯಕ್ಷರಾಗಿ ಆಯ್ಕೆಯಾದರು. ಡಿಸೆಂಬರ್ 1920 ರಲ್ಲಿ ಕಾಂಗ್ರೆಸ್ಸಿನ ನಾಗಪುರ ಅಧಿವೇಶನದಲ್ಲಿ ಅಹಿಂಸಾತ್ಮಕ ಅಸಹಕಾರ ಚಳುವಳಿಯ ಪ್ರಸ್ತಾಪ ಅಂಗೀಕಾರವಾಯಿತು. ಕಾಂಗ್ರೆಸ್ ಆಂದೋಲನ ಮತ್ತು ಖಿಲಾಫತ್ ಆಂದೋಲನದಲ್ಲಿ ಒಗ್ಗಟ್ಟು ತಂದ ಗಾಂಧೀಜಿ ಅಸಹಕಾರ ಚಳುವಳಿಯ ಮೂಲಕ ಒಂದು ವರ್ಷದಲ್ಲಿ ಸ್ವರಾಜ್ಯ ಗಳಿಸುವ ಹೋರಾಟದಲ್ಲಿ ಸೇರಿಕೊಳ್ಳಲು ಕರೆ ನೀಡಿದರು.

ದೇಶಾದ್ಯಂತ ಒಂದು ಅಭೂತಪೂರ್ವ ಆಂದೋಲನ ಆರಂಭವಾಯಿತು. ಹಿಂದೂ ಮುಸ್ಲಿಂ ಐಕ್ಯತೆ ಹೊಸ ಘಟ್ಟ ತಲುಪಿತು. ಮೇದಿನೀ ಪುರದ ರೈತರು ಕರ ನೀಡಲು ನಿರಾಕರಿಸಿದರು. ಗುಡೂರಿನ ರೈತರು ನಿರಾಕರಿಸಿದರು. ಉತ್ತರ ಪ್ರದೇಶದ ಛೋಟಾ ನಾಗಪುರದಲ್ಲಿ ಇಂತಹುದೇ ಚಳುವಳಿ ಆರಂಭವಾಯಿತು. ಸಣಬು ಕಾರ್ಖಾನೆಗಳು, ರೈಲ್ವೆ, ಅಸ್ಸಾಂ ಟೀತೋಟ ಎಲ್ಲಾ ಕಡೆಯೂ ಈ ಚಳುವಳಿ ಹರಡಿತು.


ಖಿಲಾಫತ್ ಮತ್ತು ಅಸಹಕಾರ ಆಂದೋಲನದ ಮಹಿಳಾ ಸ್ವಯಂ ಸೇವಕಿಯ ಪಡೆ

ಆಂಧ್ರಪ್ರದೇಶದಲ್ಲಿ ಅಲ್ಲೂರಿ ಸೀತಾರಾಂ ರಾಜು ನೇತೃತ್ವದಲ್ಲಿ ರಾಂಪಾ ಬಂಡಾಯ ನಡೆಯಿತು. ಬುಡಕಟ್ಟು ರೈತರು ಶಾಂತಿಯುತ ಮನವಿಗಳೆಲ್ಲಾ ವ್ಯರ್ಥವಾದ ಮೇಲೆ ಸರಕಾರಿ ದಮನದ ವಿರುದ್ಧ ಬಂಡೆದ್ದರು. ಸರಕಾರ ಸೀತಾರಾಂ ರಾಜು ಅವರನ್ನು ಹಿಡಿದುಕೊಟ್ಟರೆ 15000 ರೂ. ಬಹುಮಾನ ಘೋಷಿಸಿತು. ಆದರ ನೇತೃತ್ವದಲ್ಲಿ ಬುಡಕಟ್ಟು ರೈತರು ಬ್ರಿಟಿಶ್ ಸೈನ್ಯದೊಡನೆ

ಪುಟ 6 ಕ್ಕೆ

ಹಣಕಾಸು ಮಂತ್ರಿಗಳ ಸ್ಮಶಾನ ವೈರಾಗ್ಯದ ಹಿಂದೆ

ಕೇಂದ್ರ ಸರಕಾರದ ಹಣಕಾಸು ಮಂತ್ರಾಲಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ವಲಯದಲ್ಲೆಲ್ಲಾ ಈಗ ಬಂಡವಾಳ ಖಾತೆಯ ಪರಿವರ್ತನೀಯತೆಯ ಬಗ್ಗೆಯೇ ಮಾತು. ಆದರೆ ಆಶ್ಚರ್ಯವೆನಿಸುವಂತೆ ವಿಶ್ವ ಬ್ಯಾಂಕು ಭಾರತ ಈ ವಿಷಯದಲ್ಲಿ ಜಾಗರೂಕತೆಯಿಂದ ನಡೆದುಕೊಳ್ಳಬೇಕೆಂಬ ಸಲಹೆ ನೀಡಿತು. ವಿಶ್ವ ಬ್ಯಾಂಕಿನ ಈ ಧೋರಣೆ ಎಡಪಕ್ಷಗಳು ಈ ಕ್ರಮವನ್ನು ವಿರೋಧಿಸುವಂತಹ ಕಾರಣಕ್ಕಾಗಿ ಅಲ್ಲ, ಮೆಕ್ಸಿಕೊದಲ್ಲಿ 1994 ರಲ್ಲಿ ಉದ್ಭವವಾದ ಬಿಕ್ಕಟ್ಟು ಮತ್ತು ದಕ್ಷಿಣ ಏಶಿಯಾದ ದೇಶಗಳಲ್ಲಿ ಇಂದು ಉದ್ಭವಿಸಿರುವ ನಾಣ್ಯ ಬಿಕ್ಕಟ್ಟೇ ಈ ಧೋರಣೆಗೆ ಕಾರಣ. ಸಂಪೂರ್ಣ ಪರಿವರ್ತನೀಯತೆ ಭಾರತವನ್ನು ಜಾಗತಿಕ ಗಂಡಾಂತರಗಳಿಗೆ ತೆರೆದು ಅನಾಹುತವಾಗಬಾರದೆಂಬ ಎಚ್ಚರಿಕೆಯ ಧೋರಣೆ ಅಷ್ಟೇ.

ಅವರು ಹೇಳುವುದೇನೆಂದರೆ ಭಾರತದ ಆರ್ಥಿಕದ ಮೂಲಭೂತ ಅಂಶಗಳು ಇನ್ನೂ ಪೂರ್ಣ ಪರಿಪೂರ್ಣತೆಗೆ ಪಕ್ವವಾಗಿಲ್ಲ. ಹಾಗೆ ಪಕ್ವವಾಗುವವರೆಗೆ ಈ ಪೂರ್ಣ ಪರಿವರ್ತನೀಯತೆ ಬೇಡ. ಹಾಗಾದರೆ ಮೂಲಭೂತಗಳನ್ನು ಪಕ್ವಗೊಳಿಸಲು ಏನು ಮಾಡಬೇಕು?

ಇನ್ನೂ ಹೆಚ್ಚಿನ ಆರ್ಥಿಕ ಸುಧಾರಣೆಗಳಾಗಬೇಕು. ಆದಾಗಲೇ ಭಾರತದ ಆರ್ಥಿಕ ರೂಪಾಯಿಯ ಪೂರ್ಣ ಪರಿವರ್ತನೀಯತೆಗೆ ಪಕ್ವವಾಗುತ್ತದೆ. ಇದನ್ನೇ ನಮ್ಮ ಬೂರ್ಝ್ವಾ ಪತ್ರಿಕೆಗಳು ಹೇಳತೊಡಗಿವೆ.

ಎಡಪಕ್ಷಗಳು ಇದಕ್ಕೆ ತೊಡಕಾಗಿವೆ. ಅದರಲ್ಲೂ ಸಿಪಿಐ(ಎಂ), ಈ ಆರ್ಥಿಕ ಸುಧಾರಣೆಗಳನ್ನು ತೀವ್ರವಾಗಿ ವಿರೋಧಿಸುತ್ತಿವೆ. ಏಕೆಂದರೆ ಆರ್ಥಿಕ ಸುಧಾರಣೆಗಳ ಫಲ ಜನಸಾಮಾನ್ಯರಿಗೆ ದೊರೆಯುತ್ತಿಲ್ಲ.

ಎಡಪಕ್ಷಗಳ ಮತ್ತು ವಿಶ್ವಬ್ಯಾಂಕ್ ಮತ್ತು ಉದಾರೀಕರಣವಾದಿಗಳ ನಿಲುವುಗಳ ತಳಹದಿಯೇನು? ಹಿನ್ನೆಲೆಯೇನು?

ಹಣಕಾಸು ಮಂತ್ರಿಗಳು ಹಣಕಾಸು ಕೊರತೆಯನ್ನು ಒಟ್ಟುತ್ಪನ್ನದ ಶೇ. 4.5 ಕ್ಕೆ ಇಳಿಸಬೇಕು ಎಂದು ಗುರಿ ಹಾಕಿಕೊಂಡಿದ್ದಾರೆ. ಇದು ಒಟ್ಟುತ್ಪಾದನೆಯ ಬೆಳವಣಿಗೆ ಶೇ. 7ರಷ್ಟಿರುವಾಗ. ಆದರೆ ಈಗ ಒಟ್ಟುತ್ಪಾದನೆಯ ಬೆಳವಣಿಗೆಯ ಗುರಿಯನ್ನು ಆದೇ ಹಣಕಾಸು ಮಂತ್ರಾಲಯ ಶೇ. 6ಕ್ಕೆ ಇಳಿಸಿದೆ. ಬೆಳ ವಣಿಗೆ ಕಡಿಮೆ ಇದ್ದರೆ ಹಣಕಾಸು ಸಂಗ್ರಹ ಕಡಿಮೆಯಾಗಿ ಕೊರತೆ ಹೆಚ್ಚುತ್ತದೆ.

ಈ ರೀತಿ ಬೆಳವಣಿಗೆಯ ಗುರಿಯನ್ನೇ ಕಡಿಮೆ ಮಾಡಲು ಕಾರಣವೇನು? ಅತಿಯಾದ ಉತ್ಸಾಹದಲ್ಲಿ ಆಮದು ಉದಾರೀಕರಣ ಮಾಡಿ ಆಮದಿನ ಮೇಲಿನ ಸುಂಕವನ್ನು ಅಪಾರವಾಗಿ ಕಡಿತ ಮಾಡ ಲಾಯಿತು. ಇದರಿಂದ ಆದದ್ದೇ ನೆಂದರೆ ದೇಶೀ ಉತ್ಪಾದನೆಗೆ ಬಲವಾದ ಹೊಡೆತ ಬಿತ್ತು. ಬಿಟ್ಟುತ್ಪಾದನೆ ಕಡಿಮೆಯಾಯಿತು.

1997-98ರ ಬಜೆಟ್ ಮಂಡನೆ ಮಾಡುವಾಗ ಕಡಿಮೆ ತೆರಿಗೆ ಪ್ರಮಾಣ ವಿದ್ದರೆ ಹೆಚ್ಚೆಚ್ಚು ಜನ ತೆರಿಗೆ ತೆರುವುದರಿಂದ ತೆರಿಗೆ ಸಂಗ್ರಹಣೆ ಹೆಚ್ಚಾಗುತ್ತದೆ ಎಂದು ಹೇಳಲಾಗಿತ್ತು. ಈ ವಾದ ಅದನ್ನು ಪ್ರತಿಪಾದಿಸಿದ ಅಮೇರಿಕದಲ್ಲೇ ಯಶಸ್ವಿಯಾಗಿಲ್ಲವೆಂಬುದು ಸತ್ಯ. ಸಿಪಿಐ(ಎಂ) ಇಂತಹ ಕ್ರಮ ಯಶಸ್ವಿಯಾಗುವುದಿಲ್ಲವೆಂದರೆ ಕುಹಕವಾಡಲಾಗಿತ್ತು. ಈಗ ಪರಿಸ್ಥಿತಿಯೇನೆಂದರೆ ಗುರಿಗಿಂತ ಕಡಿಮೆ ತೆರಿಗೆ ಸಂಗ್ರಹವಾಗಿರುವುದು. ಶ್ರೀಮಂತರಿಗೆ ನೀಡಿರುವ ಈ ಅಪಾರ ಪ್ರಮಾಣದ ರಿಯಾಯಿತಿಗಳಿಂದ ಜನಸಾಮಾನ್ಯರ ಆದಾಯ ಹೆಚ್ಚಾಗುವುದು ಒತ್ತಟ್ಟಿಗಿರಲಿ ಸರಕಾರೀ ಆದಾಯವೂ ಹೆಚ್ಚಾಗಲಿಲ್ಲ.

ಈಗ ಸಿಪಿಐ(ಎಂ) ಬಗೆಗಿನ ಪುಕಾರನ್ನು ಪರೀಕ್ಷಿಸುವುದಾದರೆ ಸಿಪಿಐ(ಎಂ) ಹೆಚ್ಚೆಚ್ಚು ಸಹಾಯಧನವನ್ನು ನೀಡ ಬೇಕೆಂದು ಬಯಸುತ್ತದೆ. ಸಹಾಯಧನ ಸಾಮಾನ್ಯವಾಗಿ ಎರಡು ರೀತಿಯದು. ಒಂದನೆಯದು ಬಡ ಜನರಿಗೆ ನೀಡುವ ಸಹಾಯಧನ, ಎರಡನೆಯದು ಶ್ರೀಮಂತರಿಗೆ ರಿಯಾಯಿತಿ. ಕಳೆದ ಬಜೆಟ್ಟಿನಲ್ಲಿ 15000 ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿ ನೀಡಿದ್ದು ಎರಡನೆಯ ಗುಂಪಿಗೆ ಸೇರಿದ್ದು. ನಾವು ಕೇಳುತ್ತಿರುವುದು ಈ ಎರಡನೇ ತರಹದ ಸಹಾಯ ಧನವನ್ನು ನಿಲ್ಲಿಸಿ ಮೊದಲನೇ ತರಹದ ಸಹಾಯಧನವನ್ನು ಹೆಚ್ಚಿಸಿ ಎಂದು.

ಅವರ ವರ್ಗ ಗುಣಕ್ಕನುಗುಣವಾಗಿ ಈ ಉದಾರೀಕರಣವಾದಿಗಳು ಬಡವರಿಗೆ ನೀಡುವ ಸಹಾಯಧನವನ್ನೇ ತೆಗೆದು ಹಾಕಬೇಕೆಂದು ಕೇಳುತ್ತಾರೆ.

ಐದನೇ ವೇತನ ಆಯೋಗದ ವರದಿಯ ಜಾರಿ ಕೇಂದ್ರ ಸರಕಾರದ ಇಂತಹ ನಿಲುವಿಗೆ ಒಂದು ಉದಾಹರಣೆ. ಈ ವರದಿಯ ಜಾರಿಯಿಂದಾಗಿ ಸರಕಾರದ ಖರ್ಚು ಬಜೆಟ್ಟಿನಲ್ಲಿ ಅವಕಾಶ ಮಾಡಿದ್ದಕ್ಕಿಂತ 7000 ಕೋಟಿ ರೂಪಾಯಿ ಗಳಷ್ಟು ಹೆಚ್ಚಿತು. ಕೇಂದ್ರ ಹಣಕಾಸು ಮಂತ್ರಾಲಯ ಮಧ್ಯಕಾಲೀನ ಕ್ರಮಗಳಿಂದ 6880 ಕೋಟಿ ರೂಪಾಯಿಗಳ ಸಂಗ್ರಹಣೆಗೆ ಅನುವು ಮಾಡಿಕೊಂಡಿತು. ಹೊರೆ ಜನಸಾಮಾನ್ಯರಿಗೆ. ಇಷ್ಟೆಲ್ಲಾ ಮಾಡಿ ರೈಲ್ವೇ ಮಂತ್ರಾಲಯ ಮತ್ತು ಟೆಲಿಕಾಂ ಮಂತ್ರಾಲಯಗಳಿಗೆ ನೀವು ನಿಮ್ಮಲ್ಲಿನ ವೇತನ ಹೆಚ್ಚಳ ಸರಿತೂಗಿಸಲು ಹಣ ಸಂಗ್ರಹಣೆ ಮಾಡಿಕೊಳ್ಳಿ ಎಂದಿತು. ಈ ಮಂತ್ರಾಲಯಗಳು 4000 ಕೋಟಿ ರೂಪಾಯಿಗಳ ಹೊರೆಯನ್ನು ಜನ ಸಾಮನ್ಯರ ಹೆಗಲಿಗೆ ಹೊರಿಸಬೇಕು. ಹಣಕಾಸು ಮಂತ್ರಾಲಯಕ್ಕೆ ಮಾತ್ರ ಇದರಿಂದ 4000 ಕೋಟಿ ರೂಪಾಯಿಗಳ ನಿವ್ವಳ ಲಾಭ!! ಇದಲ್ಲದೆ ಈ ವಿಷಯದ ಮೇಲೆ ಸುಳ್ಳು ಪ್ರಚಾರ ಬೇರೆ.

ಇದಲ್ಲದೆ ವಿಶ್ವಬ್ಯಾಂಕಿನ ಈ ಹೇಳಿಕೆಯ ಹಿಂದೆಯೇ ಅಂತರ್‍ರಾಷ್ಟ್ರೀಯ ಸಂಸ್ಥೆಗಳಿಂದ ಸ್ಟ್ಯಾಂಡರ್ಡ್ ಅಂಡ್ ಪೂರ್ ಮತ್ತು ಮೂಡಿಯ ಅಂಕಪಟ್ಟಿಯೂ ಬಂದಿದೆ. ಇವೆಲ್ಲವುಗಳ ಒಟ್ಟಾರೆ ದುಷ್ಪರಿಣಾಮಗಳು ಆರ್ಥಿಕದ ಮೇಲೆ ಆಗಲಿದೆ. ಆದ್ದರಿಂದಲೇ ಸರಕಾರ ಎಡಪಕ್ಷಗಳ ಸಲಹೆಗಳನ್ನು ಸ್ವೀಕರಿಸಬೇಕೆನ್ನುವುದು.

ಆದರೆ ಕೇಂದ್ರ ಸರಕಾರ ಇದಕ್ಕೆ ತಯಾರಿಲ್ಲವಲ್ಲ.

(ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿಯವರ ಲೇಖನದ ಸಂಗ್ರಹಾನುವಾದ)

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಭಾರತದ ರಫ್ತಿಗೆ ಯುರೋಪಿನ ಹೊಡೆತ

ಭಾರತದಿಂದ ರಫ್ತಾಗುವ ಪ್ರಕರ ಸ್ಟೀಲ್ ಸರಳುಗಳ ಮೇಲೆ ಯುರೋಪಿನ ಕಮೀಷನ್ ದಂಡ ಸುಂಕ ವಿಧಿಸುವ ತಯಾರಿ ಮಾಡುತ್ತಿದೆ. ಭಾರತದ ಆಮದು ರಫ್ತು ನೀತಿಯಲ್ಲಿ ರಫ್ತಿಗೆ ನೀಡಿರುವ ರಿಯಾಯಿತಿಗಳು ಸಹಾಯಧನಕ್ಕೆ ಸಮ. ಸಹಾಯಧನ ನೀಡಿದ ಸರಕಿನ ಮೇಲೆ ಹೀಗೆ ಸುಂಕ ಹೇರಬೇಕಾಗುತ್ತದೆ. ಇದು ಯುರೋಪಿಯನ್ ಸಮುದಾಯದ ನಿಲುವು.

ಗ್ಯಾಟ್ ಒಪ್ಪಂದದಿಂದಾಗಿ ಭಾರತದ ರಫ್ತು ಹೆಚ್ಚಾಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಸಾಮ್ರಾಜ್ಯಶಾಹಿ ದೇಶಗಳು ಒಂದೊಂದೇ ಕಾರಣ ನೀಡಿ ಭಾರತದ ರಫ್ತನ್ನು ತಡೆಯುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಹಿಂದೆ ಎಡಪಕ್ಷಗಳು ಇಂತಹ ಸಾಧ್ಯತೆಯನ್ನು ಎತ್ತಿ ತೋರಿಸಿದಾಗ ಇದು ಬರೀ ಊಹೆ ಎನ್ನಲಾಗುತ್ತಿತ್ತು. ಈಗ ನಿಜ ಪರಿಸ್ಥಿತಿಯ ಅರಿವು ಉದಾರೀಕರಣವಾದಿಗಳಿಗೆ ಆಗುತ್ತಿರಬಹುದೇ?

ಮ್ಯಾಟ್, ಫೋನ್, ಕಾರ್ ಇತ್ಯಾದಿ ಎಲ್ಲ ಮಂಗಮಾಯವಾಗಲಿದೆ

ಮ್ಯಾಟ್ ಎಂದರೆ ಕನಿಷ್ಠ ಪರ್ಯಾಯ ತೆರಿಗೆಯನ್ನು ಕಾನೂನಿನ ವಿವಿಧ ಅವಕಾಶಗಳನ್ನು ಬಳಸಿಕೊಳ್ಳುವ ಕಂಪನಿಗಳ ಮೇಲೆ ವಿಧಿಸಲಾಗಿತ್ತು. ಇಷ್ಟೇ ಅಲ್ಲ, ಕಳೆದ ಬಜೆಟ್ಟಿನಲ್ಲಿ ತೆರಿಗೆದಾರರ ಸಂಖ್ಯೆಯನ್ನು ಹೆಚ್ಚಿಸಲು ಫೋನ್, ಮನೆ, ಕಾರುಗಳನ್ನು ಹೊಂದಿದವರು ಆದಾಯ ತೆರಿಗೆಯ ವಿವರವನ್ನು ಸಲ್ಲಿಸಬೇಕೆಂದು ವಿಧಿಸಲಾಯಿತು.

ಈ ಮ್ಯಾಟಿನಿಂದ ತಪ್ಪಿಸಿಕೊಳ್ಳಲು ಬಂಡವಾಳಿಗರು ಈಗಾಗಲೇ ಹಲವು ದಾರಿಗಳನ್ನು ಕಂಡುಹಿಡಿದಿದ್ದಾರೆ. ಇರಲಿ. ಆದರೆ ಆದಾಯ ತೆರಿಗೆಯವರು ಈಗ ಈ ಎಲ್ಲವನ್ನೂ ಕೈಬಿಡುವ ವಿಚಾರದಲ್ಲಿದ್ದಾರಂತೆ. ಯಾಕೆಂದರೆ ಇವೆಲ್ಲವನ್ನು ಜಾರಿಗೆ ತರುವುದು ಕಷ್ಟ. ಆದ್ದರಿಂದ ಕನಿಷ್ಠ ಪರ್ಯಾಯ ತೆರಿಗೆ ಇಲ್ಲ, ಫೋನ್, ಕಾರ್, ಮನೆ, ಇವ್ಯಾವುದಿದ್ದರೂ ವರಮಾನ ತೆರಿಗೆ ವಿವರ ನೀಡ ಬೇಕಾದಿದ್ದಿಲ್ಲ. ಹೇಗಿದೆ ಈ ಕಣ್ಣುಮುಚ್ಚಾಲೆ.

ಭಾರತೀಯ ರಿಸರ್ವ್ ಬ್ಯಾಂಕಿಗೆ ಹೊಸ ಗವರ್ನರ್

ಭಾರತೀಯ ರಿಸರ್ವ್ ಬ್ಯಾಂಕಿಗೆ ಹೊಸ ಗವರ್ನರ್‌ರನ್ನು ಸರಕಾರ ನೇಮಿಸಿದೆ. ಈಗಿನ ಗವರ್ನರ್ ಡಾ.ಸಿ. ರಂಗರಾಜನ್ ರನ್ನು ಆಂಧ್ರಪ್ರದೇಶದ ರಾಜ್ಯ ಪಾಲರಾಗಿ ನೇಮಿಸಿ ಬಹುಮಾನ ನೀಡಲಾಗಿದೆ.

ಈ ಸಂದರ್ಭದಲ್ಲಿ ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಸಿ.ರಂಗರಾಜನ್ ರವರನ್ನು ಹೊಗಳುತ್ತಾ ಅವರು ನನಗೆ ಅತ್ಯಂತ ಬುದ್ಧಿವಂತ ಸಲಹೆಗಾರರಾಗಿ ನೆರವು ನೀಡಿದ್ದಾರೆ' ಎಂದಿದ್ದಾರೆ. ಉದಾರೀಕರಣದ ಕ್ರಮಗಳನ್ನು ಹಣಕಾಸು ವಲಯದಲ್ಲಿ ಜಾರಿಗೆ ತಂದದ್ದರಿಂದ ಈ ಬಹುಮಾನ. ಹೊಸ ಗವರ್ನರ್ ಆಗಿ ನೇಮಕವಾಗಿರುವ ಡಾ. ಬಿಮಲ್ ಜಾಲನ್ ಸಹ ಉದಾರೀಕರಣವಾದಿಯೇ. ಈತ ಐಎಂಎಫ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದವರು.

ಐಎಂಎಫ್‌ನ ಅಭ್ಯರ್ಥಿಯೇ ಇರಬಹುದಲ್ಲವೇ ಈತ?

21 ಶತಮಾನದಲ್ಲಿ ಸಮಾಜವಾದ
ಹವಾನಾದಲ್ಲಿ ಅಂತರ್‍ರಾಷ್ಟ್ರೀಯ ಕಾರ್ಯಾಗಾರ

ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಅಕ್ಟೋಬರ್ 21 ರಿಂದ 23 ರವರೆಗೆ ಹವಾನಾದಲ್ಲಿ ಸಮಾಜವಾದ ಭವಿಷ್ಯದ ಬಗ್ಗೆ ಒಂದು ಅಂತರ್‍ರಾಷ್ಟ್ರೀಯ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಚೆಗುವಾರಾರವರು ಹುತಾತ್ಮರಾದ 30ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ '21ನೇ ಶತಮಾನದತ್ತ ಸಮಾಜವಾದ' ಎಂಬ ಈ ಕಾರ್ಯಾಗಾರವನ್ನು ನಡೆಸಲಾಯಿತು. 90 ಕ್ಕೂ ಹೆಚ್ಚು ಪಕ್ಷಗಳನ್ನು ಪ್ರತಿನಿಧಿಸಿದ 200 ಮಂದಿ ಭಾಗವಹಿಸಿದ್ದ ಈ ಕಾರ್ಯಾಗಾರದ ಕಲಾಪಗಳು ಇದನ್ನೊಂದು ಮಹತ್ವಪೂರ್ಣ ಘಟನೆಯಾಗಿಸಿವೆ. ಭಾರತದಿಂದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್, ಹಾಗೂ ಸಿಪಿಐ ನ ರಾಷ್ಟ್ರೀಯ ಕಾರ್ಯದರ್ಶಿ ಡಿ.ರಾಜಾ ಭಾಗವಹಿಸಿದ್ದರು. ಕಾರ್ಯಾಗಾರದ ಕುರಿತು ಪ್ರಕಾಶ್ ಕಾರಟ್ ಬರೆದ ಲೇಖನವಿದು.

ಮೇ 1993 ರಲ್ಲಿ ಕಾರ್ಲ್ ಮಾರ್ಕ್ಸ್‌ರವರ 175ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಕಲ್ಕತ್ತೆಯಲ್ಲಿ ಸಿಪಿಐ(ಎಂ) ಏರ್ಪಡಿಸಿದ್ದ ಒಂದು ವಿಚಾರ ಸಂಕಿರಣದ ನಂತರ ಇದು ಇಂತಹ ವಿಷಯವೊಂದನ್ನು ಕೈಗೆತ್ತಿಕೊಂಡ ಎರಡನೇ ಸಂದರ್ಭ. ಹವಾನಾ ಕಾರ್ಯಾಗಾರದಲ್ಲಿ ಭಾಗವಹಿಸಿದವರ ಸಂಖ್ಯೆ ಹಾಗೂ ಚರ್ಚೆಗಳ ವ್ಯಾಪ್ತಿ ಇನ್ನೂ ವ್ಯಾಪಕವಾಗಿತ್ತು.

ಮೂರು ದಿನಗಳ ಕಾರ್ಯಾಗಾರದ ಕೆಲಸವನ್ನು ಮೂರು ಆಯೋಗಗಳಲ್ಲಿ ವಿಂಗಡಿಸಲಾಗಿತ್ತು. ಸಮಕಾಲೀನ ಸಮಾಜವಾದದ ವಾಸ್ತವತೆಗಳು, ಮಾರ್ಕ್ಸ್‌ವಾದಿ- ಲೆನಿನ್‌ವಾದಿ ವಿಚಾರಧಾರೆ ಹಾಗೂ ಈ ಸಹಸ್ರಮಾನದ ಅಂತ್ಯದಲ್ಲಿ ಸಾಮ್ರಾಜ್ಯಶಾಹಿ - ಇವೇ ಆ ಮೂರು ವಿಷಯಗಳು.

ಕ್ಯೂಬಾ ಪಕ್ಷದ ಪ್ರಾಸ್ತಾವಿಕ ಪ್ರಬಂಧ

ಆರಂಭದ ಅಧಿವೇಶನದಲ್ಲಿ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಪರವಾಗಿ ಅದರ ಪೊಲಿಟ್‌ಬ್ಯೂರೋ ಸದಸ್ಯ ಜೋಸ್ ಆರ್. ಬಾಲಾಗ್ವೆರ್ ಕಾಬ್ರೆರಾ ಒಂದು ಪ್ರಬಂಧವನ್ನು ಮಂಡಿಸಿದರು. ಪ್ರಬಂಧದಲ್ಲಿ ಬಾಲಾಗ್ವೆರ್ ಜಾಗತೀಕರಣದ ಸ್ವರೂಪ, ವಿಶ್ವ ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ಅದರ ಪ್ರಭಾವ, ಮೂರನೇ ಜಗತ್ತಿನ ಮೇಲೆ ದುಷ್ಪರಿಣಾಮ ಬೀರುತ್ತಿರುವ ನವ ಉದಾರ ಧಾಳಿ, ಬಡ ಮತ್ತು ಶ್ರೀಮಂತ ದೇಶಗಳ ನಡುವೆ ಹೆಚ್ಚುತ್ತಿರುವ ಅಂತರ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿತು. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳ ಕುಸಿತದ ನಂತರ ಸಮಾಜವಾದದ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ಬಾಲಾಗ್ವೆರ್ 'ವಿಫಲಗೊಂಡದ್ದು ಸಮಾಜವಾದೀ ವ್ಯವಸ್ಥೆಯಲ್ಲ, ಒಂದು ವಿಧದ ಕುರುಡು ಸೈದ್ಧಾಂತಿಕ ಹಾಗೂ ಹೊಲಸುಗೊಳಿಸಲ್ಪಟ್ಟ ಮಾರ್ಕ್ಸ್‌ವಾದ' ಎಂದು ಅಭಿಪ್ರಾಯಪಟ್ಟರು.

ಮಾರ್ಕ್ಸ್‌ವಾದಿಗಳು ಕಂಡ ಆದರ್ಶಗಳಿಂದ ದೂರ ಸರಿಯುತ್ತಾ ಹೋದ ಆ ವಿಧದ ಸಮಾಜವಾದವೇ ಕೊನೆಗೆ ಕುಸಿದು ಬಿದ್ದದ್ದು ಎಂದು ಅವರು ವಾದಿಸಿದರು. ಏಕೈಕ ಸಮಾಜವಾದ ಮಾದರಿ ಎಂಬುದಿಲ್ಲ ಎಂಬ ಮಾತು ಈ ಕಾರ್ಯಾಗಾರದಲ್ಲಿ ಮತ್ತೆ - ಮತ್ತೆ ಕೇಳಿ ಬಂತು. ಬಾಲಗ್ವೆರ್ ಈ ಬಗ್ಗೆ ಹೇಳುತ್ತಾ ಸೋವಿಯತ್ ಮಾದರಿಯನ್ನು ನಕಲು ಮಾಡಿದ್ದರಿಂದ ಕಾಮೆಕಾನ್ (Comecon)ನ ದೇಶಗಳ ಮೇಲೆ ನಕಾರಾತ್ಮಕ ಪರಿಣಾಮ ಬಿತ್ತು ಎಂದು ಹೇಳಿದರು.

ವಿಶ್ವ ಬಂಡವಾಳಶಾಹಿಯ ವಿರುದ್ಧ ಹೋರಾಟದ ಅಂತರ್‍ರಾಷ್ಟ್ರೀಯ ಅಂಶ ಮಹತ್ವಪೂರ್ಣವಾದರೂ ಸಮಾಜವಾದಿಗಳು ಏಕೈಕ ಮಾದರಿಯೊಂದನ್ನು ಅನುಸರಿಸಬಾರದು ಎಂದು ಈ ಕ್ಯೂಬನ್ ಪ್ರಬಂಧ ಅಭಿಪ್ರಾಯ ಪಟ್ಟಿತು.

ಕ್ಯೂಬಾದಲ್ಲೀಗ ಸಮಾಜವಾದದ ದಾರಿ

ಹೊಸ ವಿಶ್ವ ಸನ್ನಿವೇಶದಲ್ಲಿ ಕ್ಯೂಬಾದ ಸಮಾಜವಾದೀ ದಾರಿಯ ಪ್ರಶ್ನೆಯನ್ನು ಪರಿಶೀಲಿಸುತ್ತಾ ಕ್ಯೂಬಾದ ಸಮಾಜವಾದದ ಪರಿಕಲ್ಪನೆಯಲ್ಲಿ ಕ್ರಾಂತಿಕಾರಿ ಮಾನವೀಯವಾದ ಎಂಬುದು ಮೂಲಭೂತ ನೀತಿ, ಕ್ರಾಂತಿಯ ಎಲ್ಲಾ ಹಂತಗಳಲ್ಲಿ ಇದನ್ನು ಸೃಜನಾತ್ಮಕವಾಗಿ ಅನ್ವಯಿಸಲಾಗುತ್ತಿದೆ ಎಂದು ಕ್ಯೂಬನ್ ಪ್ರಬಂಧ ಹೇಳಿತು. ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಆರ್ಥಿಕ ದಿಗ್ಬಂಧನದಿಂದ ಉಂಟಾಗಿರುವ ಗಂಭೀರ ಪರಿಸ್ಥಿತಿಯನ್ನು ಗುರುತಿಸುತ್ತಾ ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಸಮಾಜವಾದೀ ಸತ್ವದಿಂದ ದೂರ ಸರಿಯದೆ ಕೆಲವು ಬಂಡವಾಳಶಾಹಿ ಅಂಶಗಳನ್ನು ಮಾರುಕಟ್ಟೆ ಹಸ್ತಕ್ಷೇಪಗಳನ್ನು ಜಾಗರೂಕತೆಯಿಂದ ಬಳಸಲಾರಂಭಿಸಿದೆ. "ಈ ಕಷ್ಟಕರ ಆರ್ಥಿಕ ಪರಿಸ್ಥಿತಿಯಲ್ಲೂ ಅತ್ಯಗತ್ಯ ಸಮಾಜವಾದಿ ನೀತಿಗಳನ್ನು ಉಳಿಸಿಕೊಳ್ಳಲಾಗಿದೆ. ಉದಾಃ ಸಮಾಜವಾದೀ ಆಸ್ತಿಯ ಮೇಲುಗೈ, ಸಾಮಾಜಿಕ ನ್ಯಾಯ, ಬಹುಪಾಲು ಜನಗಳಿಗೆ ಪ್ರಯೋಜನಕಾರಿಯಾಗಬೇಕೆನ್ನುವ ರಾಜಕೀಯ ನೀತಿಗಳು, ಪಕ್ಷದ ನಿರ್ದೇಶನ, ಒಂದು ಸಮಾಜವಾದಿ ಪ್ರಭುತ್ವದ ರಚನೆ ಹಾಗೂ ಕಾರ್ಯನಿರ್ವಹಣೆ....... ಸುಧಾರಣೆ ಆರಂಭಿಸಿದ್ದರಿಂದ ಕಾರ್ಮಿಕರ ರಿಟ್ರೆಂಚ್‌ಮೆಂಟ್, ಖಾಸಗೀಕರಣ, ಸಾಮಾಜಿಕ ಭದ್ರತಾ ಕ್ರಮಗಳ ರದ್ಧತಿ ಅಥವಾ ಶಾಲಾ-ಆಸ್ಪತ್ರೆಗಳ ಮುಚ್ಚಿಕೆ ಇವೆಲ್ಲಾ ಮಾಡಿಲ್ಲ.... ಮಾರುಕಟ್ಟೆ ಕೆಲವು ಮೌಲ್ಯಗಳಿಗೆ ಧಕ್ಕೆ ತರುತ್ತದೆ, ಅದು ವೈಯುಕ್ತಿಕತೆಯನ್ನು ಪ್ರೋತ್ಸಾಹಿಸುತ್ತಿದೆಯೇ ಹೊರತು ಸೌಹಾರ್ದತೆಯನ್ನಲ್ಲ. ದೇಶಪ್ರೇಮ ಮತ್ತು ಸಮಾಜವಾದವನ್ನು ಪ್ರೋತ್ಸಾಹಿಸಿ ನಾವು ಈ ಪ್ರವೃತ್ತಿಗಳ ವಿರುದ್ಧ ಹೋರಾಡುತ್ತಿದ್ದೇವೆ ಎಂದು ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಈ ಪ್ರಬಂಧ ಹೇಳಿತು.

ಜಾಗತಿಕ ಧಾಳಿಯ ವಿರುದ್ಧ ಹೋರಾಟ ಹೇಗೆ?

ಮಾರ್ಕ್ಸ್‌ವಾದಿಗಳು ಈಗಿನ ಸನ್ನಿವೇಶದಲ್ಲಿ ಎತ್ತುತ್ತಿರುವ ಒಂದು ಪ್ರಮುಖ ಪ್ರಶ್ನೆಯ ಬಗ್ಗೆಯೂ ಈ ಪ್ರಂಬಧ ಪರಿಶೀಲಿಸಿತು. ಜಾಗತಿಕ ಬಂಡವಾಳಶಾಹಿ ಧಾಳಿ ಹಾಗೂ ರಾಷ್ಟ್ರೀಯ ಗಡಿಗಳನ್ನು ಮೀರಿದ ಬೃಹತ್ ಕಂಪನಿಗಳ ಧಾಳಿ ಹೆಚ್ಚುತ್ತಿರುವ ಪಾತ್ರ ಹಾಗೂ ಶಕ್ತಿಗಳ ವಿರುದ್ಧ ಹೋರಾಟ ನಡೆಸುವುದು ಹೇಗೆ? ಒಂದು ದೇಶದ ಸಾರ್ವಭೌಮತೆಯ ಪ್ರಶ್ನೆ, ಜಾಗತೀಕರಣ ಮತ್ತು ರಾಷ್ಟ್ರೀಯ ಶಕ್ತಿಯ ಸಮಸ್ಯೆಗಳು, ಕಾರ್ಮಿಕ ವರ್ಗದ ಮೇಲೆ ಬಂಡವಾಳಶಾಹಿ ಪುನರ್‍ರಚನೆಯ ಪ್ರಭಾವ ಇದನ್ನೂ ಈ ಪ್ರಬಂಧ ವಿಶ್ಲೇಷಿಸಿತು.

ಮೈತ್ರಿ ರಾಜಕೀಯ

ಇದರಲ್ಲಿ ಪರಿಶೀಲಿಸಿದ ಇನ್ನೊಂದು ಮಹತ್ವದ ಪ್ರಶ್ನೆಯೆಂದರೆ 1972 ರ ನಂತರದ ಹೊಸ ಸನ್ನಿವೇಶದಲ್ಲಿ ಎಡಪಂಥೀಯರ ಮುಂದೆ ಬಂದ ಮಿತ್ರಕೂಟಗಳ ರಾಜಕೀಯ, ಕ್ರಾಂತಿಕಾರಿ ಸಂಘಟನೆಗಳ ನಡುವೆ ಮೈತ್ರಿ ಅಗತ್ಯ. ಆದರೆ ಅವು ಬುಡಮಟ್ಟದಲ್ಲಿ ದುಡಿಯುವ ಜನರ ಹಿತಾಸಕ್ತಿಗಳನ್ನು ಈಡೇರಿಸಬೇಕು. ಜನಗಳ ಬೆಂಬಲವಿದ್ದರೆ ಸಾಧ್ಯ. ನೀತಿಗಳೊಂದಿಗೆ ರಾಜಿ ಮಾಡಿಕೊಳ್ಳುವ, ಅವಕ್ಕೆ ಹಾನಿ ತರುವ ಮೈತ್ರಿಗಳು ಸಲ್ಲದು. ನವ ಉದಾರವಾದದ ವಿರುದ್ಧ ಹೋರಾಟದಲ್ಲಿ ವಿಶಾಲ ಮೈತ್ರಿ ರಾಜಕೀಯ ಅಗತ್ಯವಾಗುತ್ತದೆ.

ಆಯೋಗದ ಕೆಲಸಗಳು

ಪ್ರಾಸ್ತಾವಿಕ ಪ್ರಬಂಧದಲ್ಲಿ ಮುಂದಿಟ್ಟ ಈ ಚೌಕಟ್ಟಿನೊಂದಿಗೆ ಮೂರೂ ಆಯೋಗಗಳು ತನ್ನ ಕೆಲಸ ಆರಂಭಿಸಿದವು. ಒಟ್ಟು 113 ಪ್ರಬಂಧಗಳು ಮಂಡಿಸಲ್ಪಟ್ಟವು. ಚರ್ಚೆಗಳ ನಡುವೆ 140 ಮಧ್ಯಪ್ರವೇಶಗಳು ನಡೆದವು.

ಮೂರು ದಿನಗಳ ಚರ್ಚೆಗಳ ನಂತರ ಕೊನೆಯ ದಿನ ಪ್ಲೀನಂ ಅಧಿವೇಶನ ನಡೆಯಿತು. ಆದರಲ್ಲಿ ಈ ಮೂರು ಆಯೋಗಗಳ ವರದಿಗಳನ್ನು ಮಂಡಿಸಲಾಯಿತು. ಚರ್ಚೆಗಳಲ್ಲಿ ಭಾಗವಹಿಸಿದವರು ಒಟ್ಟಾರೆಯಾಗಿ ಎತ್ತಿದ ಅಂಶಗಳು ಹಾಗೂ ಚರ್ಚೆಯ ವ್ಯಾಪ್ತಿಯನ್ನು ಈ ವರದಿಗಳಲ್ಲಿ ಪಟ್ಟಿ ಮಾಡಲಾಗಿತ್ತು. ಮೊದಲೇ ಒಪ್ಪಿಕೊಂಡಂತೆ ಯಾವುದೇ ತೀರ್ಮಾನಕ್ಕೆ ಬರುವ ಆ ಬಗ್ಗೆ ಒಂದು ದಸ್ತಾವೇಜು ಅಥವಾ ಹೇಳಿಕೆಯನ್ನು ಅಂಗೀಕರಿಸುವ ಪ್ರಯತ್ನ ನಡೆಯಲಿಲ್ಲ.

ಆಯೋಗಗಳಲ್ಲಿನ ಚರ್ಚೆಗಳಲ್ಲಿ ವಿಭಿನ್ನ ಅಭಿಪ್ರಾಯಗಳು ಮೂಡಿಬಂದವು. ಯಾವುದೇ ಹಿಂಜರಿಕೆಯಿಲ್ಲದೆ, ಪರಸ್ಪರ ಭಿನ್ನಾಭಿಪ್ರಾಯಗಳನ್ನು ಗೌರವಿಸುವ ವಾತಾವರಣದಲ್ಲಿ ಚರ್ಚೆಗಳು ನಡೆದವು.

ಬಹಳಷ್ಟು ಪ್ರಬಂಧಗಳು ಸ್ಪಾನಿಷ್ ಭಾಷೆಯಲ್ಲಿದ್ದವು. ಅವುಗಳ ಅನುವಾದ ಸಿಗಲಿಲ್ಲ. ಆದರೆ ಅವುಗಳ ಮೌಖಿಕ ಮಂಡನೆಯನ್ನು ಅನುವಾದಿಸಲಾಯಿತು. ಆದ್ದರಿಂದ ಎಲ್ಲಾ ಪ್ರಬಂಧಗಳ ಹಾಗೂ ಅವುಗಳಲ್ಲಿ ವ್ಯಕ್ತಪಡಿಸಿದ ದೃಷ್ಟಿಕೋನಗಳ

ಬೀದರ್ ಪ್ರಾದೇಶಿಕ ಸಮ್ಮೇಳನ



ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಾದೇಶಿಕ ಸಮ್ಮೇಳನ ದಿನಾಂಕ ನವಂಬರ್ ೨೦ ರಂದು ನಡೆಯಿತು. ಈ ಸಮ್ಮೇಳನದಲ್ಲಿ ಪಕ್ಷದ ನೂತನ ಕಾರ್ಯದರ್ಶಿಯಾಗಿ ಕಾಂ|| ಸಂಗ್ರಾಮ ಪ್ರಭುರಾವ್ ವಕೀಲರರನ್ನು ಸರ್ವಾನುಮತದಿಂದ ಆಯ್ಕೆ ಮಾಡ ಲಾಯಿತು. ಪಕ್ಷ ಮುಂಬರುವ ದಿನಗಳಲ್ಲಿ ಈ ಕೆಳಕಂಡ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಲು ತೀರ್ಮಾನ ತೆಗೆದುಕೊಳ್ಳಲಾಯಿತು.

೧. ಬೀದರ್, ಗುಲ್ಬರ್ಗಾ ರೈಲ್ವೆ ಮಾರ್ಗ ಪೂರ್ಣಗೊಳಿಸುವುದು.

೨. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಪೂರ್ಣಗೊಳಿಸಲು ಆಡಳಿತ ಮಂಡಳಿ ಕೂಡಲೇ ರಚಿಸಿ ಕೆಲಸ ಪ್ರಾರಂಭಿಸಬೇಕು.

೩. ಖಾಸಗಿ ಕಾರ್ಖಾನೆಯಲ್ಲಿ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಬೇಕು.

೪. ಬರಗಾಲ ಪರಿಹಾರ ಸಲುವಾಗಿ ರೈತರಿಗೆ ಪ್ರತಿ ಎಕರೆಗೆ ೧೫೦೦-೦೦ ರೂಪಾಯಿ ಪರಿಹಾರ ಧನ ಕೊಡಬೇಕಲ್ಲದೆ ಶಾಶ್ವತ ಕುಡಿಯುವ ನೀರಿನ ಸಮಸ್ಯೆ, ರಸ್ತೆ ನಿರ್ಮಾಣ ಹಾಗು ಇನ್ನಿತರ ಕಾಮಗಾರಿಗಳನ್ನು ಪ್ರಾರಂಭಿಸಬೇಕು.

೫. ಕಾರಂಜಾ ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯಿತನಲ್ಲಿ ನಡೆಯುವ ಅವ್ಯವಹಾರ ಕುರಿತು, ಸಿಒಡಿ ತನಿಖೆಯಾಗಬೇಕು.

೬. ೧೯೯೪-೯೫ ರಲ್ಲಿ ರೈತರಿಗೆ ಕೊಡಬೇಕಾದ ಕಬ್ಬಿನ ಬಾಕಿ ಹಣವನ್ನು ಕೂಡಲೇ ಪಾವತಿ ಮಾಡಬೇಕು.

೭. ಈ ವರ್ಷ ಹಳ್ಳಿಕೇಡ ಸಹಕಾರ ಸಕ್ಕರ ಕಾರ್ಖಾನೆಯಲ್ಲಿ ಅರೆಯುವ ಪ್ರತಿ ಟನ್ ಕಬ್ಬಿಗೆ ೮೦೦ ರೂ. ನಗದು ನೀಡಬೇಕು.

೮. ಸರಕಾರಿ ಭೂಮಿ ಸಾಗುವಳಿ ಮಾಡುತ್ತಿದ್ದ ಭೂ ಹೀನರಿಗೆ ಪಟ್ಟಾ ಕೊಡಬೇಕು.

೯. ಆಶ್ರಯ, ಅಂಬೇಡ್ಕರ್ ಇನ್ನಿತರ ಯೋಜನೆಯಲ್ಲಿ ನೇರವಾಗಿ ಫಲಾನುಭವಿಗಳಿಗೆ ಹಣ ನೀಡಬೇಕು.

೧೦. ಗ್ರಾಮೀಣ ಭಾಗದಲ್ಲಿದ್ದ ಸರಕಾರಿ ದವಾಖಾನೆಯಲ್ಲಿ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ತುಂಬಬೇಕು. ಅಲ್ಲದೆ ಜನರಿಗೆ ಸರಿಯಾದ ರೀತಿಯಲ್ಲಿ ತಪಾಸಣೆ ಮಾಡಬೇಕು ಮತ್ತು ಅವರಿಗಾಗಿ ಬಂದ ಔಷಧಗಳನ್ನು ಪೂರೈಸಬೇಕು.

ನಂತರ ಸಂಜೆ ೬.೦೦ ಗಂಟೆಗೆ ಅಂಬೇಡ್ಕರ್ ಚೌಕದ ಹತ್ತಿರ ಬಹಿರಂಗ ಸಭೆ ಏರ್ಪಡಿಸಲಾಯಿತು. ಬಹಳ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದು ಈ ಸಭೆಯನ್ನುದ್ದೇಶಿಸಿ ಕಾಂ|| ಎಂ.ಎಸ್.ಮನೋಹರ್, ಕಾಂ|| ಮಹತಾಬಿ ಮನ್ನಾಮಳ್ಳಿ, ಕಾ|| ನಾರಾಯಣ ರಾಮಪುರರಾಜೇಶ್ವರಿ, ಸಿಪಿಎಂ ಪಕ್ಷದ ಗುಲ್ಬರ್ಗಾ ಜಿಲ್ಲೆಯ ಕಾರ್ಯದರ್ಶಿಯಾದ ಕಾಂ|| ಮಾರುತಿ ಮಾನ್ಪಡೆ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ| ನೀಲಾ ಕೆ. ಮಾತನಾಡಿದರು.

ಹಗರಿಬೊಮ್ಮನ ಹಳ್ಳಿ ಸಮ್ಮೇಳನ

ಅಕ್ಟೋಬರ್ 13, 14 ರಂದು ನಡೆದ 4ನೇ ಸಿಪಿಐ(ಎಂ) ತಾಲ್ಲೂಕು ಸಮ್ಮೇಳನ ತಾಲ್ಲೂಕಿನ ರಾಜಕೀಯ, ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ತಾಲೂಕಿನ ಸಮಸ್ಯೆಗಳನ್ನು ಕುರಿತಂತೆ ಮಾಲವಿ ಜಲಾಶಯಕ್ಕೆ ಶಾಶ್ವತ ನೀರಾವರಿ, ಒತ್ತುವರಿ ಭೂಮಿಗೆ ಪಟ್ಟಾ, 'ಗ್ರೇ' ಘೋಷಣೆಯ ರದ್ದತಿ ಇತ್ಯಾದಿ 14 ನಿರ್ಣಯಗಳನ್ನು ಅಂಗೀಕರಿಸಿತು.

ಸಮ್ಮೇಳನದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಟಿ.ಎಸ್.ನಾಗರಾಜ್‌ರವರು ಸ್ವಾತಂತ್ರ್ಯದ 50ನೇ ವರ್ಷ ಪೂರೈಸಿರುವ ಸಂದರ್ಭದಲ್ಲಿ ದೇಶದ ಸ್ಥಿತಿಗತಿಗಳನ್ನು ವಿಶ್ಲೇಷಿದರು. ರಾಜ್ಯ ಬಹುತೇಕ ಬರಗಾಲಕ್ಕೆ ಒಳಗಾಗಿದ್ದರೂ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ನೀಡಲು ತಯಾರಿಲ್ಲದ ಸರಕಾರ ಉತ್ಸವಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸಲು ಸಿದ್ಧವಿದೆ ಎಂದರು. ಬಳ್ಳಾರಿ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಸವರಾಜು ಹಾಗೂ ಡಿ.ಆರ್. ವೆಂಕಟರಮಣ, ತಾಲ್ಲೂಕು ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ನಾಗೇಶ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಇದಕ್ಕೆ ಮೊದಲು 350 ಕ್ಕೂ ಅಧಿಕ ಕಾರ್ಯಕರ್ತರಿದ್ದ ಮೆರವಣಿಗೆ ನಡೆಯಿತು.

ತಾಲ್ಲೂಕು ಸಮ್ಮೇಳನ ಮುಂದಿನ ಮೂರು ವರ್ಷಕ್ಕಾಗಿ 13 ಸದಸ್ಯರುಳ್ಳ ಹೊಸ ತಾಲ್ಲೂಕು ಸಮಿತಿಯನ್ನು ಆರಿಸಿತು. ಎಸ್.ಜಗನ್ನಾಥ್ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಆಳಂದ ಸಮ್ಮೇಳನ : ಬರಗಾಲ ಘೋಷಿಸಲು ಆಗ್ರಹ

ಆಳಂದ ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಿಸಬೇಕು. ಕೂಲಿಕಾರರಿಗೆ ಕೆಲಸ, ರೈತರಿಗೆ ಬೆಳೆ ಪರಿಹಾರ ನೀಡಬೇಕು ಎಂದು ಸಿಪಿಐ(ಎಂ) ಆಳಂದ ತಾಲ್ಲೂಕು ಸಮ್ಮೇಳನ ಒತ್ತಾಯಿಸಿದೆ.

ಆಳಂದ ತಾಲ್ಲೂಕು ಪ್ರಥಮ ಸಮ್ಮೇಳನವನ್ನು ಜಿಲ್ಲಾ ಸಮಿತಿ ಕಾರ್ಯದರ್ಶಿ ಮಾರುತಿ ಮಾನ್ಪಡೆ ಉದ್ಘಾಟಿಸಿದರು. ಬಾಬು ಮುಗಳಿ ಪಕ್ಷದ ಧ್ವಜಾರೋಹಣ ಮಾಡಿದರು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಯಾಕೂಬ ಸಾಹೇಬ ಮೂಳಗೆ ಚಿಂಚನಸೂರ ವಹಿಸಿದ್ದರು. ಬಸವರಾಜ ಮರಡಿ, ಮೇಘರಾಜ ಕಠಾರೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಗುಂಡಪ್ಪಾ ಚಿಂಚನಸೂರ್ ಸ್ವಾಗತಿಸಿದರು. ಸುಧಾಮ ಧನ್ನಿ ವಂದಿಸಿದರು.

ತಾಲ್ಲೂಕು ಸಮಿತಿ ಕಾರ್ಯದರ್ಶಿಯಾಗಿ ಮೇಘರಾಜ ಕಠಾರ ಅವರನ್ನು ಆಯ್ಕೆ ಮಾಡಲಾಯಿತು.

ಆಳಂದ ಸಕ್ಕರೆ ಕಾರ್ಖಾನೆ ರೈತರಿಗೆ ಬಾಕಿ ಉಳಿಕೊಂಡಿರುವ ನಾಲ್ಕು ಕೋಟಿ ರೂ. ಹಣ ಶೀಘ್ರ ಕೊಡಬೇಕು. ಆಶ್ರಯ ಮನೆ ಅಧ್ಯಕ್ಷತೆಯಿಂದ ಶಾಸಕರನ್ನು ತೆಗೆದು ಗ್ರಾಮ ಸಭೆಗಳನ್ನು ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು, ದೇವದಾಸಿಯರ ಪುನರ್ ವಸತಿ ಮಾಡಬೇಕು, ಶಾಲಾ ಕಟ್ಟಡ, ಹೆಣ್ಣು ಮಕ್ಕಳಿಗೆ ಶೌಚಾಲಯ ಕಟ್ಟಿಸಿಕೊಡಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ.

ಸಿ.ಪಿ.ಐ.(ಎಂ) ಸಮ್ಮೇಳನಗಳು

ತಾರ್‌ಫೈಲ್

ತಾರಾಫೈಲ್ ವಾರ್ಡ್‌ನ ಪಕ್ಷದ ಶಾಖಾ ಸಮ್ಮೇಳನವನ್ನು ನಡೆಸಲಾಯಿತು. ಮಹಮದ್ ಜಲಾಲ್ ಧ್ವಜಾರೋಹಣ ಮಾಡಿದರು. ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಅನ್ನುಬಾಯಿ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ನೀಲಾ.ಕೆ, ವಿರುಪಾಕ್ಷಪ್ಪ ತಡಕಲ್ ಮಾತನಾಡಿದರು. ದೇವೇಂದ್ರಪ್ಪ ಗೌಡಗೇರಿ ವಂದಿಸಿದರು.

ಬೀದರ್ ಘಟಕ

ಬೀದರ ಜಿಲ್ಲೆಯಲ್ಲಿನ ೫ ಸಿಪಿಐ(ಎಂ) ಘಟಕಗಳ ಸಮ್ಮೇಳನ ನಡೆಸಿ ಹೊಸ ನಾಯಕತ್ವವನ್ನು ಆಯ್ಕೆ ಮಾಡಲಾಗಿದೆ. ಅಕ್ಟೋಬರ್ ೧೦ ರಂದು ಬೀದರ ನಗರ ಮತ್ತು ಗ್ರಾಮೀಣ ಭಾಗಕ್ಕೆ ಕಾರ್ಯದರ್ಶಿಯಾಗಿ ಎಮ್.ಎಸ್. ಮನೋಹರ ಮತ್ತು ಸಂಗ್ರಾಮ ಭೋಸ್ಲೆ ಯವರನ್ನು ಆಯ್ಕೆ ಮಾಡಲಾಗಿದೆ. ಅಕ್ಟೋಬರ್ ೨೬ ರಂದು ರಾಜೇಶ್ವರ ಘಟಕ ಕಾರ್ಯದರ್ಶಿಯಾಗಿ ನಾರಾಯಣ ರಾಂಪೂರ್ ಯವರನ್ನು ಅಕ್ಟೋಬರ್ ೨೮ ರಂದು ಮನ್ನಾ ಎಖೆಳ್ಳಿ ಘಟಕದ ಕಾರ್ಯದರ್ಶಿ ಮಹತಾಬ ಇವರನ್ನು ದಿ: ೨೯-೧೦-೯೭ ರಂದು ಹುಮನಾಬಾದ, ಘಟಕದ ಕಾರ್ಯದರ್ಶಿಯಾಗಿ ಪ್ರಭು ಸಂತೋಷ ಇವರನ್ನು ಆಯ್ಕೆ ಮಾಡಲಾಗಿದೆ. ಈ ಶಾಖಾ ಸಮ್ಮೇಳನ ಮತ್ತು ಕಾರ್ಯದರ್ಶಿಗಳ ಆಯ್ಕೆ ಸಂದರ್ಭದಲ್ಲಿ ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಮತ್ತು ನೀಲಾ.ಕೆ, ಇವರು ಉಪಸ್ಥಿತರಿದ್ದು, ಸದಸ್ಯರ ಮತ್ತು ಕಾರ್ಯದರ್ಶಿಗಳ ಜವಾಬ್ದಾರಿ ಕುರಿತು ಹೇಳಿದರು.

ಗ್ರಾಮ ಸಹಾಯಕರ ಹುದ್ದೆಯನ್ನು ಖಾಯಂಗೊಳಿಸಲು ಬಂಟ್ವಾಳ ತಾಲ್ಲೂಕು ಸಮ್ಮೇಳನದ ಒತ್ತಾಯ


ಕರ್ನಾಟಕ ರಾಜ್ಯಾದ್ಯಂತ ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರ ಹುದ್ದೆಯ ಅಡಿಯಲ್ಲಿ ಸುಮಾರು 10,450 ಜನ ನೌಕರರಿಗೆ ತಿಂಗಳಿಗೆ ರೂ. 900 ರಷ್ಟು ವೇತನ ನೀಡಿ ಅಮಾನುಷ ರೀತಿಯಲ್ಲಿ ಸರಕಾರ ದುಡಿಸುತ್ತಿದೆ.

800 ನೌಕರರು ಬಂಟ್ವಾಳ ತಾಲೂಕಿನಲ್ಲಿ 67 ನೌಕರರ, ಈ ರೀತಿಯಾಗಿ ಬೆಳಗ್ಗಿನ 9 ಗಂಟೆಯಿಂದ ದಿನದ ಸಂಜೆ 6.00 ಗಂಟೆಯವರೆಗೆ ಸರಕಾರಿ ಕಛೇರಿಗಳಲ್ಲಿ ಗ್ರಾಮೀಣ ಕಚೇರಿಗಳಲ್ಲಿ ದುಡಿಸಲಾಗುತ್ತಿದೆ. ಶೇಕಡಾ 95 ರಷ್ಟಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ನೌಕರರನ್ನು ಕಳೆದ 15 ವರ್ಷಗಳಿಂದ ದುಡಿಸುತ್ತಿರುವುದು ಸ್ವಾತಂತ್ರ್ಯ ಚಳುವಳಿಯ 50ನೇ ವಾರ್ಷಿಕೋತ್ಸವವನ್ನು ಆಚರಿಸುವ ಈ ಸಂದರ್ಭಕ್ಕೆ ಒಂದು ವಿಪರ್ಯಾಸ ಎಂದು ಸಮ್ಮೇಳನ ಅಭಿಪ್ರಾಯ ಪಟ್ಟು ಸರಕಾರದ ನಿರ್ಲಕ್ಷ್ಯ ಹಾಗೂ ನೌಕರ ವಿರೋಧಿ ನೀತಿಯನ್ನು ನವಂಬರ್ 3 ರಂದು ನಡೆದ ಸಿಪಿಐ(ಎಂ) ತಾಲ್ಲೂಕು ಸಮ್ಮೇಳನ ಖಂಡಿಸಿದೆ.

ಸರಕಾರವು ಈ ಕೂಡಲೇ ಅವರೆಲ್ಲರನ್ನು ಡಿ.ವರ್ಗದ ನೌಕರರೆಂದು ಪರಿಗಣಿಸಿ ವೇತನ ಆಯೋಗದ ವರದಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಈ ನೌಕರರಿಗೆ ಕೊಡಬೇಕೆಂದು ಒತ್ತಾಯಿಸಿದೆ.

ಇನ್ನೂ ಎರಡು ನಿರ್ಣಯಗಳನ್ನು ಅಂಗೀಕರಿಸಿದ ಸಮ್ಮೇಳನ ನೀರಾವರಿ ಪಂಪ್‌ಸೆಟ್‌ನ ಬಗ್ಗೆ, ವಿದ್ಯುತ್ ದರ ಏರಿಸಿದ್ದನ್ನು ಹಾಗೂ ಬಂಟ್ವಾಳ ಭೂ ನ್ಯಾಯ ಮಂಡಳಿಗೆ ಖಾಯಂ ಆಗಿ ಸಹಾಯಕ ಕಮಿಷನರನ್ನು ನೇಮಿಸಬೇಕೆಂದು ಆಗ್ರಹಿಸಿತು.

ಸಮ್ಮೇಳನವನ್ನು ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಉದ್ಘಾಟಿಸಿದರು. ಆರಂಭದಲ್ಲಿ ಕೆಂಬಾವುಟದ ಧ್ವಜಾರೋಹಣವನ್ನು ಪಕ್ಷದ ಹಿರಿಯ ಸದಸ್ಯ ಶ್ರೀ ಬಿ.ಹೂವಯ್ಯ ಬಂಗೇರ ಮಾಡಿದರು.



ಬಂಟ್ವಾಳ ಬಿಡ್ಡ ಕಟ್ಟೆಯ ವೈ.ಎಸ್.ಜೆ. ಕಾಂಪ್ಲೆಕ್ಸ್‌ನಲ್ಲಿ ಪ್ರತಿನಿಧಿ ಸಮ್ಮೇಳನವನ್ನು ಆರಂಭದಲ್ಲಿ ಪಕ್ಷದ ಕಾರ್ಯದರ್ಶಿ ಬಿ.ವಾಸು ಗಟ್ಟಿ ಸ್ವಾಗತಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಪಕ್ಷ ಚಳುವಳಿಯ ಹಿರಿಯ ಸದಸ್ಯ ಬಿ.ಮಂಜುನಾಥ್ ಸಪಲ್ಯ ವಹಿಸಿದ್ದರು. ಕಳೆದ 3 ವರ್ಷಗಳ ರಾಜಕೀಯ ಸಂಘಟನಾ ಚಟುವಟಿಕೆಗಳ ವರದಿಯನು ತಾಲ್ಲೂಕು ಸಮಿತಿಯ ಪರವಾಗಿ ಬಿ.ನಾರಾಯಣ ಮಂಡಿಸಿದರು. ವರದಿಯ ಮೇಲೆ ಪ್ರತಿನಿಧಿಗಳು ಗಂಭೀರ ಚರ್ಚೆ ನಡೆಸಿ ಕೊನೆಗೆ ಸರ್ವಾನುಮತದಿಂದ ಅಂಗೀಕಾರವಾಯಿತು.

ಸಭೆಯಲ್ಲಿ ಮುಂದಿನ ಅವಧಿಗೆ ಬಿ.ವಾಸುಗಟ್ಟಿ, ಬಿ.ನಾರಾಯಣ , ಹೂವಯ್ಯ ಬಂಗೇರ, ಬಿ.ಸಂಜೀವ ಬಂಗೇರ, ಬಿ.ಮಂಜುನಾಥ ಸಪಲ್ಯ, ಎ.ರಾಮಣ್ಣ, ಮೋನಪ್ಪ ಸಪಲ್ಯ, ಎಂ.ಮಾರಪ್ಪ, ಬಿ.ಶೀನಬಂಗೇರ ಮತ್ತು ಬಿ.ಉದಯಕುಮಾರ್ ಇವರುಗಳು ಇರುವ ತಾಲ್ಲೂಕು ಸಮಿತಿಯನ್ನು ಪ್ರತಿನಿಧಿ ಸಭೆ ಚುನಾಯಿಸಿತು.

ಹೊಸದಾಗಿ ಆಯ್ಕೆಗೊಂಡಿರುವ ಸಮಿತಿಯ ಸಭೆ ಸೇರಿ ಬಿ.ವಾಸುಗಟ್ಟಿಯವರನ್ನು ಪಕ್ಷದ ತಾಲ್ಲೂಕು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಪುನರ್ ಆಯ್ಕೆ ಮಾಡಿತು.

ಡಿಸೆಂಬರ್ ತಿಂಗಳ ತಾ|| 14.15, 16 ರಂದು ಮಂಗಳೂರಿನಲ್ಲಿ ಜರುಗಲಿರುವ ೧೬ನೇ ಜಿಲ್ಲಾ ಸಮ್ಮೇಳನಕ್ಕೆ 9 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಶ್ರೀಯಾನ್ ದೇಶದ ಎಲ್ಲಾ ಬಂಡವಾಳ ಶಾಹಿ ಭೂಮಾಲಕ ವರ್ಗದ ಪಕ್ಷಗಳಲ್ಲಿ ಜನತೆಗೆ ಜಿಗುಪ್ಸೆ ಹುಟ್ಟಿದೆ. ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಎಡ ಪಕ್ಷಗಳು ತತ್ವ ಮತ್ತು ಧೋರಣೆಗಳ ಆಧಾರದಲ್ಲಿ ಕೆಲಸ ಮಾಡುತ್ತಿರುವುದರಿಂದ ಜನತೆ ಪರ್ಯಾಯ ವ್ಯವಸ್ಥೆಯನ್ನು ಹುಡುಕುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ವಿಶಾಲ ತಳಹದಿಯಲ್ಲಿ ಶಿಸ್ತುಬದ್ಧ ಪಕ್ಷವಾಗಿ ಕಟ್ಟಲು ಎಲ್ಲಾ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಅನಗತ್ಯ ವಿವಾದ ಕಲ್ಪಿಸಲು .....

ಪುಟ 1 ರಿಂದ

ಕಾರ್ಮಿಕರಿಗೆ ಒಂದು ಸಮಗ್ರ ಶಾಸನ, ಮಹಿಳಾ ಮೀಸಲಾತಿ ಮಸೂದೆ, ಕಾರ್ಮಿಕ ಸಂಘಗಳ ಸದಸ್ಯತ್ವ ಪರಿಶೀಲನೆಗೆ ಗುಪ್ತ ಮತದಾನ ಇತ್ಯಾದಿ ಸಮಾನ ಕನಿಷ್ಠ ಕಾರ್ಯಕ್ರಮದ ಇತರ ಅಂಶಗಳನ್ನು ಸಂಸತ್ತಿನ ಅಧಿವೇಶನದಲ್ಲಿ ಬದಿಗೆ ತಳ್ಳಲಾಗುತ್ತಿದೆ ಎಂದು ಸುರ್ಜಿತ್ ಹೇಳಿದರು.

ತ್ರಿಪುರಾದಲ್ಲಿ ಹೆಚ್ಚುತ್ತಿರುವ ಹಿಂಸಾಚಾರದ ಬಗ್ಗೆ ಹೇಳುತ್ತಾ ಅವರು ರಾಜ್ಯದ ಕಾಂಗ್ರೆಸ್ ಘಟಕ ಭಯೋತ್ಪಾದನೆ ಮಾಡಲು, ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಉಗ್ರಗಾಮಿಗಳಿಗೆ ಸಕ್ರಿಯ ಬೆಂಬಲ ನೀಡುತ್ತಿದೆ ಎಂದರು. ಈ ಸೂಕ್ಷ್ಮ ಗಡಿ ರಾಜ್ಯದ ಉಗ್ರಗಾಮಿ ಹಿಂಸಾಚಾರವನ್ನು ಎದುರಿಸಲು ಹೆಚ್ಚಿನ ಸಶಸ್ತ್ರ ಪಡೆಗಳನ್ನು ಕಳಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ.

ಇರಾಕ್ ವಿರುದ್ಧ ಅಮೆರಿಕಾದ ಬೆದರಿಕೆ ತಂತ್ರ ಪ್ರತಿಭಟಿಸಲು ಸಿಪಿಐ(ಎಂ) ಕರೆ

ಅಮೆರಿಕಾ ಸದ್ದಾಂ ಹುಸೇನರನ್ನು ಉರುಳಿಸಲು ಇರಾಕಿನ ಮೇಲೆ ಯುದ್ಧದ ಬೆದರಿಕೆ ಹಾಕುವ ಅಮೆರಿಕಾದ ಬೆದರಿಕೆ ತಂತ್ರಗಳನ್ನು ಬಲವಾಗಿ ಖಂಡಿಸಿದ ಸುರ್ಜಿತ್ "ಭಾರತ ಸರಕಾರ ಒಂದು ದೃಢ ನಿಲುವು ತಳೆದು, ವಿಶ್ವ ಸಂಸ್ಥೆಯಲ್ಲಿ ಮಧ್ಯ ಪ್ರವೇಶಿಸಿ, ಯಾವುದೇ ಮಿಲಿಟರಿ ಕಾರ್ಯಾಚರಣೆಗೆ ಮಂಜೂರಾತಿ ನೀಡದಂತೆ ನೋಡಿಕೊಳ್ಳಬೇಕು ಎಂದು ನಾವು ಬಯಸುತ್ತೇವೆ" ಎಂದರು. ಎಲ್ಲಾ ಪಕ್ಷದ ಘಟಕಗಳು ದೇಶಾದ್ಯಂತ ಅಮೆರಿಕಾದ ಈ ಬೆದರಿಕೆ 'ಯನ್ನು ಪ್ರತಿಭಟಿಸಿ ಇರಾಕೀ ಜನಗಳೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಲು ಸಭೆಗಳನ್ನು ನಡೆಸಬೇಕು ಎಂದು ಕೇಂದ್ರ ಸಮಿತಿ ಕರೆ ನೀಡಿದೆ.

ಬಿಜೆಪಿ ನಿಜರೂಪ ಬಯಲು

ಉತ್ತರ ಪ್ರದೇಶದಲ್ಲಿ ಕಲ್ಯಾಣ್ ಸಿಂಗ್ ಮಂತ್ರಿ ಮಂಡಲ ಸ್ಥಾಪಿಸಿದ ರೀತಿ, 93 ಸದಸ್ಯರುಳ್ಳ, ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳ ನೇಮಕ ಇವೆಲ್ಲಾ ಬಿಜೆಪಿಯ ನೀತಿ-ಬಾಹಿರ ಸಮಯಸಾಧಕತನವನ್ನು ಬಯಲುಗೊಳಿಸಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಉತ್ತರ ಪ್ರದೇಶ ವಿಧಾನ ಸಭೆಯ ಅಧ್ಯಕ್ಷರು ಪಕ್ಷಾಂತರ - ವಿರೋಧಿ ಕಾನೂನಿನ ಅಂಶಗಳನ್ನು ಉಲ್ಲಂಘಿಸಿರುವ ಬಿ.ಎಸ್.ಪಿ. ಪಕ್ಷಾಂತರಿಗಳನ್ನು ಅನರ್ಹಗೊಳಿಸಲು ಕ್ರಮ ಕೈಗೊಳ್ಳದಿರುವುದು ಪಕ್ಷಪಾತಪೂರ್ಣ ಕೆಲಸ ಎಂದು ಖಂಡಿಸಿದೆ. ನವಂಬರ್ 10 ರಂದು ಲಕ್ನೌದಲ್ಲಿ ಸಮಾಜವಾದಿ ಪಕ್ಷದ ಮತಪ್ರದರ್ಶನದ ಮೇಲೆ ನಿರ್ದಯ ಲಾಠಿ ಪ್ರಹಾರವನ್ನು ಖಂಡಿಸುತ್ತಾ ಕೇಂದ್ರ ಸಮಿತಿ ವಿರೋಧ ಪಕ್ಷಗಳನ್ನು ಈ ರೀತಿ ದಮನ ಮಾಡುವ ಬಿಜೆಪಿ ಸರಕಾರದ ತಂತ್ರವನ್ನು ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದೆ.

ಉತ್ತರ ಪ್ರದೇಶ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹಾಗೂ ರಾಜಕೀಯದಲ್ಲಿ ಪಕ್ಷಾಂತರಕ್ಕೆ ಪ್ರೋತ್ಸಾಹ ನೀಡಿ, ಕುದುರೆ ವ್ಯಾಪಾರ ಹಾಗೂ ನೀತಿ ಬಾಹಿರ ಕ್ರಮಗಳ ಬಳಕೆಯ ಪ್ರವೃತ್ತಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಕ್ಷಾಂತರ ವಿರೋಧಿ ಕಾನೂನನ್ನು ಇನ್ನಷ್ಟು ಕಟ್ಟು ನಿಟ್ಟುಗೊಳಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಪಡಿಸಿದೆ. ತಮ್ಮ ಪಕ್ಷವನ್ನು ಬಿಡುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಗುಂಪು ತಮ್ಮ ಸ್ಥಾನಗಳನ್ನು ತೆರವು ಮಾಡುವಂತಾಗಬೇಕು. ಇಂತಹ ಕೇಸುಗಳನ್ನು ಚುನಾವಣಾ ಆಯೋಗಕ್ಕೆ ಒಪ್ಪಿಸಿ ಸೂಕ್ತ ಕ್ರಮಕೈಗೊಳ್ಳಲು ರಾಷ್ಟ್ರಪತಿಗಳು ಶಿಫಾರಸ್ಸು ಮಾಡಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

(ಐಎನ್‌ಎನ್)

ಸಿಐಟಿಯು ರಾಜ್ಯ ಸಮಿತಿ ಸ್ವಂತ ಕಛೇರಿ ಉದ್ಘಾಟನೆ

ರಾಜ್ಯದಲ್ಲಿ ಸಿಐಟಿಯುನ ಸಾವಿರಾರು ಕಾರ್ಯಕರ್ತರ ದೀರ್ಘಕಾಲದ ಕನಸೊಂದು ಈಡೇರಿದೆ. ನವಂಬರ್ 7 ರಿಂದ ಸಿಐಟಿಯು ರಾಜ್ಯ ಸಮಿತಿ ಸ್ವಂತ ಕಛೇರಿಯಲ್ಲಿ ಕಾರ್ಯಾರಂಭ ಮಾಡಿದೆ. ಬೆಂಗಳೂರಿನ ಕೇಂದ್ರ ಸ್ಥಳವಾದ ಕೃ.ರಾ.ಮಾರುಕಟ್ಟೆ ಬಳಿಯಿರುವ ಈ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಸಿಐಟಿಯುವಿನ ಅಖಿಲಭಾರತ ಕಾರ್ಯದರ್ಶಿಗಳಲ್ಲೊಬ್ಬರಾದ ಡಬ್ಲ್ಯೂ.ಆರ್.ವರದರಾಜನ್ ಉಪಸ್ಥಿತರಿದ್ದರು. ಅವರಲ್ಲದೆ ಸಿಐಟಿಯು ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಸಮಾರಂಭದಲ್ಲಿ ಮಾತನಾಡಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಜಿ.ಎನ್.ನಾಗರಾಜ್ ಮತ್ತು ಇತರ ಹಲವಾರು ಸಾಮೂಹಿಕ ಸಂಘಟನೆಗಳ ಮುಖಂಡರು ಮಾತನಾಡಿ ಸಿಐಟಿಯುವನ್ನು ಅಭಿನಂದಿಸಿದರು.

ಜಿ-15 ಶೃಂಗ ಸಭೆ - ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಆತಂಕ



ಇತ್ತೀಚೆಗೆ ಮಲೇಶ್ಯಾದ ಕೌಲಾಲಂಪೂರ್‌ನಲ್ಲಿ ನಡೆದ ಜಿ-15 ಶೃಂಗಸಭೆ ಆರಂಭದಲ್ಲಿ ಮೂಡಿದ ಭರವಸೆ ನಿಜಗೊಳಿಸದಿದ್ದರೂ, ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಆತಂಕ, ಆ ಬಗ್ಗೆ ಏನಾದರೂ ಮಾಡುವ ಬಗ್ಗೆ ದೃಢ ನಿರ್ಧಾರ ಕಂಡು ಬಂತು. ಆದರೆ ಜಾಗತೀಕರಣದ ಮೂಲಭೂತ ಸಿದ್ಧಾಂತದ ಬಗ್ಗೆ ಪ್ರಶ್ನಿಸುವ ಹಂತಕ್ಕೆ ಇನ್ನೂ ಬಂದಿಲ್ಲ. ಭಾರತ ಮತ್ತು ಮಲೇಶ್ಯಾ ಆರಂಭದಲ್ಲಿ ವ್ಯಕ್ತಪಡಿಸಿದ ಪ್ರಬಲ ಅಭಿಪ್ರಾಯಗಳು ಇತರ ದೇಶಗಳಿಗೆ ಅಷ್ಟು ಪ್ರಮುಖ ಎನಿಸಲಿಲ್ಲ. ಅಲ್ಲದೆ ಅಭಿವೃದ್ಧ ಬಂಡವಾಳಶಾಹಿ ಜಗತ್ತು ಮೂರನೇ ಜಗತ್ತಿನ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿರುದ್ಧ ತಾಳುತ್ತಿರುವ ಐಕ್ಯ ದೃಢ ನಿಲುವಿಗೆ ಸವಾಲು ಹಾಕಬಲ್ಲ, ಐಕ್ಯ ದೃಢ ನಿಲುವು ಜಿ-15ರಲ್ಲಿ ಕಂಡು ಬರಲಿಲ್ಲ.

ಇತ್ತೀಚೆಗೆ ದಕ್ಷಿಣ-ಪೂರ್ವ ಏಶ್ಯಾದ ಹಣದ ಮೇಲೆ ಆಕ್ರಮಣ ಮಾಡಿ, ಅದನ್ನು ಅಪಮೌಲ್ಯಗೊಳಿಸಿದ ತೀವ್ರ ಬಿಕ್ಕಟ್ಟು ಸೃಷ್ಟಿಸಿದ ವಿದೇಶೀ ಆರ್ಥಿಕ ಸಂಸ್ಥೆಗಳ ಬಗ್ಗೆ ಪ್ರತ್ಯೇಕ ಹೇಳಿಕೆಯನ್ನು ಶೃಂಗಸಭೆ ಅಂಗೀಕರಿಸಿದ್ದು ವಿಶೇಷವಾಗಿತ್ತು.

ಮುಂದಿನ ತಿಂಗಳು ಜಿ-15 ಅರ್ಥ ಮಂತ್ರಿಗಳ ಸಭೆ ಹಾಗೂ ಪ್ರಾದೇಶಿಕ ಭದ್ರತೆ ನಿಧಿ ಬಗ್ಗೆ ಪ್ರಯತ್ನ ಮಾಡಬೇಕೆಂಬ ನಿರ್ಧಾರವೂ ಇಂತಹ ಪ್ರಯತ್ನಗಳಿಗೆ ಐಎಂಎಫ್ ಹಾಗೂ ಅಭಿವೃದ್ಧ ಬಂಡವಾಳ ಶಾಹಿ ದೇಶಗಳ ಪ್ರಬಲ ವಿರೋಧದ ಹಿನ್ನೆಲೆಯಲ್ಲಿ ಶೃಂಗಸಭೆಯು ವಿಶೇಷವಾಗಿತ್ತು.

ಶೃಂಗಸಭೆ ಮೂರನೇ ಜಗತ್ತಿನ ದೇಶಗಳ ಐಕ್ಯತೆ ಹಾಗೂ ಪರಸ್ಪರ ಸಹಕಾರ ಹಾಗೂ ಅಭಿವೃದ್ಧ ದೇಶಗಳ ಜತೆ ಮಾತುಕತೆ ನಡೆಸುವ ಬಗ್ಗೆ ಒತ್ತು ನೀಡಿತು. WTO ಸಭೆಯ ಮೊದಲು ಹಾಗೂ ಆ ಸಮಯದಲ್ಲಿ ಜಿ-15 ವಾಣಿಜ್ಯ ಮಂತ್ರಿಗಳು ಸಭೆ ಸೇರಿ ಐಕ್ಯ ದೃಢ ನಿಲುವು ತೆಗೆದುಕೊಳ್ಳುವ ಬಗ್ಗೆ ನಿರ್ಧಾರ ಗಮನಾರ್ಹವಾಗಿತ್ತು.

ವಿದೇಶೀ ನೇರ ಬಂಡವಾಳ ಹೂಡಿಕೆ, ಹಾಗೂ ಖಾಸಗಿ ಬಂಡವಾಳದ ಪ್ರಾಮುಖ್ಯತೆ ಬಗ್ಗೆ ಜಾಗತೀಕರಣದ ಮಂತ್ರವನ್ನು ಶೃಂಗಸಭೆ ಸಹ ಪಠಿಸಿದೆ.

ಪಾಕಿಸ್ತಾನ ರಾಜಕೀಯ ಬಿಕ್ಕಟ್ಟಿನ ಅಂಚಿನಿಂದ ಪಾರು

ಪಾಕಿಸ್ತಾನ ಇತ್ತೀಚೆಗೆ ಸಂವಿಧಾನಿಕ, ರಾಜಕೀಯ ಬಿಕ್ಕಟ್ಟಿನ ಅಂಚಿನಿಂದ ಪಾರಾಗಿ ಬಂದಿದೆ. ಪ್ರಸ್ತುತ ನವಾಜ್ ಷರೀಫ್‌ನ ಸರಕಾರ ಮೂರನೇ ಎರಡಕ್ಕಿಂತ ಹೆಚ್ಚಿನ ಭಾರಿ ಬಹುಮತ ಬಂದಿದ್ದರೂ, ರಾಜಕೀಯ ಅಭದ್ರತೆ, ಅನಿಶ್ಚಿತತೆ ಪಾಕಿಸ್ತಾನದಲ್ಲಿ ಕಾಡಿದೆ. ಈ ಬಿಕ್ಕಟ್ಟಿಗೆ ಮುಖ್ಯವಾದ ಕಾರಣ ನ್ಯಾಯಾಂಗ ಹಾಗೂ ಕಾರ್ಯಾಂಗಗಳ ನಡುವೆ ಘರ್ಷಣೆ. ಇದು ಮುಖ್ಯವಾಗಿ ಸುಪ್ರೀಂಕೋರ್ಟ್ ಜಡ್ಜ್‌ಗಳ ಆಯ್ಕೆಗೆ ಸುಪ್ರೀಂಕೋರ್ಟ್ ಮೂಲಕ ನಿರ್ಧರಿಸಬೇಕೆ, ಸರಕಾರ ನಿರ್ಧರಿಸಬೇಕೆ ಅಂತ.

ಸುಪ್ರೀಂಕೋರ್ಟ್ ಪ್ರಧಾನಿ ನವಾಜ್ ಷರೀಫ್ ಮೇಲೆ ಕೋರ್ಟ್ ನಿಂದನೆ ಹೇರುವಷ್ಟು ಪ್ರಕೋಪಕ್ಕೆ ಹೋಗಿತ್ತು. ಕೊನೆಗೆ ಸೈನ್ಯ, ಅಧ್ಯಕ್ಷ ಹಾಗೂ ನ್ಯಾಯಾಂಗ ಒತ್ತಡಕ್ಕೆ ಮಣಿದ ಪ್ರಧಾನಿ ಸುಪ್ರೀಂಕೋರ್ಟ್ ಮುಖ್ಯಸ್ಥರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಯಿತು.

ಇರಾಕ್-ಅಮೇರಿಕ ತಿಕ್ಕಾಟ ಮುಂದುವರಿಕೆ

ಇರಾಕ್ ವಿಶ್ವ ಸಂಸ್ಥೆಯ ಶಸ್ತ್ರ ನಿರೀಕ್ಷಣೆ ತಂಡದಲ್ಲಿ ಅಮೇರಿಕನ್ನರು ಭಾಗವಹಿಸುವುದಕ್ಕೆ ಅವಕಾಶ ಕೊಡದೆ, ಇರಾಕ್ ಪ್ರದೇಶಗಳಲ್ಲಿ ವಿಶ್ವ ಸಂಸ್ಥೆ ಪರೀಕ್ಷಣೆಯ ಹೆಸರಲ್ಲಿ ಅಮೇರಿಕ ಕೊಟ್ಟಿರುವ ಯು-2 ಬೇಹುಗಾರಿಕೆ ವಿಮಾನವನ್ನು ಹಾರಿಸಿದರೆ ಹೊಡೆದು ಉರುಳಿಸುವ ತನ್ನ ನಿರ್ಧಾರವನ್ನು ಪುನರುಚ್ಚರಿಸಿದೆ. ಅಮೇರಿಕ ಇರಾಕ್ ತನ್ನ ನಿರ್ಧಾರವನ್ನು ಬದಲಿಸದಿದ್ದರೆ, ಅದರ ಮೇಲೆ ಮಿಲಿಟರಿ ಕಾರ್ಯಾಚರಣೆ ತೆಗೆದುಕೊಳ್ಳುವುದಾಗಿ ಹಾಗೂ ಅಂತರ್ರಾಷ್ಟ್ರೀಯ ವಿಮಾನ ಹಾರಾಟದ ದಿಗ್ಬಂಧನ ಹೇರುವುದಾಗಿ ಬೆದರಿಸಿದೆ. ಈ ನಡುವೆ ಭದ್ರತಾ ಸಮಿತಿಯಲ್ಲಿ ಅಮೇರಿಕ ತನ್ನ ಹಟಮಾರಿ ನೀತಿಗೆ ಬೆಂಬಲ ಬಿಟ್ಟರೆ ಇತರ ಎಲ್ಲಾ ದೇಶಗಳು(ರಶ್ಯಾ, ಫ್ರಾನ್ಸ್, ಚೀನಾ ಸೇರಿದಂತೆ) ಬಲಪ್ರಯೋಗವನ್ನು ವಿರೋಧಿಸಿ, ಮಾತುಕತೆಗೆ ಒಂದು ತಂಡವನ್ನು ಬಾಗ್ದಾದ್‌ಗೆ ಕಳಿಸಿವೆ. ಮಾತುಕತೆ ನಡೆಯುತ್ತಿರುವವರೆಗೆ ಯು-2 ವಿಮಾನವನ್ನು ವಿಶ್ವ ಸಂಸ್ಥೆಯ ಕೆಲಸಕ್ಕೆ ಕಳಿಸುವುದಿಲ್ಲ ಎಂದೂ ನಿರ್ಧರಿಸಿದೆ. ವಿಶ್ವ ಸಂಸ್ಥೆಯ ಕ್ರಮದಿಂದಾಗಿ ಇರಾಕ್ ಶಸ್ತ್ರಾಸ್ತ್ರ ನಿರೀಕ್ಷಣಾ ತಂಡದ ಅಮೇರಿಕನ್ ಸದಸ್ಯರನ್ನು ಗಡಿಪಾರು ಮಾಡುವ ತಾರೀಕನ್ನು ಮುಂದಕ್ಕೆ ಹಾಕಿದೆ. ಇರಾಕ್ ತನ್ನ ವಿರೋಧ, ಪ್ರತಿರೋಧ ವಿಶ್ವ ಸಂಸ್ಥೆಯ ವಿರುದ್ಧ, ವಿಶ್ವ ಸಂಸ್ಥೆಯನ್ನು ಅಮೇರಿಕ ತನ್ನ ದುರುದ್ದೇಶಗಳಿಗೆ ಬಳಸುವುದರ ವಿರುದ್ಧ ಎಂದು ಸ್ಪಷ್ಟಪಡಿಸಿದೆ.

ಭೂ ಸಮ್ಮೇಳನದಲ್ಲಿ ಕೊಟ್ಟ ಮಾತಿಗೆ ತಪ್ಪಿದ ಅಮೇರಿಕ

ರಿಯೋ ಡಿ ಜನೇರಿಯೋದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಭೂ ಸಮ್ಮೇಳನದಲ್ಲಿ ಈಗ ಜಗತ್ತು ಎದುರಿಸುತ್ತಿರುವ ಓಝೋನ್ ಕವಚಕ್ಕೆ ತೂತು ಬೀಳುವ ಸಮಸ್ಯೆ ಎದುರಿಸಲು ಅದಕ್ಕೆ ಕಾರಣವಾಗುವ ವಾಯು ಕಲ್ಮಶಗಳ ಉಗುಳುವಿಕೆ ನಿಲ್ಲಿಸಲು ಕ್ರಮಗಳ ಬಗ್ಗೆ ನಿರ್ಧಾರ ಕೈಗೊಂಡಿತ್ತು. ಈ ನಿರ್ಧಾರಕ್ಕೆ ವಿರುದ್ಧವಾದ ಅಧ್ಯಕ್ಷ ಕ್ಲಿಂಟನ್‌ರ ಇತ್ತೀಚಿನ ನೀತಿ ಮೂರನೇ ಜಗತ್ತಿನ ದೇಶಗಳಿಂದ ಮಾತ್ರವಲ್ಲ, ಅಮೇರಿಕದ ಯುರೋಪಿಯನ್ ಹಾಗೂ ಏಶ್ಯನ್ ಮಿತ್ರರಾಷ್ಟ್ರಗಳಿಂದಲೂ ತೀವ್ರ ಟೀಕೆಗೆ ಒಳಗಾಗಿದೆ.

ಓಝೋನ್ ಕವಚಕ್ಕೆ ತೂತು ಬೀಳುವುದಕ್ಕೆ ಕಾರಣವಾದ ಅನಿಲಗಳ ಉಗುಳುವಿಕೆಗೆ ಮುಖ್ಯ ಕಾರಣವಾದ ದೇಶಗಳು, ಆ ಅನಿಲಗಳ ಉಗುಳುವಿಕೆ ಕಡಿಮೆ ಮಾಡಬೇಕು. ಅದು ಮುಖ್ಯವಾಗಿ ಮೋಟಾರು ವಾಹನಗಳಲ್ಲಿ ಬಳಸುವ ಪೆಟ್ರೋಲ್ ಮತ್ತು ತೈಲ ಉರುವಲಾಗಿ ಬಳಸುವುದರಿಂದ ಹಾಗೂ ಏರ್ ಕಂಡೀಷನರ್‌ಗಳಲ್ಲಿ ಬಳಸುವ ಶೈತ್ಯಕಾರಕಗಳಿಂದ. ಇವನ್ನು ದೊಡ್ಡ ಪ್ರಮಾಣದಲ್ಲಿ ಬಳಸುವುದು ಅಭಿವೃದ್ಧ ದೇಶಗಳು. ಈ ದೇಶಗಳು ಆ ಅನಿಲಗಳ ಉಗುಳುವಿಕೆ ಕಡಿಮೆ ಮಾಡಬೇಕು. ಮೂರನೇ ಜಗತ್ತಿನ ದೇಶಗಳು ಅನಿಲಗಳ ಉಗುಳುವಿಕೆ ಕಡಿಮೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಈ ದೇಶಗಳು ತಮ್ಮ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಿ ಇದ್ದು, ಇಂತಹ ಕ್ರಮ ಬೆಳವಣಿಗೆಯನ್ನು ಸ್ಥಗಿತಗೊಳಿಸಬಹುದು. ಕೇವಲ ನಾಲ್ಕು ಶೇಕಡಾ ಜಾಗತಿಕ ಜನಸಂಖ್ಯೆ ಹೊಂದಿರುವ ಅಮೇರಿಕ ಕಾಲು ಭಾಗ ಜಾಗತಿಕ ವಿಷ ಅನಿಲ ಉಗುಳುವಿಕೆಗೆ ಕಾರಣವಾಗಿದೆ. ಈ ಎಲ್ಲಾ ಒಪ್ಪಂದಗಳನ್ನು ಗಾಳಿಗೆ ತೂರಿ, ಅಮೇರಿಕನ್ ಕಂಪನಿಗಳ ಒತ್ತಡಗಳಿಗೆ ಮಣಿದಿದೆ. ಇಂತಹ ದೇಶ ತನ್ನ ಪ್ರಮುಖ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ವಿಶ್ವಾಸಘಾತಕವೇ ಸರಿ. ಭೂ ಸಮ್ಮೇಳನದ ಒಪ್ಪಂದದ ಪ್ರಕಾರ, ಈ ದಶಕದ ಕೊನೆಯ ಹೊತ್ತಿಗೆ(ಕ್ರಿ.ಶ. 2000) ಅನಿಲಗಳ ಉಗುಳುವಿಕೆ ದಶಕದ ಆರಂಭ(ಕ್ರಿ.ಶ.1990)ಕ್ಕಿಂತ ಕಡಿಮೆ ಇರಬೇಕು.

ಆದರೆ ಅಧ್ಯಕ್ಷ ಕ್ಲಿಂಟನ್‌ರವರು ಈಗ ಘೋಷಿಸಿರುವ ನೀತಿಯ ಪ್ರಕಾರ ಕ್ರಿ.ಶ. 2000 ಹೊತ್ತಿಗೆ, ಅಮೇರಿಕದ ಅನಿಲ ಉಗುಳುವಿಕೆಗೆ ಪ್ರಮಾಣ ಕ್ರಿ.ಶ. 1990ರ ಹಂತಕ್ಕಿಂತ ಶೇಕಡಾ 13ರಷ್ಟು ಹೆಚ್ಚಿರುತ್ತದೆ. ಕ್ಲಿಂಟನ್‌ರ ನೀತಿ ಪ್ರಕಾರ ಕ್ರಿ.ಶ. 2010ರ ಹೊತ್ತಿಗೆ ಕ್ರಿ.ಶ. 1990ರ ಅನಿಲ ಉಗುಳುವಿಕೆ ಹಂತದಷ್ಟಿರುತ್ತದೆ. ಇದು ಭಾರಿ ನಿಧಾನ ಪ್ರಗತಿ ಎಂದು ಬೇರೆ ಹೇಳಬೇಕಾಗಿಲ್ಲ.

ಯುರೋಪಿಯನ್ ಒಕ್ಕೂಟ ಕ್ರಿ.ಶ. 2010ರ ಹೊತ್ತಿಗೆ, 1990ರ ಹಂತಕ್ಕಿಂತ ಶೇಕಡಾ 15ರಷ್ಟು ಕಡಿಮೆ ಮಾಡುವ ಉದ್ದೇಶ ಹೊಂದಿದೆ. ಈ ಸಮಸ್ಯೆಗೆ ಕಾರಣವಾದ ಪ್ರಮುಖ ದೇಶವಾಗಿ, ಅದನ್ನು ನಿವಾರಿಸಲು ಪ್ರಮುಖ ಜವಾಬ್ದಾರಿ ಹೊಂದಿರುವ ಬಗ್ಗೆ ಯುರೋಪ್, ಜಪಾನ್ ಗಳು ಅಮೇರಿಕವನ್ನು ತೀವ್ರವಾಗಿ ಖಂಡಿಸಿದೆ. ಜರ್ಮನ್ ಈ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಇದರ ಬದಲು ಅಮೇರಿಕ ಮೂರನೇ ಜಗತ್ತಿನ ದೇಶಗಳು ಅನಿಲ ಉಗುಳುವಿಕೆ ಕಡಿತದಲ್ಲಿ ಪಾಲುಗೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದೆ.

ರಶ್ಯದ ತುಂಬಾ ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವ

ರಶ್ಯ ಹಾಗೂ ಹಿಂದಿನ ಸೋವಿಯತ್ ಗಣರಾಜ್ಯಗಳ ತುಂಬಾ ನವಂಬರ್ 7ರಂದು ಸಾವಿರಾರು ಜನ ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವವನ್ನು, ಭಾರೀ ರ್‍ಯಾಲಿಗಳಲ್ಲಿ ಭಾಗವಹಿಸುವ ಮೂಲಕ ಆಚರಿಸಿದರು. ಮಾಸ್ಕೋದ ಕೇಂದ್ರಭಾಗದಲ್ಲಿ ನಡೆದ ಭಾರಿ ರ್‍ಯಾಲಿಯಲ್ಲಿ ಮೂರು ಲಕ್ಷ ಜನ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಈ ರ್‍ಯಾಲಿಯಲ್ಲಿ ಮಾಡಿದ ಭಾಷಣಗಳಲ್ಲಿ ಸಮಾಜವಾದವನ್ನು ನಿರ್ನಾಮ ಮಾಡಿ, ಮಾರುಕಟ್ಟೆ ಸುಧಾರಣೆ ಹೆಸರಲ್ಲಿ ಜನರ ಮೇಲೆ ಸಂಕಟಗಳ ಹೊರೆ ಹೊರಿಸುತ್ತಿರುವ ಯೆಲ್ಸ್ಟಿನ್ ಸರಕಾರವನ್ನು ಕಿತ್ತೊಗೆಯಬೇಕೆಂದು ಕರೆಗಳು ಕೇಳಿ ಬಂದವು. ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಗೆನ್ನಾಡಿ ಝುಗನೋವ್ ಅಕ್ಟೋಬರ್ ಕ್ರಾಂತಿ ಹಾಗೂ ಮಹಾನಾಯಕ ಲೆನಿನ್‌ರ ಮಹಾನ್ ಆದರ್ಶಗಳಿಗೆ ಮತ್ತೆ ಜೀವ ತುಂಬುವ ದಿನ ಬಂದೇ ಬರುತ್ತದೆ ಎಂದು ಸಾವಿರಾರು ಕೆಂಬಾವುಟಗಳ ಹಾರಾಟ ಮತ್ತು ಹರ್ಷೋದ್ಗಾರಗಳ ಮಧ್ಯೆ ಹೇಳಿದರು.

ಭಯೋತ್ಪಾದಕ ಸಂಘಟನೆ ಎಂದು ಗುರುತಿಸಿದ್ದರ ವಿರುದ್ಧ ಎಲ್‌ಟಿಟಿಇಯಿಂದ ಅಮೇರಿಕನ್ ಕೋರ್ಟ್‌ನಲ್ಲಿ ದೂರು

ಎಲ್‌ಟಿಟಿಇ ಸೇರಿದಂತೆ 30 ಸಂಘಟನೆಗಳನ್ನು ಭಯೋತ್ಪಾದಕ ಸಂಘಟನೆ ಎಂದು ಗುರುತಿಸಿ ಅಮೇರಿಕನ್ ಸರಕಾರದ ವಿದೇಶಾಂಗ ವಿಭಾಗ ಈ ಸಂಘಟನೆಗಳು ಅಮೇರಿಕದಲ್ಲಿ ಕಚೇರಿಗಳನ್ನು ತೆರೆಯುವುದು, ಧನ ಸಂಗ್ರಹ ಮಾಡುವುದು ಇತ್ಯಾದಿಗಳನ್ನು ನಿಷೇಧಿಸಿದೆ. ಈ ನಿರ್ಧಾರದ ವಿರುದ್ಧ ಎಲ್‌ಟಿಟಿಇ ಅಮೇರಿಕನ್ ಕೋರ್ಟ್‌ನಲ್ಲಿ ದೂರು ಸಲ್ಲಿಸಿವೆ.

ಈ ನಡುವೆ ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರಕಾರದ ನಡುವಿನ ಆಂತರಿಕ ಕದನ ಇನ್ನೂ ತೀವ್ರವಾಗುತ್ತಿದೆ. ಶ್ರೀಲಂಕಾ ಸರಕಾರ ತಮಿಳು ಪ್ರದೇಶಗಳಿಗೆ ಸ್ವಾಯತ್ತತೆ ಕೊಡುವ ಹಾಗೂ ಶ್ರೀಲಂಕಾವನ್ನು ಫೆಡರಲ್ ಮಾದರಿಯ ಗಣರಾಜ್ಯ ಮಾಡುವ ಪ್ರಸ್ತಾವವನ್ನು ವಿರೋಧ ಪಕ್ಷ ಯುನೈಟೆಡ್ ನೇಶನಲ್ ಪಾರ್ಟಿ ಮತ್ತು ಎಲ್‌ಟಿಟಿಇ ಎರಡೂ ತಿರಸ್ಕರಿಸಿವೆ. ಇದರಿಂದ ತಮಿಳು ಜನಾಂಗೀಯ ಸಮಸ್ಯೆಗೆ ಶಾಂತಿಯುತ ಪರಿಹಾರದ ಸಾಧ್ಯತೆ ಪುನಃ ಹಿಂದಕ್ಕೆ ಹೋಗಿದೆ. ವಾಯುನಿಯ ಮತ್ತು ಕಿಲಿನೊಚ್ಚಿ ಮಧ್ಯದ 75 ಕಿ.ಮೀ. ರಷ್ಟು ಉದ್ದದ ಹೆದ್ದಾರಿಯ ಮೇಲೆ ನಿಯಂತ್ರಣ ಸಾಧಿಸಲು ಶತಪ್ರಯತ್ನ ನಡೆಸಿದೆ. ಎಲ್‌ಟಿಟಿಇ ಮೂರು ಪ್ರಮುಖ ದಾಳಿಗಳ ನಂತರವೂ, ಸೈನ್ಯವನ್ನು ಈ ಪ್ರದೇಶದಿಂದ ಹಿಮ್ಮೆಟ್ಟಿಸಲು ಆಗಿಲ್ಲ.

ಹವಾನಾದಲ್ಲಿ ಅಂತರ್ರಾಷ್ಟ್ರೀಯ ಕಾರ್ಯಾಗಾರ

ಪುಟ 5 ರಿಂದ

ಒಂದು ಸಮಗ್ರ ನೋಟ ನೀಡಲು ಇಲ್ಲಿ ಸಾಧ್ಯವಿಲ್ಲ. ಮೂರು ಆಯೋಗಗಳ ಸಂಕ್ಷಿಪ್ತ ವರದಿಗಳ ಆಧಾರದಲ್ಲಿ ಈ ಕೆಳಗಿನ ಅಂಶಗಳನ್ನು ರೂಪಿಸಬಹುದು.

■ ಸಮಾಜವಾದಿ ವಾಸ್ತವತೆಯ ಕುರಿತ ಒಂದನೇ ಆಯೋಗದಲ್ಲಿ 39 ಪ್ರಬಂಧಗಳನ್ನು ಮಂಡಿಸಲಾಯಿತು. ಚರ್ಚೆಯ ವೇಳೆಗೆ 30 ಮಂದಿ ಮಧ್ಯಪ್ರವೇಶಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಮಾಜವಾದದ ಭವಿಷ್ಯದ ಬಗ್ಗೆ ನಿರಾಶಾವಾದ ಎಲ್ಲೂ ಈ ಚರ್ಚೆಗಳಲ್ಲಿ ಕಂಡುಬರಲಿಲ್ಲ. ಸ್ವಯಂ ಸ್ಫೂರ್ತಿಯ ವಿಧಾನಗಳಿಗಿಂತ ಸಮಾಜವಾದದ ಹೋರಾಟ ಮುನ್ನಡೆಯದು ಎಂದು ಗಮನಿಸಲಾಯಿತು. ಸಮಾಜವಾದದ ಏಕೈಕ ಮಾದರಿಯೆಂಬುದಿಲ್ಲ. ಸಮಾಜವಾದವನ್ನು ಕಟ್ಟುವ ದಾರಿಯಲ್ಲಿನ ವೈವಿಧ್ಯತೆಯ ಮಹತ್ವವನ್ನು ಗಮನಿಸಲಾಯಿತು. ಮಾರುಕಟ್ಟೆ, ಮಧ್ಯಪ್ರವೇಶ ಹಾಗೂ ಸಮಾಜವಾದೀ ಸಮಾಜಗಳ ಮೇಲೆ ಅದರ ಪರಿಣಾಮದ ಕುರಿತು ಚರ್ಚಿಸಲಾಯಿತು. ಸಮಾಜವಾದಿ ಅಭಿವೃದ್ಧಿಯಲ್ಲಿ ಜನರ ಭಾಗವಹಿಸುವಿಕೆ ಹಾಗೂ ಮಾನವ ಅಂಶಗಳನ್ನು ಒತ್ತಿ ಹೇಳಲಾಯಿತು.

■ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಚಾರಧಾರೆಯ ಸಂಬದ್ಧತೆಯ ಕುರಿತ ಎರಡನೇ ಆಯೋಗದಲ್ಲಿ 36 ಪ್ರಬಂಧ ಗಳನ್ನು ಮಂಡಿಸಲಾಯಿತು. 46 ಮಂದಿ ಮಧ್ಯಪ್ರವೇಶಿಸಿ ಮಾತನಾಡಿದರು. ಮಾರ್ಕ್ಸ್‌ವಾದದ ಸಮರ್ಥನೆ ಈ ಚರ್ಚೆಗಳಲ್ಲಿ ಪ್ರಧಾನ ಅಂಶವಾಗಿತ್ತು. ಹೊಸ ಸಮಸ್ಯೆಗಳನ್ನು ಅರಿಯಲು ತೆರೆದುಕೊಳ್ಳುವ ಅಗತ್ಯವಿದೆಯಾದರೂ ಮೂಲಭೂತ ನಿಲುವುಗಳನ್ನು ಬಿಡಬಾರದು. ಬಂಡವಾಳಶಾಹಿಯ ವೈಜ್ಞಾನಿಕ ಅಧ್ಯಯನ ಮಾಡುವ ಪರಿಕರಗಳು ಇರುವುದು ಮಾರ್ಕ್ಸ್‌ವಾದೀ ಸಿದ್ಧಾಂತದಲ್ಲೇ. ಸೋವಿಯತ್ ಒಕ್ಕೂಟ ಅದೃಶ್ಯವಾದದ್ದು ಸಮಾಜವಾದದ ಅಂತ್ಯವೇನಲ್ಲ. ಅದರ ಒಂದು ಚಾರಿತ್ರಿಕ ಆಚರಣೆಯ ಅಂತ್ಯವಷ್ಟೆ. ಪ್ರತಿಯೊಂದು ದೇಶದಲ್ಲೂ ಸಮಾಜವಾದವನ್ನು ಕಟ್ಟುವ ದಾರಿ ಭಿನ್ನವಾಗಿರುತ್ತದೆ. ಪ್ರತಿಯೊಂದು ಸಾರ್ವತ್ರಿಕ ಬೇರುಗಳನ್ನು ಉಳಿಸಿಕೊಂಡೇ ತನ್ನದೇ ವಿಶಿಷ್ಟ ಛಾಪನ್ನು ಹೊಂದಿರುತ್ತದೆ.

ಪಕ್ಷ ಮತ್ತು ಅದರ ಕಾರ್ಯನಿರ್ವಹಣೆಯ ಸಿದ್ಧಾಂತವನ್ನು ಚರ್ಚಿಸಲಾಯಿತು. ವರ್ಗಗಳು ಮತ್ತು ಪಕ್ಷಗಳ ಮೈತ್ರಿಗಳ ವ್ಯವಸ್ಥೆಯನ್ನು ಚರ್ಚಿಸಲಾಯಿತು. ಮಾರ್ಕ್ಸ್‌ವಾದದ ನವೀಕರಣ ಎಂದರೆ ಅದರ ಸೈದ್ಧಾಂತಿಕ ನಿರಸ್ತ್ರೀಕರಣವಲ್ಲ ಎಂಬ ಅಂಶವನ್ನು ಚರ್ಚೆಯಲ್ಲಿ ಒತ್ತಿ ಹೇಳಲಾಯಿತು.

■ ಮೂರನೇ ಆಯೋಗದಲ್ಲಿ 38 ಪ್ರಬಂಧಗಳ 70 ಮಧ್ಯ ಪ್ರವೇಶಗಳು ಇದ್ದವು. 20ನೇ ಶತಮಾನದ ಅಂತ್ಯದಲ್ಲಿ ಸಾಮ್ರಾಜ್ಯಶಾಹಿಯ ಸ್ವರೂಪ ಈ ಪ್ರಬಂಧಗಳಲ್ಲಿ ವಿಶ್ಲೇಷಿಸಿದ ಅಂಶ. ಹಣಕಾಸಿನ ಜಾಗತೀಕರಣ, ರಾಷ್ಟ್ರೀಯ ಗಡಿಗಳನ್ನು ಮೀರಿದ ಬೃಹತ್ ಕಂಪನಿಗಳ ಪಾತ್ರ, ನವ-ಉದಾರವಾದಿ ಧಾಳಿಗಳು ಹಾಗೂ ಸಂರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳು, ಸಾಮ್ರಾಜ್ಯಶಾಹಿ ಹೇರಿದ ಕಾರ್ಯತಂತ್ರಗಳ ಮಿಲಿಟರಿ ಬೆದರಿಕೆಗಳು, ಸಮಕಾಲೀನ ಬಂಡವಾಳಶಾಹಿ ವಿಧಾನಗಳು ಕಾಮಿಕ ವರ್ಗ ಮತ್ತು ಇತರ ವಿಭಾಗಗಳ ಮೇಲೆ ಪರಿಣಾಮ ಇವನ್ನು ಚರ್ಚಿಸಲಾಯಿತು. ನವ-ಉದಾರೀಕರಣಕ್ಕೆ ಪ್ರತಿರೋಧ, ಸಾಮ್ರಾಜ್ಯಶಾಹಿ - ವಿರೋಧಿ ಕಾರ್ಯತಂತ್ರಗಳು ಹಾಗೂ ಮೈತ್ರಿಗಳು ಹಾಗೂ ಜಾಗತೀಕರಣದ ಯುಗದಲ್ಲಿ ದೇಶಗಳಲ್ಲಿ ವರ್ಗ ಹೋರಾಟಗಳ ಸಂಬದ್ಧತೆ - ಇವನ್ನು ಈ ಆಯೋಗದಲ್ಲಿ ಚರ್ಚಿಸಲಾಯಿತು.

ಈ ಚರ್ಚೆಗಳು ಹಾಗೂ ಅನುಭವಗಳ ವಿನಿಮಯ ಒಟ್ಟಾರೆಯಾಗಿ ಕ್ರಾಂತಿಕಾರಿ ಪಕ್ಷಗಳು ಹಾಗೂ ಸಂಘಟನೆಗಳು 1992ರ ಸೋವಿಯತ್ ಒಕ್ಕೂಟದ ಕುಸಿತದ ಪರಿಣಾಮಗಳಿಂದ ಮೇಲೇಳುತ್ತಿವೆ ಎಂಬುದನ್ನು ತೋರಿಸಿವೆ. ಚರ್ಚೆಯಲ್ಲಿ ಭಾಗವಹಿಸಿದವರಲ್ಲಿ ಹತಾಶೆಯಾಗಲೀ ನಿರಾಶಾವಾದವಾಗಲೀ ಇರಲಿಲ್ಲ. ವಿಶ್ವದಾದ್ಯಂತ ಕ್ರಾಂತಿಕಾರಿ ಶಕ್ತಿಗಳು ಹಾಗೂ ಆಂದೋಲನಗಳು ಹೊಸದಾಗಿ ಒಂದಾಗುತ್ತಿವೆ ಎಂಬುದನ್ನು ಇದು ತೋರಿಸುತ್ತದೆ. ಚೀಣಾ, ವಿಯೆಟ್ನಾಂ, ಕೊರಿಯಾ, ಲಾವೋಸ್ ಹಾಗೂ ಕ್ಯೂಬಾ ಈ ಸಮಾಜವಾದಿ ದೇಶಗಳ ಪಕ್ಷಗಳ ಪ್ರತಿನಿಧಿಗಳು ವಿಶ್ವದಲ್ಲಾದ ತೀವ್ರ ಬದಲಾವಣೆಗಳ ಹಿನ್ನೆಲೆಯಲ್ಲಿ ತಮ್ಮ ಸಮಾಜವಾದೀ ಯೋಜನೆಯನ್ನು ರಕ್ಷಿಸಿಕೊಂಡು ಮುಂದೊಯ್ಯಲು ಸಾಧ್ಯವಾಗುವಂತೆ ತಮ್ಮ ಕಾರ್ಯತಂತ್ರಗಳನ್ನು ಪುನರ್ರೂಪಿಸಲು ತಾವು ಬದ್ಧರು ಎಂದರು. ಮುಂದುವರೆದ ಬಂಡವಾಳಶಾಹಿ ದೇಶಗಳಿಂದ ಹೆಚ್ಚುತ್ತಿರುವ ಬಲಪಂಥೀಯ ಧಾಳಿಗಳಿಗೆ ಪ್ರತಿರೋಧ ಹೆಚ್ಚುತ್ತಿದೆ ಎಂಬ ಸಂದೇಶ ಬಂದರೆ ಮೂರನೇ ಜಗತ್ತಿನ ದೇಶಗಳಿಂದ ರಾಷ್ಟ್ರೀಯ ಸಾರ್ವಭೌಮತೆ ಹಾಗೂ ಸ್ವಾತಂತ್ರ್ಯವನ್ನು ನಾಶಮಾಡುವುದನ್ನು ವಿರೋಧಿಸುವ ಎಲ್ಲಾ ಶಕ್ತಿಗಳ ಒಟ್ಟು ಸೇರಿಸಿ ನವ ಸಾಹತುವಾದಿ ಕ್ರಮಗಳ ವಿರುದ್ಧ ಹೋರಾಡುವ ದೃಢ ನಿರ್ಧಾರ ವ್ಯಕ್ತಗೊಂಡಿತು.

ಕ್ಯೂಬಾ ಪಾರ್ಟಿ ಮಹಾಧಿವೇಶನ

ಎರಡನೇ ದಿನ ಕೇವಲ 15 ದಿನಗಳ ಹಿಂದಷ್ಟೇ ನಡೆದ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ 5ನೇ ಮಹಾಧಿವೇಶನದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಲು ಸ್ವಲ್ಪ ಸಮಯ ಮೀಸಲಿಡಲಾಗಿತ್ತು. ಪೊಲಿಟ್ ಬ್ಯೂರೋ ಸದಸ್ಯ ಕಾಂ|| ಬೆಲಾಗ್ವೇರ್ ವಿವರ ನೀಡಿದರು. ಮೂರು ದಿನಗಳು ನಡೆದ ಈ ಪಾರ್ಟಿ ಮಹಾಧಿವೇಶನದಲ್ಲಿ 'ಐಕ್ಯತೆ, ಪ್ರಜಾಪ್ರಭುತ್ವ, ಮತ್ತು ಮಾನವ ಕುಲದ ಪಕ್ಷವನ್ನು ನಾವು ರಕ್ಷಿಸುತ್ತೇವೆ' ಎಂದು ರಾಜಕೀಯ ಸೈದ್ಧಾಂತಿಕ ಅಂಶಗಳುಳ್ಳ ಒಂದು ಠರಾವು ಹಾಗೂ ಒಂದು ಆರ್ಥಿಕ ಠರಾವನ್ನು ಅಂಗೀಕರಿಸಿತು. ಕರಡು ರಾಜಕೀಯ ವರದಿಯನ್ನು ಕ್ಯೂಬಾ ಕಮ್ಯುನಿಸ್ಟ್ ಪಕ್ಷದ 7,80,000 ಸದಸ್ಯರು ಮಾತ್ರವೇ ಅಲ್ಲ ಇಡೀ ಕ್ಯೂಬಾದ ಜನತೆ ತೀವ್ರವಾಗಿ ಚರ್ಚಿಸಿತ್ತು. 14 ವರ್ಷದ ಮೇಲ್ಪಟ್ಟು ವಯಸ್ಸಿನ 65 ಲಕ್ಷ ಜನ ಈ ಚರ್ಚೆಗಳಲ್ಲಿ ಪಾಲುಗೊಂಡರು ಎಂದು ತಿಳಿದುಬಂದಿದೆ.

ಇಪ್ಪತ್ತೊಂದನೇ ಶತಮಾನದಲ್ಲಿ ಬಂಡವಾಳಶಾಹಿಗೆ ಏಕೈಕ ಪರ್ಯಾಯವೆಂದರೆ ಸಮಾಜವಾದ ಎಂಬ ದೃಢ ಭಾವನೆ ಈ ಕಾರ್ಯಾಗಾರದಿಂದ ಹೊರಹೊಮ್ಮಿದ ಸರ್ವಾನುಮತದ ಸಂದೇಶ. ಸಮಾಜವಾದದ ಹಾಗೂ ಮಾರ್ಕ್ಸ್‌ವಾದವನ್ನು ಮತ್ತೊಮ್ಮೆ ಒತ್ತಿ ಹೇಳುವ ಈ ಸ್ಫೂರ್ತಿಗೆ ಅನುಗುಣವಾಗಿ ಕಾಂ|| ಬೆಲಾಗ್ವೇರ್ ಈ ಕಾರ್ಯಾಗಾರದ ಸಮಾರೋಪ ಮಾಡುತ್ತಾ ಇಂತಹ ಕಾರ್ಯಾಗಾರಗಳು ನಿಯಮಿತವಾಗಿ ನಡೆಯಬೇಕೆಂದು ಸೂಚಿಸಿದರು. ಇದರಲ್ಲಿ ಭಾಗವಹಿಸಿದ ಎಲ್ಲರೂ ಒಪ್ಪಿದ ಸೂಚನೆಯಿದು.

ಕಾರ್ಯಾಗಾರದ ನಂತರ ಮರುದಿನ ಎಲ್ಲರನ್ನೂ ಸಾಂತಾಕ್ಲಾರಾಕ್ಕೆ ಕರೆದೊಯ್ಯಲಾಯಿತು. ಈ ನಗರದಲ್ಲಿ ಅಕ್ಟೋಬರ್ 17 ರಂದು ಚೆಗುವಾರರವರ ದೇಹದ ಅವಶೇಷಗಳನ್ನು ಹುಗಿದಿಟ್ಟ ಸ್ಮಾರಕಕ್ಕೆ ಭೇಟಿಯ ವ್ಯವಸ್ಥೆಯಾಗಿತ್ತು. ಹವಾನದಿಂದ 300 ಕಿ.ಮಿ. ದೂರದಲ್ಲಿರುವ ಈ ನಗರ ಕ್ಯೂಬಾ ಕ್ರಾಂತಿಯ ವೇಳೆ ಚೆ ನೇತೃತ್ವದ ಪಡೆಗಳ ಒಂದು ಪ್ರಮುಖ ಮಿಲಿಟರಿ ವಿಜಯದ ರಣಾಂಗಣವಾಗಿತ್ತು. ಇಲ್ಲಿ ಒಂದು ಬೃಹತ್ ಚೆ ಪ್ರತಿಮೆಯಿದ್ದು ಎಲ್ಲಾ ಪ್ರತಿನಿಧಿಗಳ ಪರವಾಗಿ ಅಲ್ಲಿ ಒಂದು ಹೂಮಾಲೆಯನ್ನು ಅರ್ಪಿಸಲಾಯಿತು. ಬೊಲಿವಿಯಾದಲ್ಲಿ ಸಾವನ್ನಪ್ಪಿದ ಚೆ ಮತ್ತು ಅವರ ಸಂಗಾತಿಗಳ ಅವಶೇಷಗಳನ್ನಿಟ್ಟಿದ್ದ ಜಾಗದಲ್ಲಿ ಪ್ರತಿನಿಧಿಗಳು ಶ್ರದ್ಧಾಂಜಲಿ ಅರ್ಪಿಸಿದರು. ಚೆ ಹುತಾತ್ಮರಾದ 30ನೇ ವಾರ್ಷಿಕಾಚರಣೆಯ ಸ್ಮರಣಾರ್ಥ ನಡೆದ ಈ ಅಂತರ್ರಾಷ್ಟ್ರೀಯ ಸಮಾರಂಭಕ್ಕೆ ಒಂದು ಸೂಕ್ತ ಸಮಾರೋಪ ಅದು.

○

ಜಾಗತೀಕರಣ ಅಂದರೆ ವಿದೇಶಿ ಕಂಪನಿಗಳಿಗೆ ಅನುಕೂಲ ಕಲ್ಪಿಸುವುದೇ?

ಇ.ಸಿ.ಐ.ಎಲ್.ನ್ನು ವಂಚಿಸಿದ ವ್ಯವಹಾರದ ಬಗ್ಗೆ ಪ್ರಧಾನಿಗೆ ಸಿಪಿಐ(ಎಂ) ಸಂಸತ್ ಸದಸ್ಯರ ಪತ್ರ

ಜಾಗತೀಕರಣ ಎಂದರೆ ವಿಶ್ವಮಟ್ಟದಲ್ಲಿ ಸ್ಪರ್ಧೆ, ಭಾರತೀಯ ಕಂಪನಿಗಳು ಸ್ಪರ್ಧಾತ್ಮಕತೆ ಹೆಚ್ಚಿಸಿಕೊಂಡರೆ ಇದರಿಂದ ಭಯಪಡ ಬೇಕಾಗಿಲ್ಲ-ಇದು ನವ್ಯ ಉದಾರೀಕರಣ ಪರ ಮಂತ್ರಿ ಮಾಗಧರು ಸದಾ ಹೇಳುವ ಮಾತುಗಳು. ಆದರೆ ಇದು ಶುದ್ಧ ಸುಳ್ಳು. ಇದಕ್ಕೆ ಇತ್ತೀಚಿನ ಉದಾಹರಣೆ ಪರಿಸರ ಮಾಲಿನ್ಯ ಮಾಪಕ ಇಲೆಕ್ಟ್ರಾನಿಕ್ ಯಂತ್ರಗಳ ಖರೀದಿಯ ಘಟನೆ. ಸಿಪಿಐ(ಎಂ) ಸಂಸತ್ ಸದಸ್ಯ ಜೇಬನ್ ರಾಯ್ ಇದನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಕೇಂದ್ರ ಮಾಲಿನ್ಯ ಹತೋಟಿ ಮಂಡಳಿಗೆ ತನ್ನ ವಿವಿಧ ಪ್ರಯೋಗಾಲಯಗಳಲ್ಲಿ ಬಳಸಲು 34 ಪರಿಸರ ಮಾಲಿನ್ಯ ಮಾಪಕ ಇಲೆಕ್ಟ್ರಾನಿಕ್ ಯಂತ್ರಗಳು ಬೇಕಾಗಿತ್ತು. ಆದರೆ ಮಂಡಳಿ ಸಾರ್ವಜನಿಕ ವಲಯದ ಸಂಸ್ಥೆ ಭಾರತ ಇಲೆಕ್ಟ್ರಾನಿಕ್ಸ್ ನಿಗಮದ (ಇಸಿಐಎಲ್) ಅತಿ ಕಮ್ಮಿ ದರದ ಹಾಗೂ ಅತ್ಯುತ್ತಮ ಮಟ್ಟದ ಯಂತ್ರಗಳನ್ನು ಬಿಟ್ಟು ವಿದೇಶೀ ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಈ ಆರ್ಡರನ್ನು ಕೊಡಲು ನಿರ್ಧರಿಸಿದೆ. ಈ ವ್ಯವಹಾರದ ಮೊತ್ತ ಸುಮಾರು 4 ಕೋಟಿರೂ.

ಇ.ಸಿ.ಐ.ಎಲ್.ನ ವಿಜ್ಞಾನಿಗಳು, ತಂತ್ರಜ್ಞರು, ಅತ್ಯಾಧುನಿಕ ಗುಣಮಟ್ಟದ ಇಲೆಕ್ಟ್ರಾನಿಕ್ ಯಂತ್ರಗಳನ್ನು ರೂಪಿಸಿ ತಯಾರಿಸುತ್ತಿದ್ದಾರೆ. ಇವು ಎಲ್ಲಾ ದೃಷ್ಟಿಯಿಂದಲೂ ವಿದೇಶಿ ಯಂತ್ರಗಳಿಗಿಂತ ಉತ್ತಮವಾಗಿದ್ದು ವಿದೇಶಿ ವಿನಿಮಯವನ್ನು ಉಳಿಸುವಂತವು. ಆದರೆ ಸರ್ಕಾರದ ಪರಿಸರ ಇಲಾಖೆಯ ವ್ಯಾಪ್ತಿಯೊಳಗೆ ಬರುವ ಪರಿಸರ ಮಾಲಿನ್ಯ ಹತೋಟಿ ಮಂಡಳಿ ವಿದೇಶಿ ಕಂಪನಿಯನ್ನೇ ಆರಿಸಿಕೊಂಡಿದೆ. ಈ ಕುರಿತಂತೆ ಇ.ಸಿ.ಐ.ಎಲ್.ನ ವಿಜ್ಞಾನಿಗಳು, ತಂತ್ರಜ್ಞರಿಗೆ ಸರಕಾರದ ನಿಲುವಿನ ಬಗ್ಗೆ ಬಹಳ ಬೇಸರವಾಗಿದೆ ಎಂದು ಜೇಬನ್ ರಾಯ್ ಪ್ರಧಾನಿಗಳಿಗೆ ಬರೆದ ಪತ್ರದಲ್ಲಿ ಅವರ ಗಮನ ಸೆಳೆದಿದ್ದಾರೆ.

ವಾಸ್ತವವಾಗಿ ಆರಂಭದಿಂದಲೇ ಪರಿಸರ ಮಾಲಿನ್ಯ ಹತೋಟಿ ಮಂಡಳಿ ಈ ಆರ್ಡರ್ ದೇಶೀ ಘಟಕಕ್ಕೆ ಸಿಗದಂತೆ ಮಾಡಲು ಸರ್ವಪ್ರಯತ್ನ ನಡೆಸಿದಂತಿದೆ. ಅಸಂಬದ್ಧವೆನಿಸುವ ಹಲವು ಶರತ್ತುಗಳನ್ನು ಹಾಕಿ ಇ.ಸಿ.ಐ.ಎಲ್. ಇದರಲ್ಲಿ ಸ್ಪರ್ಧಿಸದಂತೆ ಮಾಡಲು ಪ್ರಯತ್ನಿಸಲಾಯಿತು. ವಾಸ್ತವವಾಗಿ ವಿಶ್ವದ ಹೆಚ್ಚಿನ ಕಂಪನಿಗಳು 'ಸಿಂಗಲ್ ಬೀಮ್' ಉಪಕರಣಗಳನ್ನು ತಯಾರಿಸುತ್ತಿದ್ದರೂ ಮಂಡಳಿ 'ಡಬಲ್ ಬೀಮ್' ಉಪಕರಣ ಬೇಕು ಎಂದಿತು. ಇ.ಸಿ.ಐ.ಎಲ್.ನ ಸಂಶೋಧನಾ ವಿಭಾಗ ಇಂತಹ AAS ಉಪಕರಣಗಳನ್ನು ರೂಪಿಸಿತು. ಇದಲ್ಲದೆ ಇ.ಸಿ.ಐ.ಎಲ್.ನ ದರ ಅತ್ಯಂತ ಕಮ್ಮಿಯಿತ್ತು. ಸಹಜವಾಗಿಯೇ ಆರ್ಡರ್ ಇ.ಸಿ.ಐ.ಎಲ್.ಗೆ ಬರಬೇಕಾಗಿತ್ತು. ಆಗ ಮಂಡಳಿ ಇನ್ನೊಂದು ಉಪಾಯ ಹೂಡಿತು.

ಈ ರಂಗದಲ್ಲಿ ಕನಿಷ್ಟ ಎರಡು ವರ್ಷಗಳ ಅನುಭವವಿರುವ ಕಂಪನಿ ಮಾತ್ರವೇ ಸ್ಪರ್ಧಿಸಲು ಅರ್ಹ ಎಂಬ ಹೊಸ ಶರತ್ತು ಹಾಕಿತು. ಇ.ಸಿ.ಐ.ಎಲ್. ಇತ್ತೀಚೆಗಷ್ಟೇ ಈ 'ಡಬಲ್ ಬೀಮ್' ಉಪಕರಣವನ್ನು ರೂಪಿಸಿದ್ದು ಈ ಶರತ್ತು ಪೂರೈಸಲಾಗಲಿಲ್ಲ. ಆದರೆ ಇನ್ನಷ್ಟು ಆತಂಕದ ಸಂಗತಿಯೆಂದರೆ ಕೊನೆಗೂ ಈ ಆರ್ಡರ್ ಪಡೆದ ವಿದೇಶೀ ಕಂಪನಿಯೂ ಈ ಶರತನ್ನು ಪೂರೈಸಿರಲಿಲ್ಲ. ಅದಕ್ಕೂ ಎರಡು ವರ್ಷಗಳ ಅನುಭವವಿಲ್ಲ. ಪರಿಸರ ಮಾಲಿನ್ಯ ಹತೋಟಿ ಮಂಡಳಿಯ ಈ ಕೃತ್ಯದಿಂದಾಗಿ ದೇಶಕ್ಕೆ ಹಲವು ನೀತಿಯಲ್ಲಿ ನಷ್ಟವಾಗಿದೆ.

ಮೊದಲನೆಯದಾಗಿ, ದೇಶೀ ಉನ್ನತ ಇಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಬೆಳವಣಿಗೆಯನ್ನು ಸಾಯಿಸುವ ಕ್ರಮ ಇದು. ಇದರಿಂದ ವಿದೇಶಿ ಉಪಕರಣಗಳ ಬೆಲೆ ಹೆಚ್ಚಾಗಲು ಹೆಚ್ಚು ಸಮಯ ಬೇಕಾಗುವುದಿಲ್ಲ.

ಎರಡನೆಯದಾಗಿ, ಮಾಲಿನ್ಯ ಹತೋಟಿ ಮಂಡಳಿ ಮೊದಲ ಹಂತಕ್ಕಷ್ಟೇ ಈ ಉಪಕರಣಗಳಿಗೆ ಆರ್ಡರ್ ನೀಡಿದೆ. ಇನ್ನೂ ಎರಡು ಹಂತಗಳಿದ್ದು ಅವೂ ವಿದೇಶಿ ಕಂಪನಿಗಳಿಗೆ ಹೋಗುವ ಸಾಧ್ಯತೆಯೇ ಹೆಚ್ಚು.

ಮೂರನೆಯದಾಗಿ, ಇದು ಅನಗತ್ಯವಾಗಿ ವಿದೇಶಿ ವಿನಿಮಯ ಹೊರ ಹರಿದು ಹೋಗಲು ಕಾರಣವಾಗುತ್ತದೆ. ಇ.ಸಿ.ಐ.ಎಲ್.ನ ಉತ್ಪಾದನೆಯಲ್ಲಿ ವಿದೇಶೀ ವಿನಿಮಯ ಪ್ರಮಾಣ 5% ಮಾತ್ರ. ವಿದೇಶಿ ಕಂಪನಿಗಳದ್ದು 100%

ಕೊನೆಯದಾಗಿ ವಿದೇಶಿ ಯಂತ್ರಗಳ ಉಸ್ತುವಾರಿ ಅತ್ಯಂತ ಖರ್ಚಿನ ಬಾಬ್ತು ಎಂಬುದು ಎಲ್ಲರ ಅನುಭವ. ವಾಸ್ತವವಾಗಿ ವಿದೇಶೀ ಇಲೆಕ್ಟ್ರಾನಿಕ್ ಯಂತ್ರಗಳನ್ನು ತರಿಸಿಕೊಂಡವರೂ ಅದರ ನಿಯಮಿತ ಉಸ್ತುವಾರಿಗೆ ಇ.ಸಿ.ಐ.ಎಲ್. ಬಳಿಗೇ ಬರುತ್ತಿದ್ದಾರೆ.

ಆದ್ದರಿಂದಲೇ ಸಿಪಿಐ(ಎಂ) ಸಂಸತ್ ಸದಸ್ಯ ಜೇಬನ್ ರಾಯ್ ಪ್ರಧಾನ ಮಂತ್ರಿಗಳು ಇದರಲ್ಲಿ ಮಧ್ಯೆ ಪ್ರವೇಶಿಸಿ ಭಾರತದ ಪ್ರತಿಷ್ಠೆಯ ಇಲೆಕ್ಟ್ರಾನಿಕ್ಸ್ ಉದ್ದಿಮೆಯನ್ನು ಉಳಿಸಲು ಅಗತ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಪತ್ರ ಬರೆದಿದ್ದಾರೆ. ಅಗತ್ಯವೆನಿಸಿದರೆ ಒಂದು ನಿಷ್ಪಕ್ಷಪಾತ ವೈಜ್ಞಾನಿಕ/ತಾಂತ್ರಿಕ ಸಮಿತಿಗೆ ಇದನ್ನು ಒಪ್ಪಿಸಿ ವಿಭಿನ್ನ ಉತ್ಪಾದಕರ ಉಪಕರಣಗಳ ಗುಣಮಟ್ಟದ ಬಗ್ಗೆ ಪರಿಶೀಲಿಸಬೇಕು ಎಂದೂ ಅವರು ಆಗ್ರಹ ಪಡಿಸಿದ್ದಾರೆ. ಈಗ ಹಲವಾರು ಅಧಿಕಾರಶಾಹಿಗಳು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಕೈ ಮಿಲಾಯಿಸಿ ಉನ್ನತ ತಂತ್ರಜ್ಞಾನದ ರಂಗ ಗಳಲ್ಲಿ ದೇಶೀ ಪ್ರಯತ್ನಗಳ ಕುತ್ತಿಗೆ ಹಿಚುಕಲು ಪ್ರಯತ್ನಿಸುತ್ತಿರುವುದರಿಂದ ಇಂತಹ ಕ್ರಮ ಅತ್ಯಗತ್ಯ ಎಂದು ಜೀವನ್ ರಾಯ್ ವಾದಿಸಿದ್ದಾರೆ.

ಅಣಕ — ಶರತ್ ಚಂದ್ರ

ಏಣಿಯೇ ಎದ್ದು ಬಂದು ಒದ್ದಾಗ ....

'ಹತ್ತಿದ ಮೇಲೆ ಏಣಿ ಒದ್ದ' ಎಂಬ ನಾಣ್ನುಡಿ ರಿವರ್ಸ್ ಆಗುವ ಕಾಲ ಬಂದಂತಿದೆ. ಪೇಪರ್‌ಗಳಲ್ಲೆಲ್ಲಾ ಹತ್ತಿದವರನ್ನು ಏಣಿಯೇ ಒದ್ದ ಬಗ್ಗೆ, ಹತ್ತಿದವರ ಜತೆ ಏಣಿಯೂ ಹತ್ತಲು ಪ್ರಯತ್ನಿಸುವ ಸುದ್ದಿಯೋ ಸುದ್ದಿ. ಇದೆಲ್ಲಾ ಆರಂಭವಾದದ್ದು ಬಿಎಸ್‌ಪಿಯ ಕಾನ್ಷಿರಾಮ್, ಮಾಯಾವತಿ ಬಿಜೆಪಿ ಜತೆ ಸಹಕಾರ ಸಮರ್ಥಿಸಿಕೊಳ್ಳುತ್ತಾ, ಏಣಿ ಯಾವುದಾದರೇನು, ಹತ್ತಲು ಸಿಕ್ಕರಾಯಿತು ಎಂದಾಗ. ಏಣಿಯೇ ಅವರಿಗೆ ಒದ್ದಿದ್ದು ಈಗಾಗಲೇ ಹಳೆಯ ಕಥೆ. ಈಗ ಬಿಎಸ್‌ಪಿಯವರು ಏಣಿಯನ್ನು ಎಳೆದು ಹಾಕಲು ಒದ್ದಾಡುತ್ತಿದ್ದಾರೆ.

ಏಣಿ ಒದೆಯುವುದರ ಕಥೆ ಉತ್ತರಪ್ರದೇಶಕ್ಕೇ ಮುಗಿಯಲಿಲ್ಲ. ಗುಜರಾತಿನಲ್ಲೂ ಕಾಂಗ್ರೆಸ್‌ನವರು ಆರ್‌ಜೆಪಿಗೆ ಏಣಿ ತೆಗೆಯುವ ಏಣಿಯೇ ಒದೆಯುವ ಕೆಲಸದಲ್ಲಿ ತೊಡಗಿದ್ದಾರೆ. ಈಗ ಏಣಿನೇ ಮೇಲೆ ಬರುತ್ತದಂತೆ.

ಕೇಸರಿ ತಾತ ಸಹ ಕೇಂದ್ರದಲ್ಲಿ 'ಏಣಿಯೇ ಎದ್ದು ಬಂದು ಒದೆಯುವ' ಏಣಿ ತೆಗೆಯುವ ಬೆದರಿಕೆ ಹಾಕ್ತಾರ - ಬೇಜಾರಾದಾಗಲಲ್ಲ. ಬೇರೆ ಯಾರಾದರೂ ಏಣಿಯಾದರೆ ತಾನೇ ಮೇಲೆ ಹೋಗ್ತೇನೇ ಅಂತಾರೆ. ಏಣಿ ತೆಗೆಯುವುದು, ಏಣಿಯೇ ಎದ್ದು ಬಂದು ಒದೆಯುವ ತಂತ್ರಜ್ಞಾನವನ್ನು ಪಕ್ವಗೊಳಿಸಿದ ಬಿಜೆಪಿಯ ಪೈಪೋಟಿ ಕಂಡು ಈಗ ಹೌಹಾರಿದ್ದಾರೆ.

ಅದಿರಲಿ. ಕೇಸರಿ ತಾತ ಇತ್ತೀಚೆಗೆ ಬೆಂಗಳೂರಿಗೆ ಬಂದಾಗ ಅವರ ಭಾರಿ ಕಟೌಟ್, ಅವರು ಮಾತನಾಡಿದ ಸಮಾರಂಭದಲ್ಲಿ ಪೂರ್ತಿ ಆಗಿರಲಿಲ್ಲ. ಕಟೌಟ್ ಕಲಾವಿದರು ಸಮಾರಂಭ ಆರಂಭವಾಗುವ ಹೊತ್ತಿಗೆ ಏಣಿ ಹತ್ತಿ 'ತಲೆ ಇಲ್ಲದ' ಕೇಸರಿ ರೆಡಿ ಮಾಡಿಬಿಟ್ಟಿದ್ದರು. ಸಮಾರಂಭ ಆರಂಭವಾಗಿ ಅರ್ಧ ಗಂಟೆಯವರೆಗೆ 'ತಲೆ ಇಲ್ಲದ' ಕೇಸರಿ ಕಂಗೊಳಿಸುತ್ತಿತ್ತಂತೆ. ಅರ್ಧ ಗಂಟೆ ನಂತರ 'ತಲೆ' ಬಂತಂತೆ. ಇದೂ ಒಂದು ರೀತಿ 'ಏಣಿಯೇ ಒದೆಯುವ' ಕೇಸೇ ಅಲ್ಲವೇ?

ಆದರೆ ನಿಜವಾಗಲೂ ವಿಶಿಷ್ಟ ಕೇಸು ಸಿಬಿಐ ಡೈರೆಕ್ಟರ್ ಶರ್ಮಾರದ್ದು. ಗೌಹಾತಿಗೆ ಯಾವುದೋ ಕೇಸಲ್ಲಿ ಕೋರ್ಟಿಗೆ ಹಾಜರಾಗಲು ಹೋಗಿದ್ದವರು ವಿಮಾನ ಹತ್ತುವಾಗ ಏಣಿಯಿಂದ ಜಾರಿ ಬಿದ್ದು ಫ್ರಾಕ್ಚರ್ ಮಾಡಿಕೊಂಡಿದ್ದಾರೆ. ಎಲ್ಲಾ ಕಡೆಯೂ ಮೈಯೆಲ್ಲಾ ಕಣ್ಣಾಗಿ ಓಡಾಡುವ ಸಿಬಿಐನವರಿಗೂ ಏಣಿ ಎದ್ದು ಬಂದು ಒದೆಯಲಾರಂಭಿಸಿದರೆ ದೇಶದಗತಿ ಏನು? ಹತ್ತಿದ ಮೇಲೆ ತನ್ನನ್ನು ಒದೆಯಬಹುದೆಂದು, ಏಣಿ ಮುನ್ನೆಚ್ಚರಿಕೆ ತೆಗೆದುಕೊಂಡಿತೆ?

ಅದೇನೇ ಇರಲಿ, ಏಣಿ ಹತ್ತುವಾಗ, ಒದೆಯುವ ಉದ್ದೇಶ ಇದ್ದರೆ, ಏಣಿಯೇ ನಿಮಗೆ ಒದೆಯದಂತೆ ಹುಷಾರಾಗಿ ಇರುವುದು ಒಳ್ಳೆಯದು.

ಅಕ್ಟೋಬರ್ ಕ್ರಾಂತಿ ಬಗ್ಗೆ ವಿಶ್ವಕವಿ ರವೀಂದ್ರ ನಾಥ ಟಾಗೋರ್, 1930 ರಲ್ಲಿ ರಷ್ಯಾ ಭೇಟಿ ಸಂದರ್ಭದಲ್ಲಿ

"ನಾನೀಗ ರಷ್ಯಾದಲ್ಲಿದ್ದೇನೆ. ಒಂದು ವೇಳೆ ನಾನು ಇಲ್ಲಿಗೆ ಬರದೇ ಇದ್ದಿದ್ದರೆ ನನ್ನ ಜೀವನಯಾತ್ರೆ ಅಪೂರ್ಣವಾಗುತ್ತಿತ್ತು. ಇಲ್ಲಿನ ಜನತೆಯ ಅಪೂರ್ವ ದಿಟ್ಟತನ ಮೊದಲ ನೋಟಕ್ಕೇ ನನ್ನನ್ನು ಆಕರ್ಷಿಸಿತು. ಹೊಸ ಜಗತ್ತೊಂದರ ನಿರ್ಮಾಣಕ್ಕೆ ಅವರು ಪಣಬದ್ಧರಾಗಿದ್ದಾರೆ. ಇಡೀ ಜಗತ್ತೇ ಅವರ ಶತ್ರು ಆಗಿರುವುದರಿಂದ ವ್ಯರ್ಥವಾಗಿ ಕಳೆಯಲು ಅವರಿಗೆ ವೇಳೆಯೇ ಇಲ್ಲ. ಮುಗ್ಧತೆ ಹಾಗೂ ದೈನ್ಯತೆಯಲ್ಲಿ ಮುಳುಗಿದ ಲಕ್ಷಾಂತರ ಜನರನ್ನು ಅಕ್ಷರಸ್ಥರನ್ನಾಗಿ ಮಾಡುವುದು ಮಾತ್ರವೇ ಅಲ್ಲ ಅವರಿಗೆ ಮಾನವತೆಯ ಘನತೆಯನ್ನೂ ಕೊಡಿಸಲು ಸಾಧ್ಯ ಎನ್ನುವುದನ್ನು ನಾನು ನನ್ನ ಕಣ್ಣಾರೆ ನೋಡದಿದ್ದರೆ ನಂಬುತ್ತಲೇ ಇರಲಿಲ್ಲ"

ವಾರದ ವ್ಯಂಗ್ಯ ಚಿತ್ರ



ಕೊನೆಗೆ ನಿಮಗೆ ಮೇಜೇ, ಕುರ್ಚಿ ಅವರಿಗೆ

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿಯವರ ವ್ಯಂಗ್ಯ

ಪುಸ್ತಕ ಪರಿಚಯ - ವಿಶ್ವ ಕುಂದಾಪುರ

ನಾಜಿ ಕ್ರೌರ್ಯದ ಫ್ಲಾಶ್ ಬ್ಯಾಕ್‌ಗಳು

ಕೊನೆಯ ತೀರ್ಪು
(ನ್ಯೂರೆಂಬರ್ಗ್ ದಿನಚರಿ)
ಮೂಲ: ಬೋರಿಸ್ ಪೊಲೆವಾಯ್
ಅನುವಾದ: ಎಚ್.ಎಸ್.ಮೂರ್ತಿ
ಪ್ರಕಾಶಕರು: ನವಕರ್ನಾಟಕ ಪ್ರಕಾಶನ
ಪುಟಗಳು: IV+436, ಬೆಲೆ : 40 ರೂ

ಅಡಾಲ್ಫ್ ಷ್ಲೀಕ್ ಗ್ರೂಬರ್-ಇದು ಒಬ್ಬ ವ್ಯಕ್ತಿಯ ಹೆಸರು. ಹೀಗೆಂದರೆ ಯಾರಿಗೂ ಗೊತ್ತಾಗಲಿಕ್ಕಿಲ್ಲ. ಈ ಮನುಷ್ಯ ಇನ್ನೊಂದು ಹೆಸರಿನಿಂದ ಪರಿಚಿತ. ಹಾಗನ್ನುವುದಕ್ಕಿಂತ ಕುಖ್ಯಾತ ಎನ್ನುವುದೇ ಸರಿ. 'ಹಿಟ್ಲರ್' ಎನ್ನುವುದೇ ಆ ಹೆಸರು. ಇಡೀ ಇಳೆಯನ್ನು ತನ್ನ ಕೈಗೊಂಬೆಯಾಗಿರಿಸಿಕೊಳ್ಳಲು ಹೊರಟಿದ್ದ ಭೂಪ ಈತ. ಇಂಥ ಒಬ್ಬ ದುರಾಸೆಯ ವ್ಯಕ್ತಿ ತನ್ನ 'ಮಹತ್ವಾಕಾಂಕ್ಷೆ' ಈಡೇರಿಸಿಕೊಳ್ಳಲು ತುಳಿದ ಕ್ರೂರ ಹಾದಿಯ ಹಿನ್ನೋಟ ಮತ್ತು ಆ ದಾರಿಯನ್ನು ತುಳಿದ ಘಾತುಕ ಜನರಿಗೆ ಹಾಗೂ ಆ ಸಿದ್ಧಾಂತಕ್ಕೆ ವಿವೇಕಿಗಳು ವಿಧಿಸಿದ ಶಿಕ್ಷೆಯ ಪರಿಚಯದಂತಿರುವುದೇ 'ಕೊನೆಯ ತೀರ್ಪು' ಗ್ರಂಥ.

ಒಂದು ರೀತಿಯಲ್ಲಿಇದು ಹಿಟ್ಲರ್‌ನ ರಾಜಕೀಯ ಸಿದ್ಧಾಂತ ನಾಜಿವಾದದ ಬಗ್ಗೆ, ಅದು ಎಸಗಿದ ಘನಘೋರ ದುರಂತದ ಬಗ್ಗೆ ನೇರ ವಿವರಣೆಯೇನೂ ಅಲ್ಲ. ಆದರೆ ಆ ಕೆಲಸವೂ ಇಲ್ಲಿ ಆಗಿದೆ.

ಎರಡನೇ ಮಹಾಯುದ್ಧದ ಕೊನೆಯಲ್ಲಿ, ಮಾನವ ಇತಿಹಾಸದಲ್ಲಿ ಅದೇ ಮೊದಲ ಬಾರಿಗೆ ಯುದ್ಧಾಪರಾಧದ ಬಗ್ಗೆ ವಿಶೇಷ ರೀತಿಯಲ್ಲಿ ವಿಚಾರಣೆ ನಡೆಯುವ ವಿಧಿವಿಧಾನ ಆರಂಭವಾಯಿತು. ಹಿಂದೆ ನೆಪೋಲಿಯನ್ ಮತ್ತು ಎರಡನೇ ವಿಲ್‌ಹೆಲ್ಮ್ ಅಪರಾಧಗಳ ಬಗ್ಗೆವಿಚಾರಣೆ ನಡೆದಿದ್ದವಾದರೂ ಅವು ವಾಸ್ತವವಾಗಿ ಅಪರಾಧಿಗಳಿಗೇ ನೆರವಾಗಿದ್ದವು.

ಪ್ರಪಂಚದ ಮೊಟ್ಟಮೊದಲ ಜೇಬುಗಡಿಯಾರ ತಯಾರಿಕೆ ಸ್ಥಳವೆಂಬ ಖ್ಯಾತಿಯ, ಜರ್ಮನಿಯ ನ್ಯೂರೆಂಬರ್ಗ್ ನಗರ ವಿಚಾರಣೆಯ ಕೇಂದ್ರ ಸ್ಥಳ. ಪ್ರಪಂಚದ ಖ್ಯಾತ ಸುದ್ದಿ ಸಂಸ್ಥೆಗಳು, ಪ್ರಮುಖ ಪತ್ರಿಕೆಗಳು, ಇತರ ಸಂವಹನ ಮಾಧ್ಯಮಗಳ ಪ್ರತಿನಿಧಿಗಳು ವಿಚಾರಣೆಯ ಪ್ರತ್ಯಕ್ಷ ವರದಿಗಾಗಿ ಧಾವಿಸಿದ್ದರು.

ಇಡೀ ಜಗತ್ತನ್ನು ಫ್ಯಾಸಿಸಂ ಕ್ರೌರ್ಯದ ದವಡೆಯಿಂದ ಪಾರು ಮಾಡಿದ, ಆಗಿನ ಕಮ್ಯುನಿಸ್ಟ್ ಸೋವಿಯತ್ ಒಕ್ಕೂಟದ ದೈನಿಕ 'ಪ್ರಾವ್ದಾ'ದ ಬಾತ್ಮೀದಾರರ ಮುಖ್ಯಸ್ಥನಾಗಿ 'ಸಾಕ್ಷಿ' ಆಗಿದ್ದವರು ಬೋರಿಸ್ ಪೊಲೆವಾಯ್.

ತನ್ನ ಜನಾಂಗದ ಶ್ರೇಷ್ಠತೆಯ ಹೆಸರಿನಲ್ಲಿ ಇತರರನ್ನು ಕ್ರೂರವಾಗಿ ನಿರ್ಮೂಲನ ಮಾಡುತ್ತಾ ನಾಗರಿಕ ಜಗತ್ತಿಗೆ ಆಘಾತ ನೀಡಿದ್ದ ಕುಕರ್ಮಿ ಹಿಟ್ಲರ್ ಸೋಲಿನ ಶಾಕ್ ತಾಳಲಾರದೆ ಸ್ವಇಚ್ಛೆಯಿಂದ ಮೃತ್ಯುಲೋಕಕ್ಕೆ ಪರಾರಿಯಾದರೂ ಆತನ ಮಷ್ಟಕೂಟದ ಸದಸ್ಯರು ಇನ್ನೂ ಇದ್ದರು. ಪ್ರಚಂಡ ಸುಳ್ಳಿಗೆ ಪರ್ಯಾಯ ಪದವೇ ಆಗಿ ಹೋಗಿರುವ ಗೊಬೆಲ್ಸ್(ಜೋಸೆಫ್ ಗೋಬೆಲ್ಸ್), ಅಲ್ಫ್ರೆಡ್ ರೋಸೆನ್ ಬರ್ಗ್, ಫ್ರಿಟ್ಸ್ ಸಾಕೆಲ್, ಅಲ್ಬರ್ಟ್ ಸ್ಪೀರ್, ಹರ್ಮನ್ ಗೋರಿಂಗ್, ರಾಬರ್ಟ್ ಲೇ, ರುಡಾಲ್ಫ್ ಹೆಸ್, ವಿಲ್ ಹೆಲ್ಮ್ ಕೈಟೆಲ್ - ಈ ದುರುಳ ಕೂಟದವರಲ್ಲಿ ಕೆಲವರು. ಹಿಟ್ಲರ್ ಸಹಿತ ಇವರೆಲ್ಲಾ ಪ್ರಮುಖ ಯುದ್ಧಾಪರಾಧಿಗಳು. ಇವರಲ್ಲಿ ಬದುಕುಳಿದವರು ಅಂತರ್ರಾಷ್ಟ್ರೀಯ ನ್ಯಾಯಮಂಡಳಿಯ ಕಟಕಟೆಗೆ. ಹಾಗೆ ನೋಡ ಹೋದರೆ, ಲೇಖಕರೇ ಹೇಳುವಂತೆ ಕರಾಳವಾದ ಜನಾಂಗದ್ವೇಷಿ ಸಿದ್ಧಾಂತಗಳ ಜನ್ಮ ಸ್ಥಳವೂ ನ್ಯಾಷನಲ್ ಸೋಷಲಿಸಂನ(ನಾಜಿಸಂ) ತೊಟ್ಟಿಲೂ ಆಗಿದ್ದ ನ್ಯೂರೆಂಬರ್ಗ್ ಅದರ ಗೋರಿಯಾಗಲು ಸಿದ್ಧಗೊಳ್ಳುತ್ತಿತ್ತು(ಪುಟ 76).

ಐತಿಹಾಸಿಕ ವಿಚಾರಣೆ ಅವಧಿಯಲ್ಲಿ ಮಂಡಿಸಲಾಗುವ ಸಾಕ್ಷ್ಯಗಳು ಮತ್ತು ವಾದಗಳು ಓದುಗರ ಮುಂದೆ ಜನಾಂಗವಾದದ ಕ್ರೌರ್ಯದ ಚಿತ್ರಣವನ್ನು ಬಿಡಿಸಿ ಚಿತ್ತವನ್ನು ತಲ್ಲಣಗೊಳಿಸುತ್ತದೆ. ಎದೆ ಝಲ್ಲೆನಿಸುವಂತೆ ಮಾಡುತ್ತವೆ. ನಿರ್ದಿಷ್ಟ ಸಾಕ್ಷ್ಯ-ವಾದ ಮಂಡನೆ ಆದಾಗಲೆಲ್ಲಾ ಪೊಲೆವಾಯ್ ಆಯಾ ಘಟನಾವಳಿಗಳನ್ನು ವಿವರಿಸುತ್ತಾರೆ. ಸಿನಿಮಾ ಪರಿಭಾಷೆಯಲ್ಲಿ ಹೇಳುವುದಾದರೆ ಇದು ಒಂದು ರೀತಿಯ ಫ್ಲಾಶ್‌ಬ್ಯಾಕ್. ಇಂಥ ಹತ್ತು ಹಲವು ಫ್ಲಾಶ್ ಬ್ಯಾಕ್‌ಗಳು ಕಟುಕ ಸಿದ್ಧಾಂತವನ್ನು ಮಂಡಿಸಿದ ಬೆರಳೆಣಿಕೆಯ ದುರುಳರು ನಿರಪರಾಧಿ ಮುಗ್ಧ ಜನರ ಮೇಲೆ ನಡೆಸಿದ ಹೇಯ ದೌರ್ಜನ್ಯಗಳನ್ನು ಪರಿಚಯಿಸುತ್ತವೆ.

"ನಾವು ಒದಗಿಸುವ ಸಾಕ್ಷ್ಯ ಅಸಹ್ಯವಾಗಿರುತ್ತದೆ. ನಾನು ನಿಮ್ಮ ನಿದ್ರಾಭಂಗ ಮಾಡಿದೆ ಎಂದು ನೀವು ಹೇಳಲಿರುವಿರಿ"-ನ್ಯೂರೆಂಬರ್ಗ್ ವಿಚಾರಣೆಯ ಪ್ರಾಸ್ತಾವಿಕ ಭಾಷಣದಲ್ಲಿ ನ್ಯಾಯಮೂರ್ತಿ ರಾಬರ್ಟ್ ಜಾಕ್ಸನ್ ನುಡಿದ ಈ ಮಾತು ಬಹುಶಃ ಕರಾಳತೆಯ ಎಲ್ಲಾ ಮುಖವನ್ನು ಬಿಚ್ಚಿಡುತ್ತದೆ.

ಹೃದಯ ವಿದ್ರಾವಕ ದುರಂತಗಳ ಸರಮಾಲೆಯ ವಿವರಗಳು, ವಿಚಾರಣೆಯ ಮಾಹಿತಿಗಳು ಗಂಭೀರ. ಆದರೆ ಈ ಪತ್ರಕರ್ತ ಲೇಖಕ ಸುದ್ದಿಗಾರರ ಶಿಬಿರದಲ್ಲಿ ಮತ್ತು ನ್ಯಾಯಾಲಯದಲ್ಲಿ ನಡೆದ ಹಲವು ಸ್ವಾರಸ್ಯಕರ ಘಟನೆಗಳನ್ನು ಸಾಹಿತ್ಯಿಕವಾಗಿ ಪೋಣಿಸಿದ್ದಾರೆ. ಅಲ್ಲದೆ ಒಂದು ರೀತಿಯ ಪ್ರವಾಸ ಕಥನವೆನ್ನುವ ಭಾವನೆ ಬರುವಂತೆಯೂ ಬರೆದಿದ್ದಾರೆ. ಈ ಎರಡು ವೈಶಿಷ್ಟಗಳಿಂದಾಗಿ ಗಂಭೀರ ಗ್ರಂಥ ಓದುಗರ ಆಸಕ್ತಿಯನ್ನು ಕೆರಳಿಸುತ್ತಾ ಹೋಗುತ್ತದೆ.

'ನ್ಯೂರೆಂಬರ್ಗ್ ವಿಚಾರಣೆ' ಎಂದು ಇತಿಹಾಸ ಪ್ರಸಿದ್ಧವಾದ, ಸುಮಾರು ಒಂಭತ್ತು ತಿಂಗಳ ಕಾಲ ನಡೆದ ಇತಿಹಾಸದ ಪ್ರಮುಖ ಯುದ್ಧಾಪರಾಧಿಗಳ ಪ್ರಪ್ರಥಮ ಅಂತರ್ರಾಷ್ಟ್ರೀಯ ವಿಚಾರಣೆಯ ಅಂತ್ಯದಲ್ಲಿ ನ್ಯಾಯಾಲಯ 1946ರ ಅಕ್ಟೋಬರ್ ಒಂದರಂದು ಮಧ್ಯಾಹ್ನ ಐರೋಪ್ಯ ವೇಳೆ 3.40ಕ್ಕೆ ಶಿಕ್ಷೆಯನ್ನು ಪ್ರಕಟಿಸಿತು. ಇಡೀ ವಿಚಾರಣೆಯಲ್ಲಿ ಮಹತ್ವದ ವಿಷಯಗಳಾಗಿದ್ದುದು ಸ್ವತಃ ನಾಜಿಸಂ ಮತ್ತು ನಾಜಿ ವಿಚಾರಗಳೇ ವಿನಃ ಹಿಟ್ಲರ್ ಅಥವಾ ಅವನ ಕೈ ಕೆಳಗಿನವರಲ್ಲ. ನಾಜಿಸಮನ್ನು ಬೆತ್ತಲು ಮಾಡಿ, ಅದರ ಕುರೂಪವೆಲ್ಲ ಕಾಣುವಂತೆ ಅದನ್ನು ವಿಶ್ವದ ಮುಂದೆ ಇಡಲಾಗಿತ್ತು. (ಪು. 423)

ಇನ್ನೊಬ್ಬ ಮನುಷ್ಯನೂ ತನ್ನ ಹಾಗೆಯೇ; ಆತ/ಆಕೆಗೂ ಜೀವವಿದೆ, ನೋವಾಗುತ್ತದೆ ಎಂದು ಗೊತ್ತಿದ್ದೂ ಹಿಂಸೆ ಕೊಟ್ಟು ಖುಷಿ ಪಡುವ ಮನುಷ್ಯ ಶಿಕ್ಷೆಯ ಉರುಳು ಸಾವಿನ ಸರದಿ ತನ್ನದಾದಾಗ ಜೀವದ ಮೇಲಿನ ಪ್ರೀತಿಯಿಂದಾಗಿಯೇ ಎಂಥೆಂಥ ವರ್ತನೆ ತೋರಿಯಾರು ಎಂಬುದಕ್ಕೆ ಜಗತ್ತನ್ನೇ ನಡುಗಿಸಿದ ಅಪರಾಧಿಗಳಲ್ಲಿ ಕೆಲವರು ತೀರ್ಪನ್ನು ಕೇಳಿ ಜೊಲ್ಲು ಸುರಿಸಿದ್ದಲ್ಲದೆ ಇನ್ನು ಕೆಲವರು ನ್ಯಾಯಾಲಯದಲ್ಲೇ ಮಲಮೂತ್ರ ವಿಸರ್ಜಿಸಿದ್ದು ಸಾಕ್ಷಿಯಾಗಿದೆ.

ಮಾನವ ಜನಾಂಗದ ವಿರುದ್ಧ ನಡೆದ ಅನ್ಯಾಯದ ಕುರಿತ ಮಹತ್ವದ ವಿಚಾರಣೆಯನ್ನು ಕನ್ನಡಿಗರಿಗೆ ಪರಿಚಯಿಸಿದ ನವಕರ್ನಾಟಕ ಪ್ರಕಾಶನ ಅಭಿನಂದನಾರ್ಹವಾಗಿದೆ. ಎಚ್.ಎಸ್. ಮೂರ್ತಿ ಅವರ ಅನುವಾದ ಉತ್ತಮವಾಗಿದೆ.

ಅಂತರ್ರಾಷ್ಟ್ರೀಯ ರಾಜಕೀಯ ರಂಗದಲ್ಲಿ ನಾಜಿವಾದಕ್ಕೆ ಕೊಡಲಿಯೇಟು ಹಾಕಿದ ಸೋವಿಯತ್ ಒಕ್ಕೂಟದ ಅವಸಾನ, ಸಮಾಜವಾದದ ಹಿನ್ನಡೆ, ಸಾಮ್ರಾಜ್ಯಶಾಹಿಗಳ ಹಾರಾಟ, ಜರ್ಮನಿ ಮೊದಲಾದೆಡೆ ನವನಾಜಿವಾದ ತಲೆ ಎತ್ತುತ್ತಿರುವುದು; ಇವುಗಳ ಜತೆ ಹಿಟ್ಲರ್ ಕ್ರೌರ್ಯದ ಬಗ್ಗೆ ಇನ್ನೂ ಹೆಚ್ಚು ಮಾಹಿತಿಗಳು ಈಚೆಗೆ ಸಿಕ್ಕಿರುವುದು - ಇವುಗಳೆಲ್ಲದರ ಹಿನ್ನೆಲೆಯಲ್ಲಿ 'ಕೊನೆಯ ತೀರ್ಪು' ಮಾಹಿತಿಪೂರ್ಣ ಸಂಗ್ರಹಯೋಗ್ಯ ಮಹತ್ವದ ಪುಸ್ತಕ. ನಾಜಿವಾದ ಎಂಬ ಬೃಹತ್ ವೃಕ್ಷದ ಟಿಸಿಲಿನಂತಿರುವ ಕೋಮುವಾದ ಭಾರತದಲ್ಲಿ ಈಚಿನ ವರ್ಷಗಳಲ್ಲಿ ಹಾವಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅದರ ಅಪಾಯವನ್ನರಿಯಲು ಇದು ಸಹಕಾರಿ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.೧೨, ೧೮ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-೨೭ ಫೋನ್ ನಂ. ೨೨೬೬೪೬೨,
ವ್ಯವಸ್ಥಾಪಕ ಕಛೇರಿ: ನಂ.೨೪, ೫ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-೯ ಮುದ್ರಣ: ಕಂಠೀರವ ಆಫ್‌ಸೆಟ್, ನಂ.೬, ೭ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.೨೭